
ಜನಪದ ವಿಚಾರ

ಸಂಪುಟ ೧೮
ಜುಲೈ ೨೦೧೮
ಸಂಚಿಕೆ ೧೨



ಚುನಾವಣಾ ಭ್ರಷ್ಟತೆಯ ಬಗ್ಗೆ ಲೇಖನ ಬರೆಯುವುದಕ್ಕಿಂತ
ನೈಜೀರಿಯಾದ ಚಿನುವ ಅಚಿಬೆ ಅವರ 'ಮತದಾರ' ಕತೆ ಸೂಕ್ತವೆನಿಸಿ
ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಜುಲೈ - ೨೦೧೮
ಸಂಪುಟ - ೧೮
ಸಂಚಿಕೆ -೧೧

<u>ಸಂಪಾದಕರು</u>
ಸಂತೋಷ್ ಕೌಲಗಿ

<u>ಚಂದಾ ವಿವರ</u>
ವಾರ್ಷಿಕ : ರೂ ೨೦೦/-

<u>ಸಂಪರ್ಕ ವಿಳಾಸ</u>
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ - ೫೭೧೪೩೧
ಮಂಡ್ಯ ಜಿಲ್ಲೆ

<u>ದೂರವಾಣಿ</u>
೦೨೩೬ ೨೯೯೮೫೪
೭೮೨೯೪೮೯೧೪೭

Email : janapada@yahoo.com
web : janapada.org

ತಿಂಗಳ ಕವನ

ಮನೆಗೆ ಬಂದ ಹೆಣ್ಣು

ಮೊದಲ ದಿನ ಮೌನ ಅಳುವೇ ತುಟಿಗೆ ಬಂದಂತೆ,
ಚಿಂತೆ, ಬಿಡಿಹೂವ ಮುಡಿದಂತೆ;
ಹತ್ತು ಕಡೆ ಕಣ್ಣು ಸಣ್ಣಗೆ ದೀಪ ಉರಿದಂತೆ
ಜೀವದಲಿ ಜಾತ್ರೆ ಮುಗಿದಂತೆ.

ಎರಡನೆಯ ಹಗಲು ಇಳಿಮುಖವಿಲ್ಲ, ಇಷ್ಟು ನಗು
ಮೂಗುತಿಯ ಮಿಂಚು ಒಳಹೊರಗೆ;
ನೀರೊಳಗೆ ವೀಣೆ ಮಿಡಿದಂತೆ ಆಡಿದ ಮಾತು,
ಬೇಲಿಯಲಿ ಹಾವು ಹರಿದಂತೆ.

ಮೂರನೆಯ ಸಂಜೆ ಹೆರಳಿನ ತುಂಬ ದಂಡೆಹೂ,
ಹೂವಿಗೂ ಜೀವ ಬಂದಂತೆ;
ಸಂಜೆಯಲಿ ರಾತ್ರೆ ಇಳಿದಂತೆ; ಬಿರುಬಾನಿಗೂ
ಹುಣ್ಣಿಮೆಯ ಹಾಲು ಹರಿದಂತೆ!

–ಕೆ.ಎಸ್. ನರಸಿಂಹಸ್ವಾಮಿ

ನಿಮ್ಮೊಂದಿಗೆ

ಪ್ರಿಯ ಓದುಗರೇ,

ಇದು ಜುಲೈ ಮಾಹೆಯ ಸಂಚಿಕೆ. ಜನಪದ ವಿಚಾರವನ್ನು ಹೊಸ ರೂಪದಲ್ಲಿ ತರಲು ಪ್ರಯತ್ನಸಿಲಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಬಹುಶ: ಜನಪದ ವಿಚಾರದಲ್ಲಿ ಕಳೆದ ೧೮ ವರ್ಷಗಳಲ್ಲಿ ಮೊದಲನೆಯ ಸಲ ಕತೆಯೊಂದು ಪ್ರಕಟವಾಗುತ್ತಿದೆ. ಪ್ರಚಲಿತ ರಾಜಕೀಯ ವ್ಯವಸ್ಥೆಯ ಬಗ್ಗೆ ನಮ್ಮೆಲ್ಲ ಮಾತುಗಳು ಕ್ಲೀಶೆಯಾಗುತ್ತಿರುವಾಗ ಇಲ್ಲಿ ಪ್ರಕಟಿಸಿರುವ ಕತೆ ನಮ್ಮ ರಾಜಕೀಯ ವ್ಯವಸ್ಥೆಯನ್ನು ವಿಮರ್ಶೆ ಮಾಡಬಲ್ಲದು ಮತ್ತು ಅದಲ್ಲಿರುವ ಹುಳುಕನ್ನು ಎತ್ತಿ ತೋರಿಸಬಲ್ಲದು. ರಾಜಕೀಯವನ್ನು ಮಾತನಾಡಬಾರದೆಂಬ ಮಡಿವಂತಿಕೆಯಿಂದ ಜನ ಸಾಮಾನ್ಯರು ಹೊರಬರಬೇಕಿದೆ. ಅದರ ಬಗ್ಗೆ ಎಲ್ಲರೂ ಜವಾಬ್ದಾರಿಯಿಂದ ಮಾತನಾಡುವುದು ಅಗತ್ಯವಾಗಿದೆ. ಪ್ರಜಾಪ್ರಭುತ್ವದ ಶಕ್ತಿ ಇರುವುದೇ ಅಭಿಪ್ರಾಯ ಮಂಡನೆಯಲ್ಲಿ, ಆದರೆ ಇಂದು ನಿಜ ಅಭಿಪ್ರಾಯ ಮಂಡನೆಗಿಂತ ವಿತಂಡವಾದವೇ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಇಡೀ ದೇಶದಲ್ಲಿ ಮೆರೆಯುತ್ತಿದೆ. ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಸರಿಯಾಗಿ ಅಭಿಪ್ರಾಯ ಮಂಡಿಸುವುದನ್ನು ತಮ್ಮ ಕರ್ತವ್ಯವೆಂದು ಎಲ್ಲರೂ ಮಾಡಬೇಕಿದೆ. ಹಾಗೆ ಮಾಡದಿದ್ದರೆ ವಿತಂಡವಾದಿಗಳೆ ಸಾರ್ವಜನಿಕ ಅಭಿಪ್ರಾಯವನ್ನು ತೀರ್ಮಾನ ಮಾಡುತ್ತಾರೆ.

ಕೃಷಿಯ ಬಿಕ್ಕಟ್ಟು ದಿನದಿಂದ ದಿನಕ್ಕೆ ಬಿಗಡಾಯಿಸುತ್ತಲೇ ಹೋಗುತ್ತಿದೆ. ಈ ಮಧ್ಯೆ ಆಂಧ್ರ ಸರ್ಕಾರ ಇಡೀ ರಾಜ್ಯವನ್ನು ನೈಸರ್ಗಿಕ ಕೃಷಿಗೆ ಪರಿವರ್ತಿಸುತ್ತೇವೆಂದು ಘೋಷಣೆ ಮಾಡಿದೆ. ಅಂದರೆ ರಾಸಾಯನಿಕ ಕೃಷಿಯಲ್ಲಿ ಏನೋ ದೊಡ್ಡ ಸಮಸ್ಯೆ ಇದೆ ಎಂದು ಆಯಿತು. ಆದರೆ ನೈಸರ್ಗಿಕ ಕೃಷಿಗೆ ಇಡೀ ರಾಜ್ಯದ ಕೃಷಿ ಭೂಮಿಯನ್ನು ಒಂದೇ ಹಂತದಲ್ಲಿ ಪರಿವರ್ತಿಸುತ್ತೇವೆ ಎಂಬುದು ಅಷ್ಟೊಂದು ವ್ಯವಹಾರಿಕವಲ್ಲ. ಅದಲ್ಲದೆ ನೈಸರ್ಗಿಕ ಕೃಷಿ ಎಂಬುದು ಒಂದು ಜೀವನ ವಿಧಾನ ಎಂಬುದನ್ನು ರೈತರಿಗೆ ಮನವರಿಕೆ ಮಾಡಿಕೊಡಬೇಕಿದೆ. ನೈಸರ್ಗಿಕ ಕೃಷಿ ಮಾಡಲು ಈ ಸಂಚಿಕೆಯಲ್ಲಿ ಪ್ರಸ್ತಾಪಿಸಿರುವ 'ಐದು ಎಕರೆ ಸ್ವಾತಂತ್ರ್ಯ' ದ ಮನೋದೃಷ್ಟಿ ಬೇಕು.

ನೈಸರ್ಗಿಕ ಕೃಷಿಯನ್ನೂ ಸಹ ಇದು ಮತ್ತೊಂದು ಕೃಷಿ ತಂತ್ರಜ್ಞಾನ ಎಂದು ಸರ್ಕಾರ ಪರಿಗಣಿಸಿ ಮುಂದೆ ಒಯ್ಯಲು ನೋಡಿದರೆ ಸೋಲು ಖಂಡಿತ. ಅಲ್ಲದೆ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಂಡ ವಿಚಾರಗಳೆಲ್ಲವೂ ತನ್ನ ಸತ್ವವನ್ನು ಕಳೆದು ಕೊಂಡು ಕೇವಲ ಬಾಹ್ಯ ವ್ಯವಸ್ಥೆಯನ್ನು ಅನುಸರಿಸಿ ಹಾಳಾಗುವುದನ್ನು ನಾವು ಕಂಡಿದ್ದೇವೆ. ಈಗ ಸರ್ಕಾರಗಳು ನೈಸರ್ಗಿಕ ಕೃಷಿಯಂತಹ ವಿಚಾರವನ್ನು ಕೈಗೆತ್ತಿಕೊಂಡು ಅದನ್ನೂ ದಡ ಹತ್ತಿಸದಿದ್ದರೆ ಸಾಕು.

ವಂದನೆಗಳು,

ಮತದಾರ

ನೂರು ಲೇಖನಗಳು ಹೇಳುವುದನ್ನು ಒಂದು ಕತೆ ಹೇಳಬಲ್ಲದು, ನೂರು ಕತೆ ಹೇಳುವುದನ್ನು ಒಂದು ಕವನ ಹೇಳಬಲ್ಲದು. ಈಗಷ್ಟೆ ಒಂದು ಚುನಾವಣೆಯನ್ನು ಮುಗಿಸಿ ಮತ್ತೊಂದು ಚುನಾವಣೆಗೆ ಸಿದ್ಧರಾಗುತ್ತಿದ್ದೇವೆ. ಈ ಚುನಾವಣಾ ವ್ಯವಸ್ಥೆಯ ಬಗ್ಗೆ ಎಷ್ಟು ಮಾತನಾಡಿದರೂ ಅಷ್ಟೆ. ಅದು ಪೂರ್ತಿ ಹದಗೆಟ್ಟು ಹೋಗಿದೆ ಎನಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಗಿಂತ ಉತ್ತಮವಾದುದು ಮತ್ತೊಂದು ಕಾಣುತ್ತಿಲ್ಲ. ಆದರೆ ಭ್ರಷ್ಟಾಚಾರವು ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ರೋಗವಾಗಿ ಪರಿಣಮಿಸಿದೆ. ಇದು ಇಂದು, ನಿನ್ನೆಯದಲ್ಲ. ಸುಮಾರು ೬೦ ವರ್ಷಗಳ ಹಿಂದೆ ನೈಜೀರಿಯಾದ **ಚಿನುವ ಅಚಿಬೆ** ಈ ಕಥೆಯನ್ನು ಬರೆದಾಗ ಚುನಾವಣಾ ಭ್ರಷ್ಟತೆ ಹೀಗೆಯೇ ಇದ್ದಿರಬೇಕು. ಅಚಿಬೆ ಅದನ್ನು ಬಹಳ ಚೆನ್ನಾಗಿ ತನ್ನ ಈ ಕತೆಯಲ್ಲಿ ಚಿತ್ರಿಸಿದ್ದಾನೆ. ಈ ಕತೆಯನ್ನು ಜನಪದ ವಿಚಾರಕ್ಕಾಗಿ **ಎಚ್.ಎನ್.ರಮೇಶ** ಅವರು ಅನುವಾದಿಸಿ ಕೊಟ್ಟಿದ್ದಾರೆ. ಚುನಾವಣಾ ಭ್ರಷ್ಟತೆಯ ಬಗ್ಗೆ ಲೇಖನ ಬರೆಯುವುದಕ್ಕಿಂತ ಈ ಕಥೆಯೇ ವಾಸಿ ಎನಿಸಿತು. ಹಾಗಾಗಿ ಈ ಕತೆ ನಿಮಗಾಗಿ

ರೂಫಸ್ ಒಕೆಕೆ ಯನ್ನು ರೂಫ್ ಎಂದು ಕರೆಯುವುದು ವಾಡಿಕೆ. ಉಮೋಪಿಯಾ ಗ್ರಾಮದಲ್ಲಿ ರೂಫ್‌ನ ಬಗ್ಗೆ ಒಳ್ಳೆಯ ಅಭಿಪ್ರಾಯವಿತ್ತು. ತನ್ನ ವಯಸ್ಸಿನ ಇತರ ಹಳ್ಳಿಯ ಯುವಕರಂತೆ ಹಳ್ಳಿಯನ್ನು ತೊರೆದು ಪಟ್ಟಣದ ಜೀವನಕ್ಕೆ ಆತ ಹಪಹಪಿಸುತ್ತಿರಲಿಲ್ಲ. ಹಾಗೆಂದ ಮಾತ್ರಕ್ಕೆ ರೂಫ್ ಹಳ್ಳಿ ಗಮಾರ ಎಂದೇನೂ ಅಲ್ಲ. ಇವನು ಎರಡು ವರ್ಷಗಳ ಕಾಲ ಹತ್ತಿರದ ಬಂದರು ಪಟ್ಟಣವಾದ ಹಾರ್ಕೋರ್ಟ್‌ನಲ್ಲಿ ಸೈಕಲ್ ವ್ಯಾಪಾರಿಯಲ್ಲಿ ಅಪ್ರೆಂಟಿಸ್ ಆಗಿ ಕೆಲಸಮಾಡಿ ಸೈಕಲ್ ವ್ಯಾಪಾರ ಮತ್ತು ರಿಪೇರಿ ಬಗ್ಗೆ ಸಾಕಷ್ಟು ಪರಿಣಿತಿ ಪಡೆದಿದ್ದ. ನಂತರ ಯಾವುದಾದರೊಂದು ನಗರದಲ್ಲಿ ಸೈಕಲ್ ವ್ಯಾಪಾರ ಮತ್ತು ರಿಪೇರಿಯಲ್ಲಿ ತೊಡಗಿ ಶ್ರೀಮಂತನಾಗಬಹುದಿತ್ತು. ಆದರೆ ರೂಫ್ ಸ್ವ ಇಚ್ಛೆಯಿಂದ ಗ್ರಾಮಕ್ಕೆ ಹಿಂದಿರುಗಿ, ಅಲ್ಲಿಯ ಜನಜೀವನವನ್ನು ಈ ಕಷ್ಟದ ಸಮಯದಲ್ಲಿ ನೋಡಿಕೊಳ್ಳಬೇಕೆಂದೂ, ಸರಿಯಾದ ಮಾರ್ಗದರ್ಶನ ನೀಡಬೇಕೆಂದೂ ಯೋಚಿಸಿದ.

ಆದರೆ ಉಮೋಪಿಯಾ ಗ್ರಾಮ ರೂಫ್‌ನ ಮಾರ್ಗದರ್ಶನಕ್ಕೇನು ಹಾತೊರೆಯುತ್ತಿರಲಿಲ್ಲ. ಆ ಹಳ್ಳಿಗೆ ಈಗಾಗಲೇ ಮಾರ್ಗದರ್ಶಿಯೊಬ್ಬರು ಇದ್ದರು. ಅವರೇ ಪೀಪಲ್ಸ್ ಅಲಯನ್ಸ ಪಾರ್ಟಿಯ ಶಾಸಕರೂ, ಮಂತ್ರಿಯೂ ಆದ ಗೌರವಾನ್ವಿತ ಮಾರ್ಕಸ್ ಇಬೆ ಅವರು.

ಮಾರ್ಕಸ್ ಕಳೆದ ಚುನಾವಣೆಯಲ್ಲಿ ಪಿ.ಎ.ಪಿ ಪಕ್ಷದ ಅಭ್ಯರ್ಥಿಯಾಗಿ ಗೆಲ್ಲುವುದಲ್ಲದೆ, ಸಂಸ್ಕೃತಿ ಇಲಾಖೆಯ ಮಂತ್ರಿಯೂ ಆಗಿದ್ದರು. ಮುಂದಿನ ಚುನಾವಣೆಯಲ್ಲಿಯೂ ಅವರೇ ಗೆಲ್ಲುವುದೆಂದು ಎಲ್ಲರಿಗೂ ತಿಳಿದಿತ್ತು. ಅವರ ನಾಯಕತ್ವ ಪ್ರಶ್ನಿಸುವವರು ಅವರ ಪಕ್ಷದಲ್ಲಾಗಲೀ ಅಥವಾ ವಿರೋಧ ಪಕ್ಷದಲ್ಲಾಗಲೀ ಇರಲಿಲ್ಲ.

ನಮ್ಮ ಕತೆಯ ನಾಯಕ ರೂಫ್, ಮಾರ್ಕಸ್ ಅವರ ಬಲಗೈ ಬಂಟನಾದ. ಕ್ಷಿಪ್ರಗತಿಯಲ್ಲಿ ಚುನಾವಣೆಯ ರೀತಿ ನೀತಿಗಳನ್ನು ಮೈಗೂಡಿಸಿಕೊಂಡ. ಗ್ರಾಮ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಚುನಾವಣೆಯನ್ನು ನಡೆಸುವ ಅನುಭವ ಇವನದಾಯಿತು.

ಮುಂಬರುವ ಚುನಾವಣೆಯಲ್ಲಿಯೂ ಉಮೊಪಿಯಾ ಮತ್ತು ಸುತ್ತಮುತ್ತಲ ಗ್ರಾಮಗಳ ಚುನಾವಣಾ ಕಾರ್ಯ ರೂಫ್ ಮೇಲ್ವಿಚಾರಣೆಯಲ್ಲಿಯೇ ನಡೆಯುವುದೆಂದು ನಿರ್ಧಾರವಾಗಿತ್ತು. ರೂಫ್ ಸ್ಥಳೀಯ ಜನ ಮಟ್ಟದಲ್ಲಿ ಸಂಪರ್ಕ ಇಟ್ಟುಕೊಂಡಿದ್ದ. ಜನರ ಆಗು ಹೋಗುಗಳ ಬಗ್ಗೆ ಮತ್ತು ಅವರ ಬೇಕು-ಬೇಡಗಳನ್ನು ಗ್ರಹಿಸಿದ್ದ. ಆದ್ದರಿಂದ ಮಾರ್ಕಸ್ ಇವನನ್ನು ತನ್ನ

ಸಲಹೆಗಾರನನ್ನಾಗಿ ಮತ್ತು ಚುನಾವಣಾ ಮೇಲ್ವಿಚಾರಕನನ್ನಾಗಿ ನೇಮಿಸಿಕೊಂಡ.

ಕಳೆದ ಐದು ವರ್ಷಗಳಲ್ಲಿ ಉಮೋಪಿಯ ಜನತೆ ಸಾಕಷ್ಟು ಬದಲಾವಣೆಗಳನ್ನು ಕಂಡಿತ್ತು. ತಾವು ಆರಿಸಿದ್ದ ತಮ್ಮವನೇ ಆದ ಮಾರ್ಕಸ್ ಇಬೆಯು ಶ್ರೀಮಂತಿಕೆ, ಗೌರವ, ಬಿರುದು ಬಾವಲಿಗಳನ್ನು ಗಳಿಸಿದ್ದ. ಇದಕ್ಕೆ ಅವನ ರಾಜಕೀಯ ಸಾಮಿಪ್ಯವೇ ಕಾರಣವೆಂದು ಜನರು ತಿಳಿದಿದ್ದರು. ಕಳೆದ ಚುನಾವಣೆಯಲ್ಲಿ ಜನ ಅವನಿಂದ ಏನನ್ನೂ ಅಪೇಕ್ಷಿಸಿರಲಿಲ್ಲ. ಆದರೆ ಈ ಐದು ವರ್ಷಗಳಲ್ಲಿ ಅವನ ಜೀವನ ಶೈಲಿಯಾದ ಬದಲಾವಣೆಗಳನ್ನು ಕಂಡ ಜನ ' ಈ ಸಾರಿ... ನಮ್ಮ ನಡವಳಿಕೆ ಬೇರೆಯೇ ಆಗಿರಬೇಕು' ಎಂದು ನಿರ್ಧರಿಸಿದ್ದರು.

ಮಾರ್ಕಸ್ ತನ್ನ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು ಪ್ರಾಥಮಿಕ ಶಾಲಾ ಶಿಕ್ಷಕನಾಗಿ. ಉಮೋಪಿಯಾ ಗ್ರಾಮಕ್ಕೆ ರಾಜಕೀಯ ಪ್ರವೇಶವಾದಾಗ, ಇವನು ಮೀನು ನೀರನ್ನು ಸೇರುವಂತೆ ರಾಜಕೀಯ ಪ್ರವೇಶಿಸಿದ. ಕೆಲವರ ಪ್ರಕಾರ ಮಾರ್ಕಸ್ ರಾಜಕೀಯ ಸೇರಿದ್ದಕ್ಕೆ ಬೇರೆಯೇ ಕಾರಣವಿದೆ. ಮಾರ್ಕಸ್‌ನ ವಿರುದ್ಧ ಮಹಿಳಾ ಸಹೋದ್ಯೋಗಿ ಒಬ್ಬರು ಆತ ಅನುಚಿತವಾಗಿ ತನ್ನೊಡನೆ ವರ್ತಿಸಿದನೆಂದು ವಿದ್ಯಾ ಇಲಾಖೆಯ ಅಧಿಕಾರಿಗಳಿಗೆ ದೂರಿಟ್ಟಳು. ಇಲಾಖೆ ದೂರನ್ನು ವಿಚಾರಣೆ ಮಾಡಿ, ದೂರು ಸಾಬೀತಾಗಿ ಇವನನ್ನು ಕೆಲಸದಿಂದ ವಜಾ ಮಾಡಬೇಕೆಂದು ಇಲಾಖೆ ತೀರ್ಮಾನಿಸಿತು. ಈ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಮಾರ್ಕಸ್ ರಾಜಕೀಯಕ್ಕೆ ಪ್ರವೇಶಿಸಿದ ಎಂದು ಜನ ಆಡಿಕೊಳ್ಳುತ್ತಾರೆ. ಆದರೆ ಒಂದು ವಿಷಯ, ಮಾರ್ಕಸ್‌ನ ಯಾವುದೇ ಸಾಧನೆ ಅವನ ತಲೆ ತಿರುಗಿಸಿರಲಿಲ್ಲ. ಗ್ರಾಮದ ಹಿರಿಯರೊಡನೆ ಗೌರವದಿಂದ ನಡೆದುಕೊಳ್ಳುತ್ತಿದ್ದ. ಸಾಮಾನ್ಯ ಜನರೊಂದಿಗೆ ಸಂಬಂಧವನ್ನು ಕಡಿದುಕೊಂಡಿರಲಿಲ್ಲ. ರಾಜಧಾನಿಯಲ್ಲಿ ಬಿಡುವು ಸಿಕ್ಕಿದಾಗಲೆಲ್ಲಾ ತನ್ನ ಗ್ರಾಮಕ್ಕೆ ಬಂದು ನೀರು, ವಿದ್ಯುತ್ ಮತ್ತು ರಸ್ತೆ ಯಾವುದೇ ಅನುಕೂಲಗಳಿಲ್ಲದ ಹಳ್ಳಿಯಲ್ಲಿ ಇರುತ್ತಿದ್ದ. ಆದರೆ ಒಂದು ಮಾತು. ಇವನ ಮನೆಯಲ್ಲಿ ಮಾತ್ರ ನೀರು ಮತ್ತು ವಿದ್ಯುತ್ ವ್ಯವಸ್ಥೆಯೊಂದಿಗೆ ಎಲ್ಲಾ ಅನುಕೂಲಗಳಿದ್ದವು.

ಮಾರ್ಕಸ್ ಇಬೆ ತನ್ನ ಗ್ರಾಮದಲ್ಲಿ ದೊಡ್ಡದೊಂದು ಅರಮನೆಯಂತಹ ಮನೆಯನ್ನು ಕಟ್ಟಿ ಅದಕ್ಕೆ 'ಉಮೋಪಿಯಾ ಮಾನ್ಸಿಯನ್' ಎಂದು ಹೆಸರಿಟ್ಟಿದ್ದ. ಈ ಮನೆಯ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಸ್ವತ: ಆರ್ಚ ಬಿಷಪ್ ಅವರೇ ಅಗಮಿಸಿ ತಮ್ಮ ದಿವ್ಯ ಸಾನಿಧ್ಯದಿಂದ ಆಶೀರ್ವಚನ ನೀಡಿದ್ದರು. ಅಂದು ಉಮೋಪಿಯಾ ಜನತೆಗೆ ಭಾರೀ ಭೋಜನವನ್ನು ಮಾರ್ಕಸ್ ಏರ್ಪಡಿಸಿದ್ದ. ಇದಕ್ಕಾಗಿ ಐದು ಕೋಣ ಮತ್ತು ಅಸಂಖ್ಯಾತ ಆಡುಗಳನ್ನು ಕಡಿಸಿದ್ದ.

ಉಮೋಪಿಯಾದ ಹಿರಿಯ ಕಿರಿಯರನೆನ್ನದೆ, ಎಲ್ಲರೂ ಮಾರ್ಕಸ್‌ನ ಧಾರಾಳ ತನವನ್ನು ಕೊಂಡಾಡಿದರು. ಆದರೆ ಅಂದಿನ ಸಮಾರಂಭವಾದ ಮೇಲೆ ಅನೇಕ ಜನರಲ್ಲಿ ನಾವು ಹೋದ ಸಲ ನಮ್ಮ ಮತಗಳನ್ನು ಬಹಳ ಅಗ್ಗವಾಗಿ ಏನನ್ನೂ ನಿರೀಕ್ಷಿದೇ ರೂಫ್‌ಗೆ ಕೊಟ್ಟಿದ್ದೇವೆ. ಮುಂಬರುವ ಚುನಾವಣೆಯಲ್ಲಿ ಹೀಗಾಗದಂತೆ ನೋಡಿಕೊಳ್ಳಬೇಕು ಎಂಬ ಭಾವನೆ ಮೊಳಕೆಯೊಡೆಯಿತು.

ಚಾಣಾಕ್ಷ ರೂಫ್ ಮತ್ತು ಇವನ ಯಜಮಾನನಾದ ಗೌರವಾನ್ವಿತ ಮಾರ್ಕಸ್ ಜನರ ಈ ಭಾವನೆಯನ್ನು ನಿರೀಕ್ಷಿಸಿಯೇ ಇದ್ದರು ಮತ್ತು ಈ ಸಮಸ್ಯೆ ಎದುರಿಸಲು ಸಿದ್ಧರಾಗಿದ್ದರು. ಮಾರ್ಕಸ್ ತನ್ನ ಮುಂದಿನ ಐದು ತಿಂಗಳ ಸಂಬಳವನ್ನು ಮುಂಗಡವಾಗಿ ಪಡೆದಿದ್ದ. ತನ್ನಲ್ಲಿದ್ದ ಪೌಂಡು ನೋಟುಗಳನ್ನೂ ಹೊಳೆಯುವ ಶಿಲ್ಲಿಂಗ್‌ಗಳನ್ನಾಗಿ ಪರಿವರ್ತಿಸಿಕೊಂಡ. ಅವುಗಳನ್ನು ಚಿಕ್ಕ ಚಿಕ್ಕ ನಾರಿನ ಚೀಲಗಳಲ್ಲಿಟ್ಟು ಪಕ್ಷದ ಪ್ರಮುಖ ಕಾರ್ಯಕರ್ತರಿಗೆ ತಲುಪಿಸಿದ್ದ. ಈ ಹಣವನ್ನು ಸಮಯ ನೋಡಿ ಮತದಾರರರಿಗೆ ಹಂಚುವ ಕೆಲಸ ಅವರದು. ರೂಫ್ ಈ ಕಾರ್ಯಾಚರಣೆಯಲ್ಲಿ

ಪ್ರಮುಖ ಪಾತ್ರ ವಹಿಸಿದ್ದನೆಂದು ಹೇಳಬೇಕಾಗಿಲ್ಲವಷ್ಟೆ.

ಚುನಾವಣಾ ದಿನ ಹತ್ತಿರವಾಗುತ್ತಿದ್ದಂತೆ ರೂಫ್ ಉಮೋಪಿಯಾ ಗ್ರಾಮದ ಹಿರಿಯ ಗೌರವಾನ್ವಿತ ಒಬುಪಾ ಯಾಂಗ್ವಾ ಅವರ ಮನೆಯಲ್ಲಿ ಪ್ರಮುಖರ ಸಭೆಯನ್ನು ಕರೆದ. ರೂಫ್ ಅವನ ಸಹಾಯಕರು ಮತ್ತು ಗ್ರಾಮದ ಐವರು ಹಿರಿಯರು ಆ ಸಭೆಯಲ್ಲಿ ಭಾಗವಹಿಸಿದ್ದರು. ಕೊಠಡಿಯಲ್ಲಿ ಮಸಿಗಟ್ಟಿದ ಗಾಜಿನ ಲಾಂದ್ರವೊಂದು ಮಂದ ಬೆಳಕನ್ನು ಚೆಲ್ಲುತ್ತಿತ್ತು. ಗ್ರಾಮದ ಹಿರಿಯರು ಪುಟ್ಟ ಪುಟ್ಟ ಆಸನಗಳಲ್ಲಿ ಕುಳಿತಿದ್ದರು. ಅವರುಗಳ ಮುಂದೆ ಹೊಳೆಯುವ ಎರಡು ಶಿಲ್ಲಿಂಗ್ ನಾಣ್ಯಗಳಿದ್ದವು. ಮನೆಯ ಮುಚ್ಚಿದ ಬಾಗಿಲಿನ ಹೊರಗೆ ಚಂದ್ರ ತನ್ನ ನೇರ ನೋಟದಿಂದ ಎಲ್ಲವನ್ನೂ ಗಮನಿಸುತ್ತಿದ್ದ. ರೂಫ್ 'ನಮ್ಮ ಗ್ರಾಮದ ಮಗನೇ ಆದ ವ್ಯಕ್ತಿ ಮಂತ್ರಿಯಾಗಿದ್ದಾನೆ. ಇದಕ್ಕಿಂತಲೂ ಉನ್ನತ ಗೌರವ ನಮ್ಮ ಗ್ರಾಮಕ್ಕೆ ಬೇಕೆ? ನಮ್ಮ ಪಕ್ಷದ ಹಿರಿಯ ನಾಯಕರು ಈ ಗ್ರಾಮಕ್ಕೆ ಗೌರವವನ್ನು ಕೊಟ್ಟಿದ್ದಾರೆ ಎಂಬುದು ನಿಮ್ಮ ಗಮನದಲ್ಲಿರಲಿ.' ನಮ್ಮ ಪಕ್ಷಕ್ಕೆ ಉಮೋಪಿಯಾ ಗ್ರಾಮದ ಬಗ್ಗೆ ವಿಶೇಷ ಒಲವಿದೆ, ನೀವು ಮಾರ್ಕಸ್ ಇಬೆ ಅವರಿಗೆ ಮತ ನೀಡಿದರೂ ಸರಿ, ನೀಡದಿದ್ದರೂ ಸರಿ ರಾಜ್ಯದಲ್ಲಿ ಸರ್ಕಾರ ರಚಿಸುವುದಂತೂ ಪಿ ಎ ಪಿ ಪಕ್ಷವೇ. ನಮ್ಮ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ವಿದ್ಯುತ್ ಶಕ್ತಿ, ಕುಡಿಯುವ ನೀರು ಮತ್ತು ರಸ್ತೆಗಳ ವ್ಯವಸ್ಥೆ ಉತ್ತಮಪಡಿಸುವುದಾಗಿ ಆಶ್ವಾಸನೆ ನೀಡಿದೆ. ಈ ಎಲ್ಲಾ ಕಾರ್ಯವು ಅಡೆ ತಡೆ ಇಲ್ಲದೆ ನಡೆಯಬೇಕಾದರೆ ನಮ್ಮವರೇ ಆದ ಮಾರ್ಕಸ್ ಅವರನ್ನು ನೀವು ಮರು ಚುನಾಯಿಸಬೇಕು. ರೂಫ್ ನ ವಾಗ್ಝರಿಯನ್ನು ಕೇಳಿ ಹಿರಿಯ ನಾಯಕರು ತಲೆದೂಗಿದರು. ಆದರೆ ಅವರೊಲ್ಲಬ್ಬರು ಹೇಳಿದರು. "ನೀನು ಹೇಳುವ ಪ್ರತಿಯೊಂದು ಮಾತನ್ನೂ ನಾವು ಸತ್ಯವೆಂದು ನಂಬುತ್ತೇವೆ. ನಾವು, ನಮ್ಮ ಮಡದಿಯರು, ಮಕ್ಕಳು, ನೆಂಟರ ಎಲ್ಲಾ ಮತಗಳು ಮಾರ್ಕಸ್ ಅವರಿಗೆ ಮೀಸಲಿಡುತ್ತೇವೆ. ಆದರೆ ಕೇವಲ ಎರಡು ಶಿಲ್ಲಿಂಗ್ ಅನ್ನು ಒಪ್ಪುವುದು ಅವಮಾನಕರ. ನೋಡು ರೂಫ್ ಗೌ.ಮಾರ್ಕಸ್ ಬಡವನಾಗಿದ್ದರೆ ನಾನೇ ಎಲ್ಲರಿಗೂ ನಮ್ಮ ಮತವನ್ನು ಏನನ್ನೂ ಬಯಸದೆ ನೀಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೆ, ಆದರೆ ನಮ್ಮ ಮಾರ್ಕಸ್‌ರವರ ಸ್ಥಿತಿ ಹಾಗಿಲ್ಲ, ಅವರ ಎಲ್ಲಾ ಕೆಲಸಗಳು ಅದ್ದೂರಿಯಿಂದ ವೈಭವ ಪೂರಿತವಾಗಿ ನಡೆದಿದೆ. ಕಳೆದ ಚುನಾವಣೆಯಲ್ಲಿ ಹಣಕ್ಕಾಗಿ ಒತ್ತಾಯ ಮಾಡಿದ್ದವೇನು? ಇಲ್ಲಾ ಮುಂದಿನ ಚುನಾವಣೆಯ ಹೊತ್ತಿಗೆ ಏನಾಗುತ್ತೋ ಯಾರಿಗೆ ಗೊತ್ತು. ಆದರೆ ಈ ದಿನ ನಮ್ಮ ದಿನ. ಅದನ್ನು ಬಳಸಿ ಕೊಳ್ಳದಿದ್ದರೆ ಹೇಗೆ? ಐರೋಕೋ ಮರವನ್ನು ಹತ್ತಿಯಾಗಿದೆ. ಮೇಲಿಂದ ಇಳಿಯುವಾಗ ನಮ್ಮ ಮನೆಗಾಗುವಷ್ಟಾದರೂ ಉರುವಲನ್ನು ಕಡಿಯದೇ ಹೋದರೆ ಹೇಗಾದೀತು ನೀನೇ ಹೇಳು" ಎಂದ.

ರೂಫ್‌ನ ಹತ್ತಿರ ಈ ಮಾತಿಗೆ ಉತ್ತರವಿರಲಿಲ್ಲ. ಅವನೂ ಸಹ ಅವಕಾಶ ಸಿಕ್ಕಿದಾಗಲೆಲ್ಲಾ ಉರುವಲನ್ನು ಕಡಿಯುವವನೇ. ಮೊನ್ನೆ ಅವನು ಮಾರ್ಕಸ್ ಮನೆಗೆ ಹೋಗಿ ನೇರವಾಗಿ ಫ್ರಿಡ್ಜನಿಂದ ಐದು ಬಾಟಲ್ ಬೀರ್ ಎಳೆದಿದ್ದ. ಬೆಲೆ ಬಾಳುವ ವಸ್ತ್ರಗಳನ್ನು ಉಡುಗೊರೆಯಾಗಿ ಪಡೆದಿದ್ದ. ಇತ್ತೀಚಿಗೆ ಮಾರ್ಕಸ್‌ನ ಪ್ರಭಾವದಿಂದಾಗಿ ಭೂಮಿ ಸಂಬಂಧಿಸಿದ ನ್ಯಾಯಾಲಯದ ವ್ಯಾಜ್ಯ ಗೆದ್ದಿದ್ದ.

ಸರಿ ಈ ಸಣ್ಣ ವಿಷಯದ ಬಗ್ಗೆ ವಿವಾದ ಬೇಡ ಎಂದು ಹೇಳಿ ರೂಫ್, ಮತ್ತೊಂದು ಶಿಲ್ಲಿಂಗ್ ಅನ್ನು ಅವರ ಮುಂದಿಟ್ಟ, ಇದಕ್ಕೂ ಸಹ ಹಿರಿಯರ ಒಪ್ಪಿಗೆ ಸಿಗಲಿಲ್ಲ. ಆಗ ರೂಫ್ ಮತ್ತೂ ಒಂದು ಶಿಲ್ಲಿಂಗ್ ಎಲ್ಲರ ಮುಂದಿಟ್ಟ, ಅವರ ಒಪ್ಪಿಗೆಗೆ ಕಾಯದೆ, ಎದ್ದು ಈಗ ಇದಕ್ಕಿಂತಲೂ ಹೆಚ್ಚಿನದನ್ನು ನೀವು ನನ್ನಿಂದ ನಿರೀಕ್ಷಿಸಬಾರದು. ನೀವು ಬೇಕಾದರೆ ನಮ್ಮ ವಿರೋಧಿಗಳು,

ಶತ್ರುಗಳೂ ಆಗಿರುವ ಪಿ.ಒ.ಪಿ ಪಕ್ಷದ ಒಮೇದುದಾರನಿಗೆ ಹಾಕಿ, ಎಂದು ಎದ್ದು ಹೊರಡಲು ಸಿದ್ಧನಾದ. ಉಮೋಪಿಯಾ ಗ್ರಾಮದ ಹಿರಿಯರೂ ಕೂಡ ಚಾಣಾಕ್ಷರು. ಅವರಿಗೂ ಗೊತ್ತು ಹಗ್ಗವನ್ನು ಎಷ್ಟು ಜಗ್ಗಾಡಬಹುದು ಎಂದು. ಅಂತೆಯೇ ಐದು ಜನ ಹಿರಿಯರೂ ರೂಫ್‌ಗೆ ವಿಶ್ವಾಸ ಬರುವಂತೆ ಮಾತನಾಡಿ ಸಭ್ಯತೆಯ ಸೋಗಿನಲ್ಲಿಯೇ ಹಣವನ್ನು ತೆಗೆದುಕೊಂಡರು.

ರೂಫ್ ಹೇಳಿದ ಶತ್ರುಗಳು ವಿರೋಧಿಗಳು ಯಾರು ಗೊತ್ತೇ? ಅವರೇ 'ಪಿಪಲ್ಸ್ ಆರ್ಗನೈಸೇಶನ್ ಪಾರ್ಟಿ'ಯವರು. ದೇಶದ ಕರಾವಳಿ ಭಾಗದ ಬುಡಕಟ್ಟು ಜನರು ರಚಿಸಿಕೊಂಡಿದ್ದ ಪಕ್ಷವಿದು. ಅವರು ಹೇಳುವಂತೆ ತಮ್ಮ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿನಾಶದಿಂದ ರಕ್ಷಿಸಿಕೊಳ್ಳಲು ಈ ಪಕ್ಷವನ್ನು ಸ್ಥಾಪಿಸಿ ಕೊಂಡಿದ್ದರು.

ಮಾರ್ಕಸ್‌ನ ಪಿ.ಎ.ಪಿ ಉಮೋಪಿಯಾದಲ್ಲಿ ಅನೇಕ ವರ್ಷಗಳಿಂದ ಬೇರು ಬಿಟ್ಟಿತ್ತು. ಆದ್ದರಿಂದ ಪಿ.ಒ.ಪಿ ಮುಂಬರುವ ಚುನಾವಣೆಯಲ್ಲಿ ಗೆಲ್ಲುವ ಆಸೆ ಕೇವಲ ಹಗಲುಗನಸೇ ಆಗಿತ್ತು. ಆದರೆ ಆ ಪಕ್ಷ ದೂರಾಲೋಚನೆಯಿಂದ ಈ ಸಲದ ಚುನಾವಣಾ ಹೊಂಡಕ್ಕೆ ಧುಮುಕಿತ್ತು. ಅದೆಷ್ಟು ಹಣವನ್ನು ಪಿ.ಒ.ಪಿ ಪಾರ್ಟಿ ಚುನಾವಣೆಗೆ ಸುರಿದಿತ್ತೋ ಗೊತ್ತಿಲ್ಲ. ಆದರೆ ಈ ಪಕ್ಷದ ಕಾರ್ಯಕರ್ತರು ವಾಹನಗಳಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿಕೊಂಡು ಅಬ್ಬರದ ಪ್ರಚಾರದಲ್ಲಿ ತೊಡಗಿದ್ದರು. ಗ್ರಾಮದ ಮನೆಯ ಗೋಡೆಗಳ ಮೇಲೆ, ಮರಗಳ ಕಾಂಡಗಳ ಮೇಲೆ ಆ ಪಕ್ಷದ ಪ್ರಚಾರ ಭಿತ್ತಿ ಪತ್ರಗಳಲ್ಲಿದ್ದವು. ಈ ಪಕ್ಷದ ಸ್ಥಳೀಯ ಕಳ್ಳರು, ಖದೀಮರು ಬಹಳ ಉತ್ಸಾಹದಿಂದ ಓಡಾಡುತ್ತಿದ್ದರು. ಚುನಾವಣೆ ಎಂದರೆ ಇವರಿಗೆ ಸಂಭ್ರಮದ ದಿನಗಳು. ಇವರ ಕಿಸೆಗೆ ಹಣದ ಹೊಳೆ ಹರಿದು ಬರುವ ದಿನಗಳವು.

ಚುನಾವಣಾ ದಿನದ ಹಿಂದಿನ ರಾತ್ರಿಯ ತನಕವೂ ಪ್ರಚಾರ ಕಾರ್ಯ ರೂಫ್ ಸಿದ್ಧ ಪಡಿಸಿದ್ದ ಕಾರ್ಯತಂತ್ರದಂತೆಯೇ ನಡೆದಿತ್ತು. ಆದರೆ ಚುನಾವಣಾ ದಿನದ ಹಿಂದಿನ ರಾತ್ರಿ.... ! ಅಂದು ರೂಫ್ ಮನೆಗೆ ಅನಿರಿಕ್ಷಿತ ವ್ಯಕ್ತಿಯ ಆಗಮನವಾಯಿತು. ಅವನು ರೂಫ್ ಗೆ ಪರಿಚಯಸ್ಥನೆ. ಈ ವ್ಯಕ್ತಿ ಪಿ.ಒ.ಪಿ ಪಕ್ಷದ ಪ್ರಮುಖ ಕಾರ್ಯಕರ್ತರಲ್ಲೊಬ್ಬ. ಭೇಟಿಯ ಉದ್ದೇಶ ವ್ಯವಹಾರಿಕವಾಗಿತ್ತು. ಹೆಚ್ಚು ಮಾತು ವ್ಯರ್ಥಮಾಡದೆ ನೇರವಾಗಿ ವಿಷಯಕ್ಕೆ ಬಂದ ಆ ವ್ಯಕ್ತಿ ರೂಫ್ ಮುಂದೆ ಐದು ಪೌಂಡು ನೋಟನ್ನು ತಳ್ಳಿ ನಿನ್ನ ಮತ ನಮಗೆ ಬೇಕು ಎಂದ. ಈ ಅನಿರೀಕ್ಷಿತ ಬೆಳವಣಿಗೆಯಿಂದ ಚಕಿತನಾದ ರೂಫ್ ತನ್ನನ್ನು ತಾನು ಬೇಗನೆ ಸಾವರಿಸಿಕೊಂಡು ಮೊದಲು ಹೋಗಿ ಮನೆಯ ಮುಂಬಾಗಿಲನ್ನು ಭದ್ರಪಡಿಸಿದ. ತನ್ನ ಮುಂದಿರುವ ಕೆಂಪು ಬಣ್ಣದ ನೋಟಿನ ಮೇಲೆ ದೃಷ್ಟಿಯನ್ನಿಟಿದ್ದ. ಅವನ ಕಣ್ಮುಂದೆ ಸಮೃದ್ಧ ಕೋಕೋ ಫಸಲನ್ನು ಕಂಡ ರೈತನ ಚಿತ್ರ ಮೂಡಿಬಂತು.

"ನಾನು ಮಾರ್ಕಸ್‌ನ ಪರವಾಗಿ ಕೆಲಸ ಮಾಡುವವನು ಇದು ನಿಮಗೆ ತಿಳಿದಿದೆ. ಈಗ ಅವರ ವಿರುದ್ಧ ಹೋಗುವುದು..."

'ಅದು ನಮಗೆ ಗೊತ್ತು. ನೀನು ಮತ ಚಲಾಯಿಸುವಾಗ ನಿನ್ನ ಎದುರಿಗೆ ಮಾರ್ಕಸ್ ಇರುತ್ತಾನಾ? ನೋಡು ನಮಗಿನ್ನೂ ತುಂಬಾ ಜನರನ್ನು ಭೇಟಿ ಮಾಡುವುದಿದೆ. ನೀನು ಇದನ್ನು ತೆಗೆದುಕೊಳ್ಳುವೆಯೋ, ಇಲ್ಲವೋ ಹೇಳು ಅಷ್ಟೆ' ಎಂದ ಆ ವ್ಯಕ್ತಿ.

ರೂಫ್ "ಈ ವಿಷಯ ಮನೆಯ ಹೊರಗೆ ಹೋಗುವುದಿಲ್ಲ ತಾನೆ?" ಎಂದ. ಆ ವ್ಯಕ್ತಿ ನಮಗೆ ಬೇಕಾಗಿರೋದು ನಿನ್ನ ಮತ ಕಾಡು ಹರಟೆಯಲ್ಲ.

"ಸರಿ, ಹಾಗಾದರೆ" ಈ ಮಾತು ರೂಫ್ ಬಾಯಿಂದ ಹೊರಬರುತ್ತಿದ್ದಂತೆ ಆ ವ್ಯಕ್ತಿ

ತನ್ನ ಜೊತೆಗಾರನಿಗೆ ಸನ್ನೆ ಮಾಡಿದ. ಆ ವ್ಯಕ್ತಿ ಕೆಂಪು ಬಟ್ಟೆ ಹೊದಿಸಿದ್ದ ವಸ್ತುವನ್ನ ತಂದ. ಬಟ್ಟೆ ತೆರೆದಾಗ ಅದರಲ್ಲಿ ಒಂದು ಮಡಿಕೆ ಇತ್ತು. ಆ ಮಡಕೆಯ ಒಳಗೆ ಭಯ ಹುಟ್ಟಿಸುವ ಆಕೃತಿಯ ಮೂರ್ತಿಯೊಂದಿತ್ತು. ಅದನ್ನು ಪಕ್ಷಿಗಳ ಗರಿಗಳಿಂದ ಅಲಂಕರಿಸಲಾಗಿತ್ತು.

ಇವಳು ಮಬಾಂಟದೇವಿ 'ಒಯಿ' ಅವಳ ಶಕ್ತಿ ಏನೆಂಬುದು ನಿನಗೂ ಗೊತ್ತು. ಅವಳ ಮೇಲೆ ಕೈ ಇಟ್ಟು ಈ ಚುನಾವಣೆಯಲ್ಲಿ ಪಿ.ಒ.ಪಿ ಪಕ್ಷದ 'ಮಾಧುಕ' ಅವರಿಗೆ ಮತ ಹಾಕುವುದಾಗಿ ಪ್ರಮಾಣ ಮಾಡು. ನೀನೇನಾದರೂ ಮಾತು ತಪ್ಪಿದರೆ ಗೊತ್ತಲ್ಲ, ಒಯಿ ಅದನ್ನು ಗಮನಿಸಿ ತಕ್ಕ ಶಿಕ್ಷೆ ನೀಡುತ್ತಾಳೆ. ಒಯಿ ದೇವಿಯನ್ನು ನೋಡಿದ ರೂಫ್ ಗೆ ಹೃದಯವೇ ಬಾಯಿಗೆ ಬಂದಂತಾಯಿತು. ಮಬಾಂಟ ದೇವಿಯ ಪವಾಡಗಳ ಬಗ್ಗೆ ಸಾಕಷ್ಟು ಕೇಳಿದ್ದ ಅವನಿಗೆ ಮುಂಬರುವ ಚುನಾವಣೆಯಲ್ಲಿ ತನ್ನ ಯಜಮಾನ ಮಾರ್ಕಸ್ ಪ್ರಚಂಡ ಬಹುಮತದಿಂದ ಗೆಲ್ಲುವನೆಂಬ ಭರವಸೆ ಇತ್ತು. ನನ್ನೊಬ್ಬನ ಮತ ಮಾದುಕನಿಗೆ ಹೋದರೆ ಚುನಾವಣಾ ಫಲಿತಾಂಶದ ಮೇಲೆ ಏನೂ ಪರಿಣಾಮ ಬೀರದು. ಈ ದಿಕ್ಕಿನಲ್ಲಿ ರೂಫ್‌ನ ಚಿಂತನೆ ಹರಿಯಿತು. "ನನ್ನ ಮತವನ್ನು ಮಾದುಕನಿಗೆ ಹಾಕುವೆ ಇಲ್ಲಿದಿದ್ದಲ್ಲಿ ಒಯಿ ನನಗೆ ಶಿಕ್ಷೆ ನೀಡಲಿ" ಎಂದು ಪ್ರಮಾಣ ಮಾಡಿದ. ಸರಿ ಹಾಗಾದರೆ ಎಂದು ಪಿ.ಒ.ಪಿ ವ್ಯಕ್ತಿ ಹೊರಟ. ಅವನ ಹಿಂದೆಯೇ ಒಯಿ ಮೂರ್ತಿಯ ಗಡಿಗೆಯೂ ಹೊರಟಿತು. ಬಾಗಿಲಲ್ಲಿ ನಿಂತ ರೂಫ್, "ನಿಮಗೆ ತಿಳಿದಿರಲಿ ಮಾದುಕ ಅವರು ಮಾರ್ಕಸ್‌ನ ವಿರುದ್ಧ ಗೆಲ್ಲುವ ಸಾಧ್ಯತೆಯೇ ಇಲ್ಲ..." ಪಿ.ಒ.ಪಿ ವ್ಯಕ್ತಿ, "ಅದು ತಿಳಿಯದಷ್ಟು ಹೆಡ್ಡರಲ್ಲ ನಾವು. ನಮ್ಮ ಅಭ್ಯರ್ಥಿ ಈ ಸಾರಿ ಸೋತರೂ ಚಿಂತೆಯಿಲ್ಲ. ಮುಂದಿನ ಚುನಾವಣೆಯಲ್ಲಿ ಅವನಿಗೆ ಗೆಲ್ಲುವಷ್ಟು ಮತ ಬೀಳುತ್ತದೆ". ಪಿ.ಎ.ಪಿ ಮತದಾರರಿಗೆ ಶಿಲ್ಲಿಂಗ್ ಕೊಟ್ಟರೆ, ಪಿ.ಒ.ಪಿ ಪೌಂಡುಗಳಲ್ಲಿ, ಅಂದರೆ 'ಬಂದ'ವನ್ನೇ ನೀಡುತ್ತದೆ, ಎಂಬ ಸಂದೇಶ ಜನರಿಗೆ ತಲುಪಲಿ ಅಷ್ಟೇ ಸಾಕು."

ಇನ್ನು ಚುನಾವಣೆಯ ದಿನ ಮತದಾರರಿಗೆ ಪ್ರತಿ ಐದು ವರ್ಷಗಳಿಗೊಮ್ಮೆ ಬರುವ ಮಹಾದಿನ. ಸಾಮಾನ್ಯ ಜನರು ಖ್ಯಾತನಾಮರಂತೆ ಬೀಗುವ ದಿನ. ಉಮೋಪಿಯಾದ ಮನೆ, ಗೋಡೆ, ಮರದ ಕಾಂಡ, ಟೆಲಿಗ್ರಾಫ್ ಕಂಬದ ಮೇಲೆ ಎಲ್ಲೆಲ್ಲಿಯೂ ಮತ ಯಾಚಿಸುವ ರಾಜಕೀಯ ಪಕ್ಷಗಳ ಭಿತ್ತಿ ಪತ್ರಗಳೇ, ಅದರೆ ಇವು ಹೊಳಪನ್ನು ಕಳೆದುಕೊಂಡಿದ್ದವು. ಆದರೂ ಎಲ್ಲರಿಗೂ ಚುನಾವಣೆಯ ಸಡಗರ ಹೊಕ್ಕಿತ್ತು.

ಗೌರವಾನ್ವಿತ ಮಾರ್ಕಸ್ ಸಾಹೇಬರು ಎಂದಿನಂತೆ ರಾಜಠೀವಿಯಿಂದ ತಮ್ಮ ಕೆಲಸದಲ್ಲಿ ತೊಡಗಿದ್ದರು. ಮತಗಟ್ಟೆಗೆ ಸ್ವಲ್ಪ ದೂರದಲ್ಲಿ ಕಾನೂನಿನ ತೊಡಕಿಗೆ ಸಿಗದಿರುವಂತಹ ದೂರದಲ್ಲಿ ಒಂದು ವಾದ್ಯ ಗೋಷ್ಠಿ (ಬ್ಯಾಂಡ್) ವ್ಯವಸ್ಥೆಯಾಗಿತ್ತು. ಮತಗಟ್ಟೆ ಹತ್ತಿರಕ್ಕೆ ಬಂದ ನೂರಾರು ಜನರು ಗೋಷ್ಠಿಯ ಸಂಗೀತಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತಿದ್ದರು. ಬ್ಯಾಂಡಿನ ಸನಿಹದಲ್ಲೇ ಒಂದು ಹಸಿರು ಬಣ್ಣದ ದೊಡ್ಡ ವಾಹನವಿತ್ತು. ಮಾರ್ಕಸ್ ಸಾಹೇಬರು ಅದರಲ್ಲಿ ಕುಳಿತು ನಗೆ ಸೂಸುತ್ತಿದ್ದರು. ಕೆಲವು ಮತದಾರರು ಅತೀ ಉತ್ಸಾಹದಿಂದ ಅವರ ಕೈ ಕುಲುಕಿ ಮತದಾನದ ದಿನದಂದೇ 'ಕಂಗ್ರಾಟ್ಸ್' ಹೇಳಿದರು. ರೂಫ್ ಮತ್ತು ಅವನ ಸಿಬ್ಬಂದಿ· ಮತದಾರರ ಮಧ್ಯೆ ಹೋಗಿ ಮರೀಬೇಡಿ, ನಮ್ಮ ಪಕ್ಷದ ಗುರುತು ಮೋಟಾರು ಕಾರು, ಅಲ್ಲಿ ಮಾರ್ಕಸ್ ಸಾಹೇಬರು ಕುಳಿತಿದ್ದಾರಲ್ಲ ಅದೇ ತರಹದ್ದು, ಆ ಚಿಹ್ನೆ ಇರುವ ಡಬ್ಬದಲ್ಲಿ ನಿಮ್ಮ ಮತ ಪತ್ರ ಹಾಕಿ. ಅದರ ಪಕ್ಕದ ಡಬ್ಬ ಇದೆಯಲ್ಲಾ ಅದರ ಕಡೆಯೂ ನೋಡಬೇಡಿ. ನಮ್ಮ ವಿರೋಧಿಗಳ ಚಿಹ್ನೆ ಮನುಷ್ಯ ತಲೆ. ಕೇವಲ ಬುದ್ಧಿ ಇಲ್ಲದವರು ಆ ಕಡೆ ನೋಡುತ್ತಾರೆ. ರೂಫ್‌ನ ಈ ಮಾತಿನಿಂದ ಪ್ರಚೋದಿತರಾದ ಜನ ಕಾರಿನ ಗುರುತಿಗೆ ನಮ್ಮ ಮತ ಎಂದು ಘೋಷಿಸಿದರು. ಕಾರಿನಲ್ಲೇ ಸವಾರಿ


ಮಾಡಬಹುದಾದಾಗ ನಡೆಯುವುದೇಕೆ ಎಂಬ ಹಾಡನ್ನು ಈ ಸಂದರ್ಭಕ್ಕಾಗಿ ರಚಿಸಲಾಗಿತ್ತು. ಬ್ಯಾಂಡ್‌ನವರು ಈ ಗೀತೆಯನ್ನು ಪ್ರಾರಂಭಿಸಿದಾಗ ಜನರ ಉತ್ಸಾಹ ಮುಗಿಲು ಮುಟ್ಟಿತು.

ಮಾರ್ಕಸ್ ಇಬೆಗೆ ತಾನು ಬಹುಮತ ಗಳಿಸಿ ಗೆಲ್ಲುವೆನೆಂಬ ವಿಶ್ವಾಸವಿತ್ತು. ಆದರೆ ಯಾವುದೇ ಕೆಲಸದಲ್ಲೂ, ಸಣ್ಣ, ಸಣ್ಣ ವಿವರಗಳಿಗೂ ಗಮನ ಕೊಡುವ ವ್ಯಕ್ತಿ ಮಾರ್ಕಸ್ ಇಬೆ. ಬೆಳಗಿನ ಸಮಯದಲ್ಲಿ ಮತದಾನ ಬಿರುಸಿನಿಂದ ನಡೆಯುತ್ತದೆ. ಮಧ್ಯಾಹ್ನವಾಗುತ್ತಿದ್ದಂತೆ ಸ್ವಲ್ಪ ಸಡಿಲಗೊಳ್ಳುವುದು ಸಹಜ. ಸಾಯಂಕಾಲ ಮತ್ತೆ ಚುರುಕಾಗುತ್ತದೆ. ಮಾರ್ಕಸ್ ತನ್ನ ಹಿಂಬಾಲಕರಿಗೆ "ನೀವು ಹೋಗಿ, ಈಗ ನಿಮ್ಮ ಮತ ಚಲಾಯಿಸಿ, ಒಂದು ಮತವೂ ವ್ಯರ್ಥವಾಗಬಾರದು." ಎಂದ. ಮಾರ್ಕಸ್‌ನ ಈ ಮಾತಿನಿಂದ ರೂಫ್ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು. ಬೆಳಗಿಂದಲೂ ಒಳದನಿಯೊಂದು ಅವನನ್ನು ಕಾಡುತ್ತಿತ್ತು. ಆದರೆ ಅದನ್ನು ಕೇಳಿಸಿಕೊಳ್ಳದಂತೆ ಚುನಾವಣೆ ಕೆಲಸದಲ್ಲಿ ರೂಫ್ ತೊಡಗಿದ್ದ. ತನ್ನ ದಣಿಯ ಮಾತಿನಂತೆ ರೂಫ್ ಸ್ವಲ್ಪ ಹೆಚ್ಚಿನ ಉತ್ಸಾಹವನ್ನು ಪ್ರದರ್ಶಿಸುತ್ತಲೇ ಮತಗಟ್ಟೆಯತ್ತ ನಡೆದ. ಮತಗಟ್ಟೆ ಬಾಗಿಲಿನಲ್ಲಿ ಭದ್ರತಾ ಪಡೆಯವರು ನಕಲಿ ಮತಪತ್ರಗಳಿಗಾಗಿ ಇವನನ್ನು ತಪಾಸಣೆಗೆ ಗುರಿ ಪಡಿಸಿದರು. ನಂತರ ಮುಂದೆ ಚುನಾವಣಾ ಅಧಿಕಾರಿಗಳು ಮತವನ್ನು ಹೇಗೆ ಚಲಾಯಿಸಬೇಕೆಂದು ಎರಡೂ ಮತ ಪೆಟ್ಟಿಗೆಯಲ್ಲಿ ತೋರಿಸಿ ವಿವರಿಸಿದರು. ರೂಫ್ ಮತ ಪೆಟ್ಟಿಗೆ ಇರುವ ಕೊಠಡಿಗೆ ಬಂದ. ಕಾರಿನ ಚಿಹ್ನೆ ಮತ್ತು ಮನುಷ್ಯನ ತಲೆ ಚಿಹ್ನೆ ಅವನ ಎದುರಾಯಿತು, ರೂಫ್ ನಿಗೆ ಒಂದು ಕ್ಷಣ ಅಲ್ಲಿಂದ ಓಡಿ ಹೋಗಬೇಕೆನಿಸಿತು. ಸಾವರಿಸಿಕೊಂಡು ತನ್ನ ಕಿಸೆಯಿಂದ ಅಧಿಕಾರಿಗಳು ಕೊಟ್ಟಿದ್ದ ಮತ ಪತ್ರವನ್ನು ಹೊರ ತೆಗೆದ. ಅದನ್ನೇ ದಿಟ್ಟಿಸಿ ನೋಡುತ್ತಾ ನಿಂತ. ನನ್ನ ದಣಿ ಅನೇಕ ವರ್ಷಗಳಿಂದ ವಿಶ್ವಾಸ ಭರವಸೆ ಇಟ್ಟು ನನ್ನೊಂದಿಗೆ ನಡೆದು ಕೊಂಡಿದ್ದಾನೆ, ಅವನಿಗೆ ಈ ಸಂದರ್ಭದಲ್ಲಿ ಮೋಸ ಮಾಡುವುದು ನ್ಯಾಯವೇ ಇದು ನ್ಯಾಯವಲ್ಲ, ಎಂದಿತು ಅವನ ಒಳ ಮನಸ್ಸು. ಪಿ.ಒ.ಪಿ ಕಾರ್ಯಕರ್ತನನ್ನು ಕಂಡು ಐದು ಪೌಂಡು ಹಿಂದಿರುಗಿಸುವುದು ಸರಿ ಎಂದಕೊಂಡ. ಆದರೆ ಒಯಿ ದೇವತೆಯ ಹೆಸರಿನಲ್ಲಿ ಪ್ರಮಾಣ ಮಾಡಿಲ್ಲವೇ? ಇದರ ಜೊತೆಗೆ ರೂಫ್ ನ ಕಣ್ಣ ಮುಂದೆ ಗರಿಗರಿ ಕೆಂಪು ನೋಟುಗಳ ಚಿತ್ರ ಬಂತು. ಅದರ ಹಿಂದೆಯೇ ಕೋಕೋ ರೈತನ ಚಿತ್ರವೂ ಇತ್ತು. ಮತಗಟ್ಟೆಯ ಹೊರಗೆ ಇದ್ದ ಭದ್ರತಾ ಸಿಬ್ಬಂದಿಗೆ, ಒಳಗೆ ಹೋದ ರೂಫ್ ಮತಚಲಾಯಿಸಲು ಏಕೆ ಇಷ್ಟು ಸಮಯ ತೆಗೆದು ಕೊಳ್ಳುತ್ತಿದ್ದಾನೆ ಎಂಬುದು ಅರ್ಥವಾಗಲಿಲ್ಲ. ಅವರು ಅವನನ್ನು ಬೇಗ ಬರುವಂತೆ ಒತ್ತಾಯಿಸಿದರು. ಮಿಂಚಿನಂತೆ ರೂಫ್‌ನ ತಲೆಯಲ್ಲಿ ಒಂದು ಪರಿಹಾರ ಹೊಳೆಯಿತು. ತನಗೆ ನೀಡಿದ್ದ ಮತ ಪತ್ರವನ್ನು ಮಧ್ಯಕ್ಕೆ ಸರಿಯಾಗಿ ಮಡಚಿ ಎರಡು ಭಾಗವಾಗಿ ಹರಿದ. ಒಂದು ಭಾಗವನ್ನು ಮಾದುಕನ ಚಿಹ್ನೆ ಇದ್ದ ಪೆಟ್ಟಿಗೆಗೆ ಹಾಕಿ ನಾನು ಮಾದುಕನಿಗೇ ಮತ ಹಾಕುತ್ತಿದ್ದೇನೆ ಎಂದು ಸ್ವಲ್ಪ ಜೋರಾಗಿಯೇ ಹೇಳಿಕೊಂಡ. ಇನ್ನೊಂದು ಭಾಗವನ್ನು ಮಾರ್ಕಸ್‌ನ ಮತ ಪೆಟ್ಟಿಗೆಗೆ ತುರುಕಿದ. ಅಲ್ಲಿಂದ ಹೊರಬಂದ. ಅವನ ಹೆಬ್ಬೆಟ್ಟಿಗೆ ಶಾಯಿ ಬಳಿಯಲಾಯಿತು. ಒಂದೇ ಏಟಿಗೆ ಮೂರು ಹಕ್ಕಿಗಳನ್ನು ಹೊಡೆದ ಭಾವದಲ್ಲಿ ರೂಫ್ ಮತಗಟ್ಟೆಯಿಂದ ಬಂದ ಸ್ಥಿತಿಯಲ್ಲೇ ಹೊರ ನಡೆದ.●

ಐದು ಎಕರೆಯ ಸ್ವಾತಂತ್ರ್ಯ

ಡಾ. ಟಿ.ಎಸ್. ಚನ್ನೇಶ

ಈ ಪುಸ್ತಕವನ್ನು ನನಗೆ ಪರಿಚಯಿಸಿದವರು, ಹಿರಿಯರಾದ ಡಾ.ಎ.ಎನ್. ನಾಗರಾಜ್ ಅವರು. ಈಗ ೮೦ ರ ಹರೆಯದ ನಾಗರಾಜ್ ಓರ್ವ ಕೃಷಿ ವಿಜ್ಞಾನಿ. FAO ನಲ್ಲಿ ಸಲಹೆಗಾರರಾಗಿದ್ದರು. ಅಮೆರಿಕಾದಲ್ಲಿಂದ ಈ ಪುಸ್ತಕವನ್ನು ತಂದಿದ್ದರು. ಈ ಸಂಗತಿಯನ್ನು ಹೇಳಲೇ ಬೇಕಾದ ತುರ್ತು ಇದೆ. ನಮ್ಮ ದೇಶದ ಬಹುತೇಕ ಎಲ್ಲಾ ಹಳೆಯ ಕೃಷಿ ವಿಶ್ವವಿದ್ಯಾಲಯಗಳೂ ಒಂದಲ್ಲಾ ಒಂದು ಅಮೆರಿಕಾ ವಿಶ್ವವಿದ್ಯಾಲಯದ ಮಾದರಿ ಅಧ್ಯಾಪನಕ್ಕೆ ಒಳಗಾಗಿದ್ದವು. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವೂ ಸಹಾ ಟೆನಸ್ಸಿ ವಿಶ್ವವಿದ್ಯಾಲಯಕ್ಕೆ ಸಂಪರ್ಕ ಪಡೆದಿತ್ತು. ಆಗ ಅನೇಕರು ಅಲ್ಲಿಯೇ ತಮ್ಮ ಹೆಚ್ಚಿನ ವ್ಯಾಸಂಗ ಮಾಡಿಕೊಂಡು ಬಂದಿದ್ದರು. ೬೦–೭೦ ರ ದಶಕದಲ್ಲಿ ಈ ಸಂಪರ್ಕಕೊಂಡಿಯನ್ನು ಅಮೆರಿಕಾ ವಿಶ್ವವಿದ್ಯಾಲಯಗಳ ಜೊತೆ ಹೊಂದಿದ್ದವು.



೧೯೩೫ ರಲ್ಲಿ ಮೊದಲ ಬಾರಿಗೆ ಪ್ರಕಟಗೊಂಡ ಈ ಪುಸ್ತಕ ೧೯೪೨ರ ವೇಳೆಗೆ ಏಳು ವರ್ಷಗಳಲ್ಲಿ ೧೪ ಬಾರಿ ಮರು ಮುದ್ರಣ ಪಡೆದಿತ್ತು. ೬೦–೭೦ ರ ದಶಕದಲ್ಲಿ ನಮ್ಮವರು ಯಾರಿಗೂ ಈ ಪುಸ್ತಕ ಕಾಣಲಿಲ್ಲವಾ? ಎಂದು ಅನೇಕ ಬಾರಿ ಪ್ರಶ್ನಿಸಿಕೊಂಡಿದ್ದೇನೆ. ಗೆಳೆಯ/ಗೆಳತಿಯರೊಡನೆ ಚರ್ಚಿಸಿದ್ದೇನೆ. ಏಕೆಂದರೆ ಬಹುಶಃ ಯಾವುದೇ ಕೃಷಿ ವಿಶ್ವವಿದ್ಯಾಲಯದಲ್ಲಿ ಈ ಪುಸ್ತಕ ಇಲ್ಲ!

ನಮ್ಮ ದೇಶವಿನ್ನೂ ಬ್ರಿಟೀಷರ ದಾಸ್ಯದಲ್ಲಿದ್ದಾಗಲೇ, ಅಂದರೆ ೧೯೩೫ ರ ಸಮಯದಲ್ಲಿ ಆಧುನಿಕತೆ ಹಾಗೂ ಬಂಡವಾಳಶಾಹಿತನ ಇವುಗಳ ಬೆನ್ನು ಹತ್ತಿದ್ದ ಅಮೆರಿಕಾದಲ್ಲಿ ಪ್ರಕಟವಾದ Five Acres and independence ಪುಸ್ತಕ ಕೊಲೊಂಬೋ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ಮಾಡುತ್ತಿದ್ದ ಎಂ. ಜೆ. ಕೈನ್ಸ್ ಎಂಬ ಓರ್ವ ತೋಟಗಾರಿಕಾ ತಜ್ಞರು ಇದರ ಲೇಖಕರು. ಇದೆ ಲೇಖಕರ ಇತರೆ ಪುಸ್ತಕಗಳ ಶೀರ್ಷಿಕೆಗಳು ಹೀಗಿವೆ "Grow your own Fruit", "Food as Defence " ಈ ಬಗೆಯ ಕೃಷಿ ವಿಜ್ಞಾನ ಬರಹಗಳಲ್ಲಿ ಧಾರಾಳತನ, ನೆಮ್ಮದಿ ತುಂಬುವ ಬಗೆ ೩೦–೪೦ ರ ದಶಕದಲ್ಲೇ ಇತ್ತು.

ಅಮೆರಿಕಾದ ಸಂದರ್ಭವನ್ನು ಕೃಷಿಯಲ್ಲಿ ನಾವು ಆಲೋಚಿಸುವಾಗೆಲ್ಲ

ನೆನಪಾಗುವುದೆಂದರೆ ಅಲ್ಲಿನ ನೂರಾರೂ, ಸಾವಿರಾರು ಎಕರೆಗಳ ಬೃಹತ್ ವ್ಯವಸಾಯದ ಚಿತ್ರಣ. ಆರಂಭದಲ್ಲೂ ಅಭಿವೃದ್ಧಿಯನ್ನೇ ಬಂಡವಾಳದತ್ತ ತೊಡಗಿಸುತ್ತಲೇ ಬೆಳವಣಿಗೆಯನ್ನು ನಿರೀಕ್ಷಿಸುತ್ತಿದ್ದ ವಾತಾವರಣವದು. ಅಂತಹ ಪ್ರಪಂಚಕ್ಕೆ ಐದೇ ಎಕರೆಯಲ್ಲಿ ಬದುಕಿನ ಸ್ವಾತಂತ್ರ್ಯವನ್ನು ಕಟ್ಟಿ ಕೊಡುವ ಎಲ್ಲಾ ಆಶಯಗಳನ್ನೂ ಪುಸ್ತಕವು ಹೊತ್ತಿತ್ತು. ಈಗಿನ ಪುಸ್ತಕ ಪ್ರಕಟಣೆಗಳ ಭರಾಟೆಯಲ್ಲಿ ಇದ್ದೀತು ಬಿಡು, ಹತ್ತರಲ್ಲಿ ಹನ್ನೊಂದು ಎನ್ನುವಂತೆಯೂ ಇಲ್ಲ. ಪ್ರಕಟವಾದ ಏಳು ವರ್ಷಗಳಲ್ಲಿ ೧೯೪೩ ರ ಹೊತ್ತಿಗೆ ೧೪ ಮರು ಮುದ್ರಣಗಳನ್ನು ಕಂಡ ಅತ್ಯಂತ ಮಹತ್ವಾಕಾಂಕ್ಷಿ ಕನಸುಗಳನ್ನು ಬಿತ್ತಿದ ಪುಸ್ತಕ ಅದು. ಮತ್ತೂ ಆಶ್ಚರ್ಯವೆಂದರೆ ೧೯೪೨ರಲ್ಲಿ ಕೇವಲ ಮೊದಲ ನಾಲ್ಕು ತಿಂಗಳಲ್ಲಿ ನಾಲ್ಕು ಮುದ್ರಣಗಳನ್ನು ಕಂಡ ಪುಸ್ತಕ ಅದು. ನಮ್ಮ ರೈತರ ಪರವಾಗಿ ಆಲೋಚಿಸುವಾಗ ಬೇಸರ ಮತ್ತು ನೋವಿನ ಸಂಗತಿ ಏನೆಂದರೆ, ನಮ್ಮ ದೇಶದ ಬಹುಪಾಲು ಕೃಷಿ ವಿಶ್ವವಿದ್ಯಾಲಯಗಳು ಅಮೆರಿಕೆಯ ಸಂಶೋಧನಾ ಮತ್ತು ಶಿಕ್ಷಣ ಮಾದರಿಯನ್ನು ಅನುಸರಿಸುವ ನೆಪದಲ್ಲಿ ಅಲ್ಲಿಗೆ ಹೋದ ಅನೇಕರು ಅಲ್ಲೂ ಇಂತಹದ್ದೊಂದು ಇತ್ತು! ಎಂದು ಹೊತ್ತು ತರಲಿಲ್ಲ. ನಮ್ಮ ವಿಶ್ವವಿದ್ಯಾಲಯಗಳವರಿಗೆ ಅಷ್ಟೊಂದು ಹೆಸರು ಮಾಡಿದ ಈ ಪುಸ್ತಕ ಕಾಣದಿದ್ದುದು ಬಲು ದೊಡ್ಡ ಅಚ್ಚರಿ.

ವಾಸ್ತವವಾಗಿ ಐದು ಎಕರೆಯ ಸ್ವಾತಂತ್ರ್ಯದ ಆಶಯಗಳೇನು? ಹೆಚ್ಚೂ ಕಡಿಮೆ ೮೦ ವರ್ಷಗಳ ಹಿಂದೆಯೇ ಅಂತಹ ಚಿಂತನೆಗಳ ಉಗಮವಾಗಿದ್ದರೂ ಇಂದಿನವರೆಗೂ ಅವು ಹೆಚ್ಚು ತಿಳಿದಿಲ್ಲವೆನ್ನುವುದು ನಿಜವೆ! ಎಂ.ಜೆ. ಕೈನ್ಸ್ ಅವರ ಈ ಪುಸ್ತಕ ವಾಸ್ತವವಾಗಿ ಸಣ್ಣ ಜಮೀನಿನ ಆಯ್ಕೆ ಮತ್ತು ನಿರ್ವಹಣೆಯ ಸಮಗ್ರ ಮಾರ್ಗದರ್ಶನವನ್ನು ಪ್ರಾಯೋಗಿಕವಾಗಿ ಚರ್ಚಿಸುತ್ತದೆ. ಹಳ್ಳಿ ಮತ್ತು ನಗರ ಜೀವನಗಳ ವ್ಯತ್ಯಾಸಗಳನ್ನೂ ಕೃಷಿಯ ಹಿನ್ನೆಲೆಯಿಂದ ವಿವರಿಸುವ ಆರಂಭದಿಂದ ವೈಜ್ಞಾನಿಕ ವಿವರಗಳು ತೆರೆದುಕೊಳ್ಳುತ್ತವೆ. ಕೃಷಿಯಲ್ಲಿ ಜಾನುವಾರುಗಳ ಅನಿವಾರ್ಯ ಅಗತ್ಯವನ್ನು ಒತ್ತಿ ಹೇಳಿದೆ. ಕೃಷಿಯೆಂಬ ಉತ್ಪಾದಕ ಜಗತ್ತಿಗೆ ಅಗತ್ಯವಾದ ತ್ಯಾಜ್ಯಗಳ ಪುನರ್ಬಳಕೆಯಲ್ಲಿ ಕೈಗೊಳ್ಳಬೇಕಾದ ಸಂಗತಿಗಳಲ್ಲಿ ಹೇರಳವಾಗಿವೆ. ಮಣ್ಣು ತನ್ನ ಫಲವತ್ತತೆಯನ್ನು ನಿರಂತರವಾಗಿಸಿಕೊಂಡು ಹಸಿವಿನ ನಿವಾರಣೆಗಳ ಉಪಾಯಗಳನ್ನು ವಿವರಿಸುತ್ತದೆ.

ಕೃಷಿ ಒಂದು ವ್ಯವಸ್ಥೆಯಾಗಿ ವಿವಿಧ ಸಂಪನ್ಮೂಲಗಳನ್ನೂ, ಅಗತ್ಯ ವಾತಾವರಣವನ್ನೂ, ಸಕಾಲಿಕವಾದ ರೋಗ ಹಾಗೂ ಕೀಟಗಳ ನಿವಾರಣೆಯನ್ನೂ ಬಯಸುತ್ತದೆ. ಅದರ ಜೊತೆಗೆ ಬೆಳೆ ಸಮಯದ ಉತ್ಪಾದನೆಯಲ್ಲಿ ಜೇನು ಮಾಡುವ ಪರಾಗಸ್ಪರ್ಶ ಮುಂತಾದ ವಿಶೇಷಗಳನ್ನೂ ವಿವರಿಸುತ್ತದೆ. ಮಣ್ಣು, ನೀರು, ಸಸ್ಯ ಸಂರಕ್ಷಣೆಯ ಹಾಗೂ ಎಲ್ಲಾ ಜಮೀನಿನ ತಾಂತ್ರಿಕ ವಿವರಗಳ ಲೆಕ್ಕಾಚಾರವನ್ನೂ ರೈತರು ಹೇಗೆ ನಿರ್ವಹಿಸಬೇಕು ಎಂಬುದನ್ನೂ ಮಾರ್ಗದರ್ಶನ ಮಾಡುತ್ತದೆ. ಕೃಷಿಯಲ್ಲಿ ಬೆಳೆ ಸಂದರ್ಭದಂತೆ ಬೆಳೆ ಕೊಯಿಲಿನ ನಂತರದ ತಂತ್ರಜ್ಞಾನಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಇದು ಕೃಷಿಯನ್ನು ಸುಸ್ಥಿರವಾಗಿ ನಿರಂತರವಾಗಿ ಹಸಿವಿನ ನಿವಾರಣೋಪಾಯವಾಗಿ ಬಳಸುವ ಜಾಣ್ಮೆಯನ್ನು ಒದಗಿಸುತ್ತವೆ. ಕೊಯಲೋತ್ತರ ನಷ್ಟಗಳ ಬಗೆಗೆ ರೈತರಿಗೆ ಅರಿವು ಇರುವುದೂ ಬಹು ಮುಖ್ಯವಾಗುತ್ತದೆ. ಜಗತ್ತಿನ ಬಹುಪಾಲು ಆಹಾರದ ನಷ್ಟವು ಜಮೀನಿನಿಂದ ಹೊರ ಬಂದ ನಂತರವೇ ಎಂಬುದೂ ಇಂದಿಗೂ ನಡೆದೇ ಬಂದ ಸಂಗತಿ. ಅದರ ಕುರಿತೂ ಆರಂಭಿಕ ಚರ್ಚೆಗಳನ್ನು ಹುಟ್ಟು ಹಾಕಿದ್ದ ಹೆಮ್ಮೆ ಕೈನ್ಸ್ ಅವರಿಗಿದೆ. ಮೂಲತಃ ಅವರು ಅರ್ಥಶಾಸ್ತ್ರವನ್ನೂ ತೋಟ ನಿರ್ವಹಣೆಯಲ್ಲಿ ಪ್ರಬಲವಾಗಿ ಮನಗಂಡವರಾಗಿದ್ದು, ವ್ಯವಹಾರಿಕ ಜಾಣ್ಮೆಯನ್ನು ರೈತರು ಕಲಿಯುವ ಅಗತ್ಯವನ್ನು ಅವರು ಪ್ರಸ್ತಾಪಿಸುತ್ತಾರೆ.

ಕೃಷಿಯ ಯಶಸ್ಸಿನ ಗುಟ್ಟಿನ ದರ್ಶನ ಬಹಳ ಸೊಗಸಾಗಿದೆ. ನಿರಂತರ ಯಶಸ್ಸು ಕಾಣಲು ರೈತರೇನು ಮಾಡಬೇಕು? ಸದಾ ಆಲೋಚಿಸಿ ಕಾರ್ಯಪವೃತ್ತನಾಗುವ ರೈತರಿಗೆ ಯಶಸ್ಸು ಖಂಡಿತಾ. ತುಂಡು ನೆಲದಲ್ಲೇ ನೆಮ್ಮದಿಯನ್ನು ಅರಸಿ, ಕಾಯಕವನ್ನೇ ದೈವವೆಂಬ ಒಳಗೊಳ್ಳುವ ವ್ಯವಸಾಯವು ಗೆಲ್ಲುತ್ತದೆ. ರೈತ ತನ್ನೆಲ್ಲಾ ಕೆಲಸವನ್ನೂ, ಲೆಕ್ಕಾಚಾರ ಮಾಡುತ್ತಲೇ ಮುನ್ನೆಡೆಯಬೇಕು. ಒಬ್ಬ ಒಳ್ಳೆಯ ಶಿಕ್ಷಕ ಸದಾ ತನ್ನ ತರಗತಿಯ ಮಕ್ಕಳನ್ನು ವೀಕ್ಷಿಸುವಂತೆ ಇಡೀ ಜಮೀನಿನ್ನು ವೀಕ್ಷಿಸುತ್ತಿರಬೇಕು. ಆಗ ಜಯ ಸಾಧ್ಯ! ಜತೆಗೆ ರೈತರೂ ನಿತ್ಯವೂ ಹಣದ ಅಗತ್ಯವನ್ನು ಬಯಸುವವರೇ ಅಗಿದ್ದೂ ಅವರ ಉತ್ಪನ್ನಗಳಲ್ಲೂ ದಿನವೂ ಮಾರುವ ಪರಿಕರಗಳಿರುವ ಬಗ್ಗೆ ಒತ್ತಾಯಿಸುತ್ತದೆ. ಬಹು ಮುಖ್ಯವಾದದ್ದೆಂದರೆ ಇದೆಲ್ಲವನ್ನೂ ಐದೇ ಎಕರೆಯ ಬದುಕನ್ನಾಗಿ ವಿವರಿಸುವ ಪುಸ್ತಕವು ಹೆಚ್ಚು ನೆಲವನ್ನು ಹೊಂದಿರುವ ಅಪಾಯವನ್ನೂ ವಿವರಿಸುತ್ತದೆ. ಅತಿ ಹೆಚ್ಚು ನೆಲದ ನಿರ್ವಹಣೆಯ ನಷ್ಟ ಹಾಗೂ ಅಸಾಧ್ಯದ ಸಂಗತಿಗಳನ್ನೂ ವಿವರಿಸುತ್ತದೆ.

ಸಹಜವಾಗಿ ಮಾನವ ಸಂಸ್ಕೃತಿಯು ಯಾವುದೇ ವೃತ್ತಿಯಿಲ್ಲದಿದ್ದರೂ ಬದುಕಿ ಉಳಿಯುತ್ತದೆ. ಆದರೆ ಕೃಷಿಯೇ ಇಲ್ಲವಾದರೆ ಸಂಸ್ಕೃತಿಯೂ ನಾಶವಾಗುತ್ತದೆ. ಕೃಷಿಯಲ್ಲಿ ಮಾತ್ರವೇ ನಮ್ಮ ಅನೇಕ ಅಗತ್ಯಗಳನ್ನು ಒದಗಿಸಿಕೊಂಡು ಸ್ವತಂತ್ರವಾಗಿ ಜೀವಿಸಲು ಸಾಧ್ಯ ಅದೂ ಒಂದು ಪುಟ್ಟ ನೆಲದಲ್ಲಿ!

ಐದು ಎಕರೆಯ ಸ್ವಾತಂತ್ರ್ಯದ ಬಗೆಗಿನ ಪುಸ್ತಕವನ್ನು ೧೯೩೦ರ ದಶಕದಲ್ಲಿ ಎಂ. ಜಿ. ಕೈನ್ಸ್ ಅವರು ಪ್ರಕಟಿಸಿದ್ದರು. ಪ್ರಸ್ತುತ ಸನ್ನಿವೇಶದಲ್ಲಿ ಇಂತಹದ್ದೊಂದು ನಮ್ಮ ನೆಲದಲ್ಲೂ ಸಾಧ್ಯವಾಗಬೇಕೆಂಬ ಬಯಕೆಯಲ್ಲಿ ಆಲೋಚಿಸಲು ಸಾಕಷ್ಟು ಕಾರಣಗಳಿವೆ. ಆದರೆ ಕೃಷಿ ತಂತ್ರಜ್ಞಾನಗಳ ಕುರಿತಂತೆ ಎಂಟು ದಶಕಗಳನ್ನು ದಾಟಿದ ನಂತರ ನಾವದನ್ನು ಆಲೋಚಿಸುತ್ತಿದ್ದೇವೆ, ಜೊತೆಗೆ ನೆಲವೂ ಭಿನ್ನವಾದದು. ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಯಾವುದೇ ಸಂಗತಿಗಳಾಗಲಿ ಕಾಲ ಮತ್ತು ಭೌಗೋಳಿಕ ಆಯಾಮವುಳ್ಳವು ಎಂಬುದನ್ನು ಕೂಡ ಆಲೋಚನೆಗೆ ಸೇರಿಸಿಕೊಳ್ಳುವುದು ಸಮಂಜಸವಾದದು. ಸನ್ನಿವೇಶವನ್ನು ಮಾತ್ರ ಗಮನಕ್ಕೆ ತೆಗೆದುಕೊಂಡರೆ ನಮ್ಮದು ಬಹುಪಾಲು ಸಣ್ಣ ಹಿಡುವಳಿದಾರರ ಕೃಷಿ. ಆದ್ದರಿಂದ ಆನ್ವಯಿಕತೆಯ ಹಿತದಲ್ಲಿ ಹೆಚ್ಚಿನ ಅನುಕೂಲಗಳಿವೆ.

ಗಮನಿಸಬಹುದಾದ ಒಂದು ಸಂಗತಿ ಎಂದರೆ ಕೈನ್ಸ್ ಕೊಟ್ಟಿರುವ ಸಂಗತಿಗಳು ಪರಿಕಲ್ಪನೆ ಮತ್ತು ಸಾಧ್ಯತೆಗಳಲ್ಲಿ ಅತ್ಯಂತ ಮಹತ್ವವಾದ ಪುಸ್ತಕ ಇದಾಗಿದೆ. ●

ಖಾದಿ ನಡೆದು ಬಂದ ದಾರಿ

ಸಂತೋಷ ಕೌಲಗಿ

ಸಂತ ವಿನೋಬಾ ಒಮ್ಮೆ ಮಾತನಾಡುತ್ತಾ "ಅಹಿಂಸೆಯ ವಿಚಾರವನ್ನು ಹಿಂದೆಯೂ ಹಲವರು ಹೇಳಿದ್ದಾರೆ. ಮುಂದೆಯೂ ಹೇಳುತ್ತಾರೆ, ಅದು ಅನಿವಾರ್ಯ ಕೂಡ, ಅದನ್ನು ಹೇಳಲು ನಮಗೆ ಗಾಂಧಿ ಏನು ಬೇಕಿಲ್ಲ, ಆದರೆ ಖಾದಿಯ ಮಹತ್ವ ಮತ್ತು ಅದಕ್ಕಿರುವ ವಿವಿಧ ಆಯಾಮಗಳನ್ನು ತಿಳಿಸಲು ಗಾಂಧಿಯನ್ನು ಬಿಟ್ಟು ಯಾರಿಗೂ ಆಗುತ್ತಿರಲಿಲ್ಲ" ಎಂದಿದ್ದಾರೆ. ಹೌದು, ಗಾಂಧಿಯವರು ಸಮಾಜಕ್ಕೆ ನೀಡಿದ ಮಹತ್ವದ ಕೊಡುಗೆ ಯಾವುದು ಎಂಬ ಪ್ರಶ್ನೆಗೆ, ಹಲವರು ಹಲವು ರೀತಿ ಉತ್ತರಿಸಬಹುದು. 'ಸ್ವತಂತ್ರ ತಂದು ಕೊಟ್ಟರು' ಎಂಬ ಸರಳವಾದ ಲೌಕಿಕ ಉತ್ತರದಿಂದ ಹಿಡಿದು, ಅತ್ಯಂತ ಗಹನವಾದ ಆಧ್ಯಾತ್ಮಿಕ ಚಿಂತನೆಯವರಗೆ ಅವರ ಕೊಡುಗೆಯನ್ನು ಗುರುತಿಸಬಹುದು. ಆ ಗುರುತಿಸುವಿಕೆ ವ್ಯಕ್ತಿಗತವಾದದ್ದು ಮತ್ತು ಆ ವ್ಯಕ್ತಿಯ ಅನುಭವ ಮತ್ತು ಚಿಂತನೆಯ ಮಾಗುವಿಕೆಯನ್ನು ಅವಲಂಬಿಸಿದ್ದು.

ಸಾವಿರಾರು ವರ್ಷಗಳಿಂದ ಗ್ರಾಮೀಣ ಬದುಕಿನ ಭಾಗವಾಗಿದ್ದ ನಾರಿನಿಂದ ನೂಲು ಮಾಡುವ 'ಚರಕ' ಎಂಬ ಸರಳ ಯಂತ್ರಕ್ಕೆ ಗಾಂಧೀಜಿಯವರು ತಂದು ಕೊಟ್ಟ ಮಹತ್ವವವನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯೇ ಅತ್ಯಂತ ರೋಚಕವಾದುದು. ರಾಜಕೀಯ, ಸ್ವತಂತ್ರ, ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ವ್ಯವಸ್ಥೆಯ ಬಗೆಗಿನ ಗಾಂಧೀಜಿಯವರ ಅಸಂಪ್ರದಾಯಿಕವಾದ ದೃಷ್ಟಿಕೋನ ಕುತೂಹಲಕಾರಿಯಾದುದು.

ಇಂದಿಗೂ ಕೂಡ ನಿಜವಾದ ಸುಸ್ಥಿರ ಅಭಿವೃದ್ಧಿಯ ಬಗ್ಗೆ ಗಂಭೀರವಾಗಿ ಯೋಚಿಸಿ, ನೀವು ಅದಕ್ಕೊಂದು ಉತ್ತರ ಹುಡುಕಲು ಸಂಶೋಧನೆಯಲ್ಲಿ ತೊಡಗಿದರೆ, ಕೃಷಿ ಮತ್ತು ಖಾದಿಯ ಸುತ್ತಲೇ ನಿಮ್ಮ ವಿಚಾರ ತಿರುಗಬೇಕಾಗುತ್ತದೆ. ಅದು ಅನಿವಾರ್ಯ ಕೂಡ.

ಸರಳವಾಗಿ ಹೇಳಬೇಕೆಂದರೆ ಕೈಯಿಂದ ನೂತು, ಕೈಯಿಂದ ತಯಾರಾದ ಬಟ್ಟೆಗೆ ಖಾದಿ ಎನ್ನುತ್ತಾರೆ. ಭಾರತೀಯರ ಸ್ವತಂತ್ರ ಹೋರಾಟದ ಭಾಗವಾದ ಈ ಬಟ್ಟೆಯು ಭಾರತದ ರಾಜಕೀಯ, ಅರ್ಥ ವ್ಯವಸ್ಥೆ, ಸಂಸ್ಕೃತಿಯ ಬಗ್ಗೆ ಎಲ್ಲೇ ಚರ್ಚೆ ನಡೆಯುತ್ತಿದ್ದರೂ ಚರ್ಚೆಯ ಮಧ್ಯೆ ಒಮ್ಮೆಯಾದರೂ ಬಂದುಹೋಗುತ್ತದೆ.

ಚರಕದ ಅನ್ವೇಷಣೆ

೧೯೧೭ ನೇ ಇಸವಿಯವರೆಗೂ ಗಾಂಧಿಯವರಿಗೆ ಮಗ್ಗಕ್ಕೂ ಚರಕಕ್ಕೂ ವ್ಯತ್ಯಾಸ ಗೊತ್ತಿರಲಿಲ್ಲ. ಆದರೆ ಅವರು, ಯಾವುದು ಭಾರತದ ಬಡತನವನ್ನು ಹೊರಹಾಕಬಲ್ಲದೋ, ಅದೇ ಸ್ವತಂತ್ರವನ್ನು ತಂದುಕೊಡಬಲ್ಲದು, ಎಂದು ಆಳದಲ್ಲಿ ನಂಬಿದ್ದರು. ೧೯೧೫ ರಲ್ಲಿ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ಗಾಂಧಿ, ಅಹಮದಾಬಾದ್ ಬಳಿ ಕೋಚರಬ್ ನಲ್ಲಿ ಆಶ್ರಮವನ್ನು

ಪ್ರಾರಂಭಿಸಿದರು. ಆಶ್ರಮವಾಸಿಗಳೆಲ್ಲರೂ ಕೈಮಗ್ಗದಲ್ಲಿ ತಯಾರಾದ ಬಟ್ಟೆ ಧರಿಸಿ, ಸ್ವದೇಶಿ ವಿಚಾರವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದರು. ಅದಕ್ಕಾಗಿ ಆಶ್ರಮದಲ್ಲಿ ಮಗ್ಗಗಳನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದರು. ಆಶ್ರಮದಲ್ಲಿ ಮಗ್ಗವನ್ನು ಸ್ಥಾಪಿಸಿ, ನೇಯ್ಗೆ ಹೇಳಿಕೊಡಲು ಒಬ್ಬ ನೇಕಾರನನ್ನು ಪತ್ತೆ ಹಚ್ಚಿದರು. ನೇಯ್ಗೆ ಕೆಲಸ ಪ್ರಾರಂಭವಾಯಿತು. ಗಾಂಧಿಗೆ ಇದರಿಂದ ತಾವು ಹೆಚ್ಚಿನದೇನನ್ನೋ ಸಾಧಿಸಿದ್ದೇವೆಂದು ಅನಿಸಲಿಲ್ಲ. ಏಕೆಂದರೆ ಆ ನೂಲು ವಿದೇಶಿ ಗಿರಣಿಗಳಿಂದ ಬಂದದ್ದಾಗಿತ್ತು. ಹಿಂದೆ ನಮ್ಮ ಜನ ನೂಲನ್ನು ಹೇಗೆ ತಯಾರಿಸುತ್ತಿದ್ದರು ಎಂದು ಚಿಂತಿಸತೊಡಗಿದರು. ೧೯೧೭ರಲ್ಲಿ ಅವರ ಸಂಪರ್ಕಕ್ಕೆ ಬಂದ ಗಂಗಾಬೆಹನ್ ಮುಜುಂದಾರ್ ಅವರು ವಡೋದರಾ ಬಳಿಯ ವಿಜಾಪುರ ಎಂಬ ಗ್ರಾಮದಲ್ಲಿ ನೂಲುಗಾರರು ಇರುವುದನ್ನು ತೋರಿಸಿದರು. ಆ ಗ್ರಾಮದಲ್ಲಿ ಎಲ್ಲೋ ಕೆಲವರು ನೂಲುತ್ತಿದ್ದರೆ ಹೆಚ್ಚಿನ ನೂಲುಗಾರರು ತಮ್ಮ ನೂಲುವ ಯಂತ್ರವನ್ನು ಅಟ್ಟಕ್ಕೆ ಸೇರಿಸಿದ್ದರು. ಗಂಗಾ ಬೆಹನ್ ಆ ನೂಲುಗಾರರ ಮನವೊಲಿಸಲು ಪ್ರಯತ್ನಿಸಿ ಸಫಲರಾದರು. ಆದರೆ ನೂಲುಗಾರರು ಒಂದು ಷರತ್ತನ್ನು ಹಾಕಿದರು. ನೀವು ಹಂಜಿ (ನೂಲಲು ಬೇಕಾದ ಹದಗೊಳಿಸಿದ ಹತ್ತಿ) ಸರಬರಾಜು ಮಾಡಿ, ನೂತ ದಾರವನ್ನು ಯೋಗ್ಯ ಬೆಲೆಗೆ ಕೊಂಡರೆ ಮಾತ್ರ, ತಾವು ಉದ್ಯೋಗವನ್ನು ಮತ್ತೆ ಕೈಗೊಳ್ಳುವುದಾಗಿ ಹೇಳಿದರು. ಆದರೆ ಹಂಜಿ ತರುವುದು ಎಲ್ಲಿಂದ? ಗಾಂಧಿ, ಅಹಮದಾಬಾದ್‌ನ ಗಿರಣಿಯ ಹಿತೈಷಿಗಳಿಂದ ಹಂಜಿ ಪಡೆದು ವಿಜಾಪುರಕ್ಕೆ ಕಳುಹಿಸಿ ನೂಲು ತೆಗೆಯುವ ವ್ಯವಸ್ಥೆ ಮಾಡಿದರು. ವಿಜಾಪುರದ ನೂಲುಗಾರರು ನೂಲುಗಾರಿಕೆಯನ್ನು ಪ್ರಾರಂಭಿಸಿ ಆಶ್ರಮಕ್ಕೆ ನೂಲನ್ನು ಸರಬರಾಜು ಮಾಡಲು ಪ್ರಾರಂಭಿಸಿದರು. ಸ್ವದೇಶಿಯ ಬಟ್ಟೆ ಮತ್ತೊಂದು ಹೆಜ್ಜೆ ಮುಂದೆ ಹೋಯಿತು. ಆದರೆ ಗಿರಣಿಯಲ್ಲಿ ತಯಾರಾದ ಹಂಜಿಯಿಂದ ನೂಲು ತೆಗೆಯುವುದು ಸ್ವದೇಶಿಯ ವಿಚಾರಕ್ಕೆ ಇನ್ನೂ ದೂರದಲ್ಲಿದೆ ಎಂದು ಗಾಂಧಿಗೆ ಅನಿಸತೊಡಗಿತು. ಹಂಜಿಯನ್ನು ತಯಾರಿಸುವ ಕೆಲಸ ಹಿಂದೆ ಹೇಗೆ ಆಗುತ್ತಿತ್ತು ಎಂಬುದನ್ನು ಹುಡುಕುತ್ತಾ ಹೊರಟಾಗ ಪಿಂಜಾರರು ಈ ಕೆಲಸವನ್ನು ಮಾಡುತ್ತಿದ್ದರು ಎಂದು ತಿಳಿಯಿತು. ಪಿಂಜಾರರೂ ಆಗಲೇ ತಮ್ಮ ಪಿಂಜಣಗಳನ್ನು ಅಟ್ಟಕ್ಕೆ ಎಸೆದಿದ್ದರು. ಹೀಗೆ ಗ್ರಾಮೀಣ ಭಾರತದ ಉದ್ಯೋಗಗಳೆಲ್ಲವೂ ೧೫೦ ವರ್ಷದ ಬ್ರಿಟೀಷ್ ಆಳ್ವಿಕೆಯಲ್ಲಿ ಅಟ್ಟ ಸೇರಿಹೋಗಿದ್ದವು. ಪಿಂಜಾರರ ಮನವೊಲಿಸಿ ಅವರು ಹತ್ತಿಯನ್ನು ಹಿಂಜಿ ಕೊಡುವಂತೆ ಮಾಡಲಾಯಿತು. ಮುಂದೆ ಹೆಚ್ಚಿನ ಪರಿಶ್ರಮದಿಂದ ಆಶ್ರಮದಲ್ಲೆ ನೂಲುಗಾರಿಕೆಯ ಕೆಲಸ ಪ್ರಾರಂಭವಾಯಿತು. ಹಲವು ಆಶ್ರಮವಾಸಿಗಳು ನೂಲುಗಾರಿಕೆಯನ್ನು ಕರಗತಗೊಳಿಸಿಕೊಂಡರು. ಮತ್ತಷ್ಟು ಜನ ನೇಯ್ಗೆಯಲ್ಲಿ ಪ್ರಾವಿಣ್ಯತೆ ಪಡೆದರು. ಆಶ್ರಮದಲ್ಲಿ ತಯಾರಾದ ೩೦ ಇಂಚು ಪನ್ನದ ಖಾದಿ ಬಟ್ಟೆಗೆ ೧ ಗಜಕ್ಕೆ ೪ ಆಣೆ ವೆಚ್ಚ ಆಗತೊಡಗಿತು.

ಗಾಂಧೀಜಿ ಸಂಪೂರ್ಣವಾಗಿ ಕೈಯಿಂದಲೇ ತಯಾರಾದ ಖಾದಿ ಬಟ್ಟೆಯನ್ನು ತಾವು ಉಡಲು ಪ್ರಾರಂಭಿಸಬೇಕು ಎಂಬ ತೀರ್ಮಾನಕ್ಕೆ ಬಂದಿದ್ದರು. ಆದರೆ ಆಶ್ರಮದಲ್ಲಿ ತಯಾರಾಗುತ್ತಿದ್ದ ಖಾದಿ ಕೇವಲ ೩೦ ಇಂಚು ಅಗಲದ ಖಾದಿಯಾಗಿತ್ತು. ಅದನ್ನು ಬಳಸಿ ಧೋತರ ಉಡಲು ಆಗುತ್ತಿರಲಿಲ್ಲ. ಆಗ ಗಾಂಧಿಯವರು ಗಂಗಾ ಬೆಹನ್ ಅವರಿಗೆ ಒಂದು ತಿಂಗಳ ಗಡುವು ನೀಡಿ ಅಷ್ಟರಲ್ಲಿ ನೀನು ೪೫ ಇಂಚಿನ ಬಟ್ಟೆ ತಯಾರಿಸಿ ಕೊಡದಿದ್ದರೆ ೩೦ ಇಂಚಿನ ಖಾದಿಯನ್ನೇ ಧೋತರವಾಗಿ ಉಡಲು ಪ್ರಾರಂಭಿಸುತ್ತೇನೆ ಎಂದರು. ಗಂಗಾ ಬೆಹನ್ ಇದನ್ನು ಸವಾಲಾಗಿ ಸ್ವೀಕರಿಸಿ, ಒಂದು ತಿಂಗಳೊಳಗೆ ೪೫ ಇಂಚಿನ ಖಾದಿಯನ್ನು ತಯಾರಿಸಿ ಕೊಟ್ಟರು. ಅಂದಿನಿಂದ ಗಾಂಧಿ ಸಂಪೂರ್ಣವಾಗಿ ಖಾದಿಧಾರಿಯಾಗಿ 'ಸ್ವದೇಶಿ' ಎಂಬ ವಿಚಾರಕ್ಕೆ ಸರಿಯಾದ ವ್ಯಾಖ್ಯೆಯನ್ನು ನೀಡಿದರು. ಗಾಂಧಿಯವರು ಸ್ವದೇಶಿ ವಿಚಾರವನ್ನು ಮಾತನಾಡುವ

ಮೊದಲೇ ದಾದಾಭಾಯಿ ನವರೋಜಿ ಅಂತಹವರು ಸ್ವದೇಶಿ ವಸ್ತುಗಳನ್ನು ಕೊಳ್ಳುವ ವಿಚಾರವಾಗಿ ಗ್ರಾಹಕರನ್ನು ಜಾಗ್ರತಗೊಳಿಸುವ ಪ್ರಯತ್ನ ಮಾಡಿದ್ದರು. ಆದರೆ ಅವರ ಸ್ವದೇಶಿ ಕಲ್ಪನೆ ಗಾಂಧಿಯ ಸ್ವದೇಶಿ ಕಲ್ಪನೆಯಷ್ಟು ತೀವ್ರವಾಗಿರಲಿಲ್ಲ. ಗಾಂಧಿಯವರ ಮುಂಚಿನ ದೇಶದ ನೇತಾರರ ಸ್ವದೇಶಿ ಕಲ್ಪನೆಯು, ನಮ್ಮ ಬಾಬಾ ರಾಮದೇವ್ ರ ಕಲ್ಪನೆಯಷ್ಟಿತ್ತು ಅನಿಸುತ್ತದೆ. ಒಟ್ಟಿನಲ್ಲಿ ದೇಶದಲ್ಲಿ ತಯಾರಾಗಿದ್ದರೆ ಆಯಿತು ಎಂಬ ತಿಳಿವಳಿಕೆ ಅವರದಾಗಿತ್ತು. ಇದರಿಂದ ಮುಂದುವರೆದ ಗಾಂಧಿ, ಒಂದು ವಸ್ತುವು ದೇಶದಲ್ಲಿ ತಯಾರಾದರೆ ಮಾತ್ರ ಅದು ಸ್ವದೇಶಿಯಾಗುವುದಿಲ್ಲ, ಬದಲಿಗೆ ದೇಶದಲ್ಲಿ ಅದನ್ನು ಯಾರು ತಯಾರಿಸುತ್ತಿದ್ದಾರೆ, ಎಲ್ಲಿ ತಯಾರಿಸುತ್ತಿದ್ದಾರೆ, ಯಾರು ಬಳಸುತ್ತಿದ್ದಾರೆ ಎಂಬುದರ ಜೊತೆಗೆ, ಅದರಿಂದ ಬರುವ ಹಣ ಯಾರಿಗೆ ಹೋಗುತ್ತದೆ ಎಂಬುದೂ ಮುಖ್ಯವಾಗುತ್ತದೆ ಎಂದರು. ಈ ತಿಳಿವಳಿಕೆಗೆ ಅತ್ಯಂತ ಹತ್ತಿರವಾದ, ಎಲ್ಲರೂ ಮಾಡಬಹುದಾದ, ಸರಳವಾದ ಉದ್ಯೋಗ ನೂಲು ತೆಗೆಯುವುದೇ ಆಗಿತ್ತು. ಇಂದಿಗೂ ಕೂಡ ನಮಗೆ ಸ್ವದೇಶಿ ಮತ್ತು ಸ್ವಾವಲಂಬನೆಯ ವಿಚಾರದಲ್ಲಿ ನಿಶ್ಚಲವಾದ ವಿಶ್ವಾಸವಿದ್ದರೆ, ನೂಲುಗಾರಿಕೆಯಷ್ಟು ಆಪ್ತವಾದ ಚಟುವಟಿಕೆ ಮತ್ತೊಂದು ಇರಲಿಕ್ಕಿಲ್ಲ. ಹಾಗಾಗಿ ಗಾಂಧೀ ದೇಶದ ಉದ್ದಗಲಕ್ಕೂ ಇದ್ದ ಈ ಸರಳ ಯಂತ್ರಕ್ಕೆ ಮತ್ತೆ ಮಹತ್ವ ತಂದು ಕೊಟ್ಟು ಅದರಲ್ಲಿ ನೂಲುವುದು ಮತ್ತು ಅದರಿಂದ ತಯಾರಾದ ಬಟ್ಟೆ ಧರಿಸುವುದು ಅತ್ಯಂತ ಗೌರವವಾದ ಮತ್ತು ಹೆಮ್ಮೆಯ ಸಂಗತಿಯಾಗಿ ಮಾಡಿ ಸಂಚಲನವನ್ನುಂಟುಮಾಡಿದರು. ಇದೇ ತಿರುಗಣಿಯನ್ನು, 'ಎಂದೂ ಸೂರ್ಯ ಮುಳುಗದ ಸಾಮ್ರಾಜ್ಯ'ದ ಮೇಲೆ ತಿರುಗಿಸಿ ಆ ಸಾಮ್ರಾಜ್ಯದ ಮೇಲೆ ಮೋಡ ಕವಿಯುವಂತೆ ಮಾಡಿದರು. ಅಂದು ಪ್ರಾರಂಭವಾದ ಖಾದಿ ಚಳುವಳಿಯು ಚಾಲನೆ ಪಡೆದು ಇಂದಿಗೆ ನೂರು ವರ್ಷವಾಗಿದೆ. ಈ ನೂರು ವರ್ಷದಲ್ಲಿ ಅನೇಕ ಏರು ಬೀಳುಗಳನ್ನು ಕಂಡರೂ, ಹೊಸ ತಲೆಮಾರಿನ ಯುವಕರು ಇದನ್ನು ಮೆಚ್ಚಿ, ಈ ಚಳುವಳಿಯ ಉದ್ದೇಶವನ್ನು ಸಾಕಾರಗೊಳಿಸಲು ಪ್ರೇರಣೆ ನೀಡಿದೆ.

ಖಾದಿ ಯಾತ್ರೆ

ದೇಶದಲ್ಲಿ ಖಾದಿ ಚಟುವಟಿಕೆ ವಿಸ್ತಾರಗೊಳ್ಳುತ್ತಿದ್ದಂತೆ, ಅಖಿಲ ಭಾರತ ಚರಕಾ ಸಂಘ ರಾಷ್ಟ್ರ ಮಟ್ಟದಲ್ಲಿ ಖಾದಿ ಚಟುವಟಿಕೆಯನ್ನು ಮುನ್ನಡೆಸಲು ಸಜ್ಜು ಗೊಂಡಿತು. ಗಾಂಧಿ ಅದರ ಮೊದಲ ಅಧ್ಯಕ್ಷರಾದರು. ಚರಕ ಸಂಘ ದೇಶದಾದ್ಯಂತ ಖಾದಿ ಚಟುವಟಿಕೆಯನ್ನು ಚುರುಕಗೊಳಿಸುವ ಕೆಲಸ ಪ್ರಾರಂಭಿಸಿತು. ನೂಲುಗಾರಿಕೆಯನ್ನೇ ಜೀವನೋಪಾಯ ಮಾಡಿಕೊಂಡ ಬಡವರ, ಉತ್ಪಾದನೆ ಹೆಚ್ಚಿಸಲು ಅಂಬರ ಚರಕಾಗಳು ಸಂಶೋಧನೆಗೊಂಡವು. ಚರಕಾದಲ್ಲಿ ತಾಂತ್ರಿಕವಾಗಿ ಏನೇನು ಸುಧಾರಣೆ ತರಲು ಸಾಧ್ಯವಿದೆಯೋ ಅದೆಲ್ಲವನ್ನು ತರಲು ಅಂದಿನ ಯುವ ಪಡೆ ಹಗಲು ರಾತ್ರಿ ಶ್ರಮಿಸಿತು. ವಿಭಿನ್ನ ಮಾದರಿಯ ಚರಕಾಗಳು ದೇಶದ ವಿವಿದೆಡೆ ಜನಪ್ರಿಯವಾಗತೊಡಗಿತು. ಖಾದಿಯ ವ್ಯಾಪಾರಕ್ಕೂ ಅನೇಕ ಜನರ ಮುಂದಾದರು. ೧೯೨೭-೨೮ರಲ್ಲಿ ೨೪ ಲಕ್ಷ ರೂಪಾಯಿ ಬೆಲೆಯ ಖಾದಿಯನ್ನು ಸಂಘ ಮಾರಿತು. ಇದರಲ್ಲಿ ಶೇ.೬೦ ಭಾಗ ಹಣ ನೇರವಾಗಿ ನೂಲುಗಾರರಿಗೆ ತಲುಪುವ ವ್ಯವಸ್ಥೆ ಮಾಡಲಾಗಿತ್ತು. ಒಂದು ಲಕ್ಷ ನೂಲುಗಾರರು ಚರಕಾ ಸಂಘದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಒಟ್ಟಿನಲ್ಲಿ ಗ್ರಾಮೀಣ ಭಾರತವನ್ನು ಕೇಂದ್ರವಾಗುಳ್ಳ, ನಿರುದ್ಯೋಗಿಗಳಾದ ಗ್ರಾಮೀಣ ಜನರ ಕೈಗೆ ಕೆಲಸ ನೀಡುವ, ಬಡವರ ಹೊಟ್ಟೆಗೆ ಅನ್ನ ನೀಡುವ ಒಂದು ಪರ್ಯಾಯ ಅರ್ಥ ವ್ಯವಸ್ಥೆ ರೂಪುಗೊಳ್ಳತೊಡಗಿತು. ಬಡವರು ಅಂಬರ ಚರಕದಿಂದ ನೂಲು ತೆಗೆದು ಅನ್ನ ಹುಟ್ಟಿಸಿ ಕೊಂಡರೆ, ನಗರದ ಅನುಕೂಲಸ್ಥ ಜನ ಸ್ವಾವಲಂಬಿ ಖಾದಿ ತಯಾರಿಸಲು ವಿವಿಧ ರೀತಿಯ ಪೆಟ್ಟಿಗೆ ಚರಕಗಳನ್ನು ಬಳಸ ತೊಡಗಿದರು. ತಾವು ನೂತ ಖಾದಿ ದಾರವನ್ನು, ಖಾದಿ ಭಂಡಾರಗಳಿಗೆ ನೀಡಿ, ಪ್ರತಿಯಾಗಿ ಖಾದಿ ಬಟ್ಟೆ ಪಡೆದು ಹೆಮ್ಮೆಯಿಂದ

ಅದನ್ನು ಧರಿಸ ತೊಡಗಿದರು. ಒಟ್ಟಿನಲ್ಲಿ ಖಾದಿಯು– ಸ್ವದೇಶಿ, ದೇಶಾಭಿಮಾನ, ಪ್ರಾಮಾಣಿಕತೆ, ಶ್ರಮ ಮತ್ತು ಸರಳ ಜೀವನದ ಪ್ರತೀಕವಾಗಿ ಇಡೀ ದೇಶವನ್ನು ಆವರಿಸಿತು. ನಿರುದ್ಯೋಗದಿಂದ ನಳಲುತ್ತಿದ್ದ ಈ ದೇಶದ ಹಳ್ಳಿಗಳಲ್ಲಿ ಮತ್ತೆ ಉದ್ಯೋಗದ ವಾತಾವರಣ ಸೃಷ್ಟಿಯಾಯಿತು. ಈ ಕೆಲಸದಲ್ಲಿ ಗಾಂಧಿಯವರೊಂದಿಗೆ ಸಾವಿರಾರು ಸ್ವಯಂಸೇವಕರು ಕೆಲಸ ಮಾಡತೊಡಗಿದರು. ಗಾಂಧಿಗೆ ಬ್ರಿಟೀಷರ ದಾಸ್ಯದ ವಿಮೋಚನೆಗಿಂತ ಸರ್ಕಾರದ ನೆರವಿಲ್ಲದೆ, ಜನಶಕ್ತಿಯನ್ನು ಬಳಸಿ, ನಿರುದ್ಯೋಗ ಮತ್ತು ಬಡತನದಿಂದ ದೇಶವನ್ನು ವಿಮೋಚನೆ ಮಾಡುವುದು ಮತ್ತು ದೇಶದ ನಾಗರಿಕರ ನೈತಿಕ ಪ್ರಜ್ಞೆಯನ್ನು ಹೆಚ್ಚಿಸುವುದು ಆದ್ಯತೆಯ ಕೆಲಸ ಎನ್ನಿಸಿತು.

ಆದರೆ...

ದೇಶಕ್ಕೆ ಸ್ವತಂತ್ರ ಬಂದಿತು. ದೇಶವನ್ನು ಮುನ್ನಡೆಸಲು ಮತ್ತು 'ಆಧುನಿಕ' ಗೊಳಿಸಲು ಖಾದಿ ಮತ್ತು ಗ್ರಾಮೋದ್ಯೋಗಗಳು ಪ್ರಯೋಜನಕ್ಕೆ ಬಾರವು ಎಂದು ನಮ್ಮ ನವ ಭಾರತದ ರಾಜಕೀಯ ನಾಯಕರು ತೀರ್ಮಾನಿಸಿದರು. ಅವರಲ್ಲಿ ಹೆಚ್ಚಿನವರಿಗೆ ಖಾದಿ ವಿಚಾರದಲ್ಲಿ ಆಳವಾದ ಶ್ರದ್ಧೆ ಮತ್ತು ನಂಬಿಕೆ ಇರಲಿಲ್ಲ. ಗಾಂಧಿಯವರಿಗೆ ಸ್ವತ: ನೆಹರು ಅವರೇ, ಸ್ವತಂತ್ರ ಬಂದ ಕೂಡಲೆ ನಿಮ್ಮ ಚರಕ ಗೋಡೆಯ ಮೊಳೆಗೆ ನೇತು ಬೀಳುತ್ತದೆ ಎಂದು ಬರೆದಿದ್ದರು.

ದೇಶಕ್ಕೆ ಸ್ವತಂತ್ರ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಚರಕವನ್ನು ಸ್ವತಂತ್ರ ಬಂದ ಕೂಡಲೆ ಮೊಳೆಗೆ ನೇತು ಹಾಕಿ ಬಿಡಲು ಸಾಧ್ಯವಿರಲಿಲ್ಲ. ಸ್ವತಂತ್ರ ಭಾರತದಲ್ಲಿ ಸ್ವಯಂಸೇವಾ ಭಾವನೆಯಿಂದ ನಡೆಯುತ್ತಿದ್ದ ಚರಕಾ ಸಂಘ, ಸ್ವತಂತ್ರ ಭಾರತದಲ್ಲಿ ಒಂದು ಸರ್ಕಾರಿ ಇಲಾಖೆಯಾಗಿ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವಾಗಿ ಮಾರ್ಪಟ್ಟಿತು. ಸರ್ಕಾರ ಇದಕ್ಕೆ ಕೈ ಹಾಕದೆ 'ಖಾದಿ ಸತ್ತರೆ ಸಾಯಲಿ, ಉಳಿದರೆ ಉಳಿಯಲಿ' ಎಂದು ಅದರ ಪಾಡಿಗೆ ಅದನ್ನು ಬಿಟ್ಟು ಬಿಟ್ಟಿದ್ದರೆ ಚೆನ್ನಾಗಿತ್ತು. ಆದರೆ ಸರ್ಕಾರ ಅದನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಖಾದಿಯ ಹಲ್ಲು ಕಿತ್ತು ಅದನ್ನು 'ಸರ್ಕಾರಿ ಖಾದಿ' ಯಾಗಿ ಪರಿವರ್ತಿಸಿ, ಖಾದಿಯ ಮೂಲ ವಿಚಾರವನ್ನು ಮರೆತು, ಖಾದಿ ಕ್ಷೇತ್ರವನ್ನು ದೇವರಿಲ್ಲದ ಗುಡಿಯನ್ನಾಗಿ ಮಾಡಿತು. ಖಾದಿಗಿದ್ದ ವೈಚಾರಿಕ ಆಯಾಮವು ತನ್ನ ಪ್ರಖರತೆಯನ್ನು ಕಳೆದುಕೊಂಡು ಖಾದಿ ಕೇವಲ 'ಅರಿವಿಲ್ಲದ ಅರಿವೆ' ಯಾಗಿ ಹೋಯಿತು. ದೇಶದ ಉದ್ದಗಲ್ಲಕೂ ಇದ್ದ ಖಾದಿ ಸಂಸ್ಥೆಗಳು ತಮ್ಮ ಉಳಿವಿಗಾಗಿ ಸರ್ಕಾರ ಕೊಡುವ ಅನುದಾನವನ್ನು ಅವಲಂಬಿಸಲು ಪ್ರಾರಂಭಿಸಿದವು. ಖಾದಿ ಬಟ್ಟೆಗಳು ರಿಯಾಯತಿ ಇಲ್ಲದೆ ಮಾರಾಟವಾಗುವುದಿಲ್ಲ ಎಂಬ ಸ್ಥಿತಿಗೆ ಬಂದು ನಿಂತಿತು. ಸರ್ಕಾರದ ಸಾಲ ಮತ್ತು ಅನುದಾನ ಹೆಚ್ಚುತ್ತಾ ಹೋದಂತೆ, ಅಸಲಿ ಖಾದಿ ನಿಧಾನವಾಗಿ ಹಿಂದೆ ಸರಿದು ನಕಲಿ ಖಾದಿ ಮುಂದೆ ಬರತೊಡಗಿತು. ಖಾದಿ ಭಂಡಾರಗಳ ದೊಡ್ಡದಾದ ಗಾಂಧಿ ಫೋಟೋಗಳ ಕೆಳಗಿದ್ದ, ಹೊಳೆಯುವ ಗಾಜಿನ ಕಪಾಟುಗಳಲ್ಲಿ ನಕಲಿ ಖಾದಿ ಜಾಗ ಪಡೆಯ ತೊಡಗಿತು. ಕೇವಲ ದಾಖಲೆಗಳಲ್ಲಿ ಖಾದಿ ಉತ್ಪತ್ತಿಮಾಡುವ ಚಮತ್ಕಾರವನ್ನು ಅನೇಕ ಸಂಸ್ಥೆಗಳು ರೂಢಿಸಿಕೊಂಡವು. ಸ್ವತಂತ್ರ ಬಂದ ನಂತರ ಹುಟ್ಟಿದ ತಲೆಮಾರಿಗೆ 'ಖಾದಿ ಭಂಡಾರಗಳು ಎಂದರೆ ವಯಸ್ಸಾದವರು ಧೂಳು ಹಿಡಿದ ಬಟ್ಟೆಗಳನ್ನು ಖರೀದಿಸುವ ಸ್ಥಳ' ಎಂದಾಯಿತು.

ಖಾದಿಗೆ ಹೊಸ ರೂಪ

ಆದರೆ ಖಾದಿ ಆಯೋಗವು ಖಾದಿ ಧೂಳು ಹಿಡಿದು ಹೋಗಲು ಬಿಡದೆ ಮೈ ಛಳಿ ಬಿಟ್ಟು ಮೇಲೆದ್ದಿತು. ಇತ್ತೀಚಿನ ವರ್ಷಗಳಲ್ಲಿ ಖಾದಿಗೆ ಹೊಸ ರೂಪ ಕೊಟ್ಟು, ಯುವ ಜನರನ್ನು ತನ್ನತ್ತ ಆಕರ್ಷಿಸಲು ಪ್ರಾರಂಭಿಸಿತು. ಹೊಸ ವಿನ್ಯಾಸಗಾರರು ಈ ಕ್ಷೇತ್ರಕ್ಕೆ ಬಂದರು.

ಯುವಕರನ್ನು ಆಕರ್ಷಿಸುವ ವಿನ್ಯಾಸಗಳನ್ನು ಸೃಷ್ಟಿಸಿದರು. ದೇಶದ ಎಲ್ಲೆಡೆ ಖಾದಿ ಉತ್ಸವಗಳನ್ನು ಏರ್ಪಾಟಾಯಿತು. ಖಾದಿ ಮಳಿಗೆಗಳನ್ನು ಉನ್ನತೀಕರಿಸಿ ಹವಾ ನಿಯಂತ್ರಿತ ಖಾದಿ ಭಂಡಾರಗಳು ತಲೆ ಎತ್ತುವಂತೆ ಮಾಡಿತು. ಖಾದಿಯನ್ನು ಕೇವಲ ಮಾರಾಟದ ಸರಕಾಗಿ ನೋಡಲು ಪ್ರಾರಂಭಿಸಿದ ಖಾದಿ ಆಯೋಗ ಐಶಾರಾಮಿ ಸ್ಥಳಗಳಲ್ಲಿ ಖಾದಿ ಬಟ್ಟೆ ಧರಿಸಿದ ಯುವಕ ಯುವತಿಯರ 'ಕ್ಯಾಟ್ ವಾಕ್' ಮಾಡಿಸಲು ಪ್ರಾರಂಭಿಸಿತು. ಬಂಡವಾಳಶಾಹಿಗಳು ದೊಡ್ಡ ದೊಡ್ಡ ಮಳಿಗೆಗಳಲ್ಲಿ ಖಾದಿ ಮಾರಲು ಮತ್ತು ಅವರ ಛಾಪು ಹಾಕಿಕೊಳ್ಳಲು ಅವಕಾಶ ಮಾಡತೊಡಗಿತು. ಗಾಂಧಿಯವರು ಹೇಳಿದ 'ನೂಲಿರಿ, ಅರಿತು ನೂಲಿರಿ' ಎಂಬ ಕಿವಿಮಾತು ರ್‍ಯಾಂಪ್‌ನ ಹಿಂದಿನ ಸಂಗೀತದಲ್ಲಿ ಕೇಳದಾಯಿತು. ಆದರೆ ಕಾಲ ಮುಂದೆ ಓಡಿತ್ತು. ದೇಶದ ತುಂಬೆಲ್ಲಾ ಇದ್ದ ಖಾದಿ ಕುಶಲಕರ್ಮಿಗಳು, ಸ್ವತಂತ್ರ ಬಂದು ೫ ದಶಕಗಳ ಕಾಲ ತಮಗೂ ಒಂದು ದಿನ ಬರಬಹುದೆಂದು ಕಾದರು. ಅವರಿಗೆ ಸಿಗಬೇಕಾದ ಮಾನ್ಯತೆ, ಸಂಭಾವನೆ, ಗೌರವ ಸಿಗದ ಕಾರಣ ತಮ್ಮ ಉದ್ಯೋಗವನ್ನು ತೊರೆದು ಬಿಟ್ಟರು. ತಮ್ಮ ಮಕ್ಕಳು ಯಾವುದೇ ಕಾರಣಕ್ಕೂ ಈ ಉದ್ಯೋಗಕ್ಕೆ ಬರದಂತೆ ಎಲ್ಲ ಮುನ್ನೆಚ್ಚರಿಕೆಯ ಕ್ರಮ ಕೈಗೊಂಡರು. ಖಾದಿಗೆ ಬೇಡಿಕೆ ಬರುವ ಹೊತ್ತಿಗೆ ನೂಲುಗಾರರು ಮತ್ತು ನೇಕಾರರೇ ಕಣ್ಮರೆಯಾಗತೊಡಗಿದರು. ಹೆಚ್ಚಿದ ಬೇಡಿಕೆ ಮತ್ತು ತಗ್ಗಿದ ಉತ್ಪಾದನೆಯು ನಕಲಿ ಖಾದಿಗೆ ಅವಕಾಶ ಮಾಡಿಕೊಟ್ಟಿತು. ಖಾದಿ ಉತ್ಸವಗಳಲ್ಲಿ ಮಾರಾಟವಾಗುವ ಶೇಕಡಾ ೭೦ ಕ್ಕಿಂತಲೂ ಹೆಚ್ಚಿನವು ನಕಲಿ ಖಾದಿ ಆಗಿದ್ದರೆ ಅದು ಆಶ್ಚರ್ಯವಲ್ಲ. ಇದರಿಂದಾಗಿ ಅಸಲಿ ಖಾದಿಯ ಆಸೆ ಪಟ್ಟು ಬಂದ ಗ್ರಾಹಕರೂ ಮೋಸ ಹೋದರೆ, ಉಳಿದಿರುವ ಅಸಲಿ ನೂಲುಗಾರರೂ ನೇಕಾರರೂ ತಮ್ಮ ಬದುಕಿನಲ್ಲಿ ಸುಧಾರಣೆ ಕಾಣದಾದರು. ವಿಚಾರ ತಿಳಿದಿರದೆ ಕೇವಲ ಬಣ್ಣ ಮತ್ತು ವಿನ್ಯಾಸಕ್ಕೆ ಮಾರು ಹೋದ ಗ್ರಾಹಕರು ಅಸಲಿ ಖಾದಿಯನ್ನು ಗುರುತಿಸದಾದರು. ಗಾಳಿಯಲ್ಲಿ ತೇಲಿ ಬಂದ 'ಮನ್ ಕೀ ಬಾತ್' ಹಾಗೆಯೇ ಗಾಳಿಯಲ್ಲಿ ತೇಲಿ ಹೋಯಿತು. ಇಂದು ಪ್ರಪಂಚ ಎದುರಿಸುತ್ತಿರುವ ಪರಿಸರ, ನಿರುದ್ಯೋಗ, ಕೇಂದ್ರೀಕರಣ ಮುಂತಾದ ಹಲವಾರು ಸಮಸ್ಯೆಗಳಿಗೆ ಉತ್ತರವಾಗಬಹುದಾದ ಖಾದಿಗೆ ಆದ್ಯತೆ ಕೇವಲ ಬಾಯಿ ಮಾತಿನ ಉಪಚಾರವಾಗತೊಡಗಿತು. ಏಕಕಾಲದಲ್ಲಿ ಚಳುವಳಿಯೂ ಆಗಿರುವ, ರಚನಾತ್ಮಕ ಕೆಲಸವೂ ಆಗಿರುವ ಖಾದಿ ತನ್ನ ವಿರಾಟ್ ಶಕ್ತಿಯನ್ನು ಪ್ರದರ್ಶಿಸಲು ಇನ್ನು ಈ ದೇಶದಲ್ಲಿ ಕಾಲ ಕೂಡಿ ಬಂದಂತಿಲ್ಲ. ಆದರೆ ದೇಶದಾದ್ಯಂತ ಖಾದಿಯ ಅಸಲಿ ವಿಚಾರವನ್ನು ಅರಿತ ಪ್ರಜ್ಞಾವಂತರೂ, ಕಾರ್ಯಕರ್ತರೂ ಖಾದಿಯಲ್ಲಿ ನಂಬಿಕೆ ಉಳಿಸಿಕೊಂಡು ಅದಕ್ಕೆ ಹೊಸ ವ್ಯಾಖ್ಯಾನ ಬರೆಯಲು ಪ್ರಯತ್ನಿಸುತ್ತಿರುವುದೇ ಖಾದಿ ಉಳಿಯಲು ಮತ್ತು ಬೆಳೆಯಲು ಇರುವ ಏಕೈಕ ಆಶಾಕಿರಣ. ಖಾದಿ ಕೇವಲ ಬಟ್ಟೆಯಲ್ಲ. ಅದೊಂದು ವಿಚಾರ ಮತ್ತು ಜೀವನ ಶೈಲಿ ಅದನ್ನು ಗಾಂಧಿ ಬ್ರಿಟೀಷರ ವಿರುದ್ಧ ಬಳಸಿದರೆ ಇಂದು ನಾವು ಅದನ್ನು ಜಾಗತೀಕರಣದ ವಿರುದ್ಧ, ಕೊಳ್ಳುಬಾಕ ಸಂಸ್ಕೃತಿಯ ವಿರುದ್ಧ, ಜನ ಶತ್ರುಗಳ ವಿರುದ್ಧ ಬಳಸಬೇಕಿದೆ. ಇದು ಗಾಂಧಿ ನಮಗೆ ಕೊಟ್ಟ ಅತ್ಯಂತ ಪ್ರಬಲವಾದ ಅಸ್ತ್ರ ಎಂದು ನಾವು ಅರಿಯಬೇಕಿದೆ ಮತ್ತು ಕಾರ್ಯತತ್ಪರರಾಗಬೇಕಿದೆ. ಅದು ಆಗದಿದ್ದರೆ ಈ ದೇಶದ ಅತ್ಯುತ್ತಮ ಕೊಡುಗೆಗಳಲ್ಲೊಂದಾದ ಖಾದಿಯು ಚರಿತ್ರೆಯ ಪುಟ ಸೇರಿಹೋಗುತ್ತದೆ. ಅದು ಹಾಗಾಗದಿರಲಿ ಎಂದು ಹಾರೈಸೋಣ. ●

ಅಧ್ಯಾಯ ೩
ಪೌರಾತ್ಯ ಆರ್ಥಿಕ ಸಂರಚನೆಗಳು

ಭಾರತ, ಚೀನಾ, ಜಪಾನ್ (ಹಿಂದೆ ಇದ್ದ ರೀತಿಯ ಜಪಾನ್) ಮುಂತಾದ ಪ್ರಾಚೀನ ದೇಶಗಳಲ್ಲಿ ಆ ದೇಶಗಳ ಆರ್ಥಿಕ ಸಂರಚನೆಗಳ ಮೇಲೆ ಬೇಸಾಯ ಸಂಸ್ಕೃತಿ ಗಾಢ ಪ್ರಭಾವ ಬೀರಿದೆ. ಈ ಎಲ್ಲ ನಾಗರೀಕತೆಗಳು ಇದ್ದಕ್ಕಿದ್ದಂತೆ ಉದ್ಭವಿಸಿದವುಗಳಲ್ಲ. ಪ್ರಜ್ಞಾಪೂರ್ವಕವಾದ ಸಾಮಾಜಿಕ ಯೋಜನೆಗಳ ಪರಿಣಾಮವಾಗಿ ಸೃಷ್ಟಿಯಾದವು. ಆದರೆ ಪಾಶ್ಚಾತ್ಯ ನಾಗರೀಕತೆ ಈ ಯಾವ ಯೋಜನೆಗಳ ಪರಿಣಾಮವೂ ಅಲ್ಲ. ಅಡ್ಡಾದಿಡ್ಡಿಯಾಗಿ ಬೆಳೆದದ್ದು. ಈ ದೃಷ್ಟಿಯಿಂದ 'ಪಾಶ್ಚಾತ್ಯ ಸಂಸ್ಕೃತಿ' ಎಂಬುದು ಒಂದು ಇತ್ತು ಅನ್ನಿಸುವುದೇ ಇಲ್ಲ. ಇದನ್ನು ಸುಧಾರಿತವಾದ ಬರ್ಬರತೆ ಎಂದು ಕರೆಯಬಹುದು. ಈ ಮಾತಿಗೆ ಸೋವಿಯತ್ ರಷಿಯಾ ಮಾತ್ರ ಒಂದು ಅಪವಾದ. ಸೋವಿಯತ್ ರಷಿಯಾದಲ್ಲಿ ಅಚ್ಚುಕಟ್ಟಾದ ಸಂಸ್ಕೃತಿ ನಿರ್ಮಾಣದ ಆರಂಭಿಕ ಪ್ರಯತ್ನಗಳನ್ನು ಗುರುತಿಸಬಹುದು. ಈ ಸಂಸ್ಕೃತಿ ನಿರ್ಮಾಣದ ಹಿಂದೆ ಅದು ಒಳ್ಳೆಯದಕ್ಕೋ, ಕೆಟ್ಟದಕ್ಕೋ ಒಂದು ತಾತ್ವಿಕತೆ ಇರುವುದನ್ನೂ ನಾವು ಗಮನಿಸಬಹುದು.

ಪಾಶ್ಚಾತ್ಯ ದೇಶಗಳಲ್ಲಿ ಆರ್ಥಿಕತೆಯನ್ನು ಸಾಮಾಜಿಕ ಸಂರಚನೆಗಳು ನಿಯಂತ್ರಿಸುತ್ತಿತ್ತು ಹಾಗೂ ಅದಕ್ಕೆ ಮಾರ್ಗದರ್ಶನ ಮಾಡುತ್ತಿತ್ತು. Pack Type ನಾಗರೀಕತೆಗೂ ಇದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. Heard Type ಕಾರ್ಯ ನಿರ್ವಹಿಸಿದ ಎಲ್ಲ ದೇಶಗಳಲ್ಲಿ ಅನೇಕ ಸಮಾನವಾದ ಅಂಶಗಳಿರುವುದನ್ನು ಕಾಣಬಹುದು. Pack Type ಇರುವ ದೇಶಗಳಲ್ಲಿ ಆರ್ಥಿಕ ಉದ್ದೇಶಗಳಿಗಾಗಿ ಆಕ್ರಮಣಕಾರಿ ಗುಣಗಳು ಕಂಡು ಬರುತ್ತವೆ. Heard Type ನಲ್ಲಿ ಕೂಡ ಜನರು ಸಂಘಟಿತರಾದರೂ, ಆತ್ಮ ರಕ್ಷಣೆಗೆ ಮತ್ತು ಶಕ್ತಿಯನ್ನು ಏಕತ್ರಗೊಳಿಸುವಿಕೆಗೆ ಹೊರತು, ಆಕ್ರಮಣಗಳಿಗಲ್ಲ. ತೀರಾ ಇತ್ತೀಚಿನವರೆಗೂ ಮಂಗೋಲಿಯನ್ ದೇಶಗಳಲ್ಲಿ ಪರಕೀಯರನ್ನು ಹೊರಗಿಡಲಾಗಿತ್ತು. ಒಳಕ್ಕೆ ಬಿಟ್ಟುಕೊಳ್ಳುತ್ತಿರಲಿಲ್ಲ. ನಮ್ಮಲ್ಲಿ ಸಮುದ್ರ ಲಂಘನ ಗೌರವದ ಸಂಗತಿಯಾಗೇನೂ ಇರಲಿಲ್ಲ. ಅದಕ್ಕೆ ನಿಷೇಧ ಇತ್ತು. ವರ್ತಕ ವರ್ಗ ಮಾತ್ರ, ವಾಣಿಜ್ಯ ಉದ್ದೇಶಗಳಿಗೆ ಸಮುದ್ರ ದಾಟಿ ಹೋಗುತ್ತಿದ್ದರು. ನಮ್ಮಲ್ಲಿ (ಪೌರ್ವಾತ್ಯ) ಅಧಿಕಾರದ ವಿಕೇಂದ್ರೀಕರಣ ಮತ್ತು ನಿಯಂತ್ರಣ ಇಡೀ ವ್ಯವಸ್ಥೆ ವ್ಯಕ್ತಿಗತವಾಗಿಲ್ಲದೆ ನಡೆಯುವಂತೆ ರಚಿತವಾಯಿತು. ಆರ್ಥಿಕ ಚಟುವಟಿಕೆಗಳನ್ನು ಧರ್ಮ, ಕಾನೂನು ಮತ್ತು ಮೂಢ ನಂಬಿಕೆಗಳಿಗೆ ಜೋಡಿಸಿದ ಕಾರಣ, ಇವುಗಳಿಂದಲೇ ಆರ್ಥಿಕ ವ್ಯವಹಾರಗಳಿಗೆ ಚಾಲನಾಶಕ್ತಿ ದೊರೆಯುತ್ತಿತ್ತು. ನಿಬಂಧನೆಗಳು ಹೇಗಿದ್ದವೆಂದರೆ ಯಾರೂ ನಿರ್ಭಯದಿಂದ ಅದನ್ನು ಮುರಿಯಲು ಸಾಧ್ಯವಿರಲಿಲ್ಲ. ಇದರಿಂದಾಗಿ ದುರ್ಬಲರು ಮತ್ತು ಅಸಹಾಯಕರುಗಳಿಗೆ ರಕ್ಷಣೆಯು ದೊರೆಯುತ್ತಿತ್ತು. ಹಾಗಾಗಿ ಭಾರತದಲ್ಲಿ ಕೂಡು ಕುಟುಂಬ ವ್ಯವಸ್ಥೆ, ಜಾತಿ ವ್ಯವಸ್ಥೆಯ ಮೂಲಕ ಶ್ರಮ ವಿಭಜನೆ ಮತ್ತು ಕುಶಲ ಕರ್ಮಿಗಳಿಗೆ ರೈತರು ಬೆಳೆದದ್ದರಲ್ಲಿ ಒಂದು ಪಾಲು ಕೊಡುವುದನ್ನು ಕಾಣಬಹುದು.

ಕೂಡು ಕುಟುಂಬದಲ್ಲಿ ಕುಟುಂಬ ಗಳಿಸಿದ್ದೆಲ್ಲವೂ ಎಲ್ಲ ಸದಸ್ಯರುಗಳಿಗೂ

ಹಂಚಿಕೆಯಾಗುತ್ತಿತ್ತು. ಅಥವಾ ಜಂಟಿ ಕುಟುಂಬ ವ್ಯವಸ್ಥೆಯಲ್ಲಿ, ಕುಟುಂಬದಲ್ಲಿ ದುಡಿಯಬಲ್ಲ ಎಲ್ಲ ಸದಸ್ಯರ ಒಟ್ಟು ವರಮಾನದಲ್ಲಿ ಕುಟುಂಬದ ಎಲ್ಲ ಸದಸ್ಯರಿಗೂ ಪಾಲು ಇರುತ್ತಿತ್ತು. ಕುಟುಂಬದಲ್ಲಿ ಒಬ್ಬನಿಗೆ ಹೆಚ್ಚಿನ ಸಂಪಾದನೆ ಇದ್ದರೆ, ಕೆಲಸ ಮಾಡಲು ಸಾಧ್ಯವಿಲ್ಲದ ಆತನ ಸೋದರನಿಗೂ ನೆರವು ದೊರೆಯುತ್ತಿತ್ತು. ಕುಟುಂದ ಒಟ್ಟು ವರಮಾನ ಕುಟುಂಬದ ಎಲ್ಲರಲ್ಲಿಯೂ ವಿತರಣೆಯಾಗುತ್ತಿತ್ತು. ಅನಿಯಂತ್ರಿತ ಸ್ಪರ್ಧೆಯಿಂದ ಕುಟುಂಬದಲ್ಲಿ ಒಬ್ಬ ಸದಸ್ಯ ಅತಿ ಶ್ರೀಮಂತನಾಗುವ ಅವಕಾಶವಿರುತ್ತಿರಲಿಲ್ಲ. ಇದರಿಂದ ಕೆಲಸ ಮಾಡಲಾಗದ ಸದಸ್ಯನಿಗೂ ನೆರವು ದೊರೆಯುತ್ತಿತು.

ಜಾತಿ ವ್ಯವಸ್ಥೆ ಗ್ರಾಮದಲ್ಲಿನ ಬೇರೆ ಬೇರೆ ಘಟಕಗಳಲ್ಲಿನ ಆರ್ಥಿಕ ಚಟುವಟಿಕೆಗಳಲ್ಲಿ ಪರಸ್ಪರ ಸಾಮರಸ್ಯ ಮೂಡಿಸುತ್ತಿತ್ತು. ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯೂ ಆಗುತ್ತಿರಲಿಲ್ಲ. ಗ್ರಾಮದಲ್ಲಿ ಕಸುಬುದಾರರು ಕುಶಲ ಕರ್ಮಿಗಳು ಬೇಸಾಯಗಾರರಿಂದ, ಪುದ್ದಿ, ದಾನ, ಬಲೂಟಿ ಎಂಬ (ಅನೇಕ ಹೆಸರುಗಳಿಂದ ಇದ್ದ) ಸಂಪ್ರದಾಯಗಳಿಂದ ಒಂದು ಸಣ್ಣ ಪಾಲು ಪಡೆಯುತ್ತಿದ್ದರು. ಇದರಿಂದ ಈ ಜನಗಳಿಗೂ ಒಂದು ಕನಿಷ್ಠ ಪ್ರಮಾಣದ ಆದಾಯ ಸಿಕ್ಕಂತಾಗಿ ಅವರ ಜೀವನೋಪಾಯವೂ ಆಗುತ್ತಿತು. ಗ್ರಾಮದ ಬಡಗಿ, ಕಮ್ಮಾರ ಮತ್ತು ಚಮ್ಮಾರನಂತಹ ಕುಶಲ ಕರ್ಮಿಗಳು ಪದಾರ್ಥ ತಯಾರಿಸಿ, ಉಳಿದವರಿಗೆ ಉಚಿತವಾಗಿ ಆ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದರು. ಅವರಿಂದ ಸುಗ್ಗಿಯ ಸಮಯದಲ್ಲಿ ಒಂದು ಸಣ್ಣ ಪಾಲು ಪಡೆಯುತ್ತಿದ್ದರು. ಈ ವ್ಯವಸ್ಥೆಯಲ್ಲಿ ಬಲಿಷ್ಠರು, ದುರ್ಬಲರನ್ನು ಶೋಷಿಸುವ ಪ್ರಮೇಯ ಬರುವುದಿಲ್ಲ.

ಕೆಲಸದ ಪ್ರಕ್ರಿಯೆಯಲ್ಲಿಯೇ ವಿತರಣಾ ವ್ಯವಸ್ಥೆಯೂ ಕೂಡಿಕೊಂಡಿರುವ ಒಂದು ತಾತ್ವಿಕತೆ ಇದರಲ್ಲಿರುವುದು ಗೋಚರವಾಗುತ್ತದೆ. ನಮ್ಮ ದೇಹದ ವಿವಿಧ ಅಂಗಗಳು ತಮ್ಮ ತಮ್ಮ ಕೆಲಸ ನಿರ್ವಹಿಸುತ್ತಾ, ಒಟ್ಟಾಗಿ ಒಂದೇ ಘಟಕವಾಗಿ ಹೇಗೆ ಬದುಕುತ್ತವೆಯೋ ಹಾಗೆ ಸಮುದಾಯದಲ್ಲಿಯೂ ಬೇರೆ ಬೇರೆ ಸದಸ್ಯರು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಾ ಒಟ್ಟು ಸಮುದಾಯದ ಬದುಕಿಗೆ ಶ್ರಮಿಸುತ್ತಾರೆ. ಇಡೀ ಸಮುದಾಯ ವಿಭಿನ್ನ ಘಟಕಗಳನ್ನೊಳಗೊಂಡ ಒಂದು ಏಕೀಕೃತ ಸಂಘಟನೆಯಾಗುತ್ತದೆ.

ಉದಾಹರಣೆಗೆ ಮನುಷ್ಯನ ಹೃದಯ ಅವನ ಕೈಕಾಲುಗಳೊಡನೆ ಜಗಳಾಡುವುದು, ಜಠರ ಹೃದಯಕ್ಕೆ ಆಹಾರ ಪೂರೈಸುವುದಕ್ಕೆ ಒಪ್ಪದಿರುವುದು ಇತ್ಯಾದಿಗಳು ನಡೆಯುವುದಿಲ್ಲ. ಸಾಧ್ಯವಿಲ್ಲ. ಅದೇ ರೀತಿ, ಈ ವ್ಯವಸ್ಥೆ ಸಮುದಾಯದ ಒಳಗೇ ಐಕ್ಯತೆ ಮತ್ತು ಸಹಕಾರವನ್ನು ಅಭಿವೃದ್ಧಿಪಡಿಸುತ್ತವೆ. ಒಂದು, ಇನ್ನೊಂದನ್ನು ಶೋಷಿಸಲು ಅವಕಾಶವಿರುವುದಿಲ್ಲ. ಈ ರೀತಿಯ ಸಂಘಟನೆಗಳಲ್ಲಿ ಇರುವವರು, ಒಂದು ರೊಪ್ಪದಲ್ಲಿರುವ ಕುರಿಮರಿಯು ತೋಳಗಳಿಂದ ರಕ್ಷಣೆ ಪಡೆಯುವಂತೆ, ಇವರು ಶೋಷಕರಿಂದ ರಕ್ಷಣೆ ಪಡೆಯುತ್ತಾರೆ. ಇದರರ್ಥ ಶೋಷಣೆ ಸಂಪೂರ್ಣ ಮರೆಯಾಗಿದೆ ಎಂದಲ್ಲ. ಆದರೆ ಅದಕ್ಕೆ ಅವಕಾಶ ಕನಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳುವುದು, ಸಾಮಾಜಿಕವಾಗಿ ಅಡೆಗಡೆ ನಿರ್ಮಿಸುವ ಮೂಲಕ ಮುಗ್ಧರಿಗೆ ರಕ್ಷಣೆ ನೀಡುವುದು. ಸಂಘಟನೆಗಳ ಕರ್ತವ್ಯವಾಗಿದೆ. ಆದರೆ ಈಗ ಅಗಾಧವಾದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವ ಆರ್ಥಿಕ ಚಟುವಟಿಕೆಗಳ ಪರಿಣಾಮವಾಗಿ, ಈ ಹಳೆಯ ವ್ಯವಸ್ಥೆಗಳು ತಮ್ಮ ಮೇಲೆ ಬಿದ್ದಿರುವ ಭಾರವನ್ನು ಹೊರಲಾರದ ಸ್ಥಿತಿ ಬಂದಿದೆ. ಹಿಂದಿನ ವ್ಯವಸ್ಥೆಗಳನ್ನು ಆಳವಾಗಿ ಅಧ್ಯಯನ ಮಾಡಿ, ಉತ್ಪಾದಕನ ತಲೆಬಿಸಿಯಾಗದಂತೆ, ಅದೇ ಹೊತ್ತಿನಲ್ಲಿ ಶ್ರಮಿಕನಿಗೂ ಅವನ ನ್ಯಾಯೋಚಿತ ಪಾಲು ದೊರೆಯುವಂತೆ ಹಳೆಯ ವ್ಯವಸ್ಥೆಯಲ್ಲಿ ಹೇಗೆ ಮಾರ್ಪಾಡು

ಮಾಡಬೇಕೆಂಬುದನ್ನು ನಾವು ಹುಡುಕಬೇಕಾಗಿದೆ.

'Pack Type' ನಲ್ಲಿ ಉದ್ಯಮಶೀಲತೆಗೆ ವ್ಯಕ್ತಿ ಸ್ವಾತಂತ್ರದ ಹೆಸರಿನಲ್ಲಿ ಅನಿರ್ಭಂದಿತ ಅವಕಾಶವನ್ನು ನೀಡಿದರೆ, Herd Type ನಲ್ಲಿ ಸಮುದಾಯದ ಹಿತಕ್ಕಾಗಿ ವ್ಯಕ್ತಿಗತ ಸ್ವಾರ್ಥವನ್ನು ನಿಯಂತ್ರಿಸುವ ಅನಿವಾರ್ಯತೆಯನ್ನು ಗುರುತಿಸಲಾಗಿದೆ.

ಇತರ ಜೀವನ ಕ್ಷೇತ್ರಗಳ ಮೇಲೆ ಪರಿಣಾಮ

Pack type ವ್ಯವಸ್ಥೆಯಲ್ಲಿ ಆರ್ಥಿಕ ಕ್ಷೇತಕ್ಕೆ ನೀಡಿದ ವಿಶೇಷ ಮನ್ನಣೆಯ ಪ್ರಭಾವವು ಜೀವನದ ಇತರ ಕ್ಷೇತ್ರಗಳಾದ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಮೇಲೂ ಬಿದ್ದಿರುವುದನ್ನು ಗುರುತಿಸಬಹುದಾಗಿದೆ. ರಾಜಕೀಯ ಕ್ಷೇತ್ರಕ್ಕೆ ಬಂದರೆ ಪಶ್ಚಿಮದ ಎಲ್ಲ ದೇಶಗಳ ರಾಜಕೀಯ ವ್ಯವಸ್ಥೆಯಲ್ಲಿ ನಿಜವಾದ ಪ್ರಜಾಪ್ರಭುತ್ವ ಇಲ್ಲದಿರುವುದನ್ನು ಕಾಣಬಹುದು. ಪಾರ್ಲಿಮೆಂಟ್ ಎಂಬ ಸೋಗಲಾಟದ ವ್ಯವಸ್ಥೆಯಲ್ಲಿ ಮರೆಯಾಗಿ, ಅಧಿಕಾರವೆಲ್ಲವೂ ಒಂದು ಪ್ರಭಾವಶಾಲಿ ಗುಂಪು ಅಥವಾ ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತಗೊಂಡಿರುತ್ತದೆ. ಪಶ್ಚಿಮದ ವ್ಯವಸ್ಥೆಯಲ್ಲಿ, ಅತ್ಯಂತ ವೈಯುಕ್ತಿಕವಾದ ಮತ್ತು ಸಹಿಷ್ಣುವಾದ ಏಸು ಪಾಲಿಸದ ಧರ್ಮದಲ್ಲಿಯೂ ಕೂಡ ಪೋಪ್ ಎಂಬ ವ್ಯಕ್ತಿಯಲ್ಲಿ ಅಧಿಕಾರ ಮತ್ತು ಶಕ್ತಿಯು ಕೇಂದ್ರೀಕರಣಗೊಂಡಿರುವುದನ್ನು ಕಾಣಬಹುದಾಗಿದೆ. ಇದರ ಪರಿಣಾಮವು ಅಸಹಿಷ್ಣುತೆಯ ಧರ್ಮಾಂಧತೆಯಾಗಿ ವ್ಯಕ್ತವಾಗಿದೆ. ಇನ್ನು ಸಾಮಾಜಿಕ ಕ್ಷೇತ್ರಕ್ಕೆ ಬಂದರೆ ಅರಮನೆಯಂತಹ ಶ್ರೀಮಂತ ವರ್ಗದ ರೂಢಿಗಳು ಮತ್ತು ಜೀವನ ಶೈಲಿಗಳು ನಗರಗಳ ಮೂಲಕ ಗುಡಿಸಲುಗಳಿಗೆ ಬಂದು ಅವನ್ನು ಗುಡಿಸಿಲಿನ ಜನ ಕೀಳರಿಮೆಯಿಂದ ಪಾಲಿಸುವಂತೆ ಆದೇಶಿಸುತ್ತಿವೆ. ಈಗ ಅಭಿವೃದ್ಧಿಗೊಂಡಿರುವ ನಗರ ನಾಗರಿಕತೆಯು ಗ್ರೀಸ್ ಮತ್ತು ರೋಂ ನಲ್ಲಿ ಉದಯಿಸಿತು.

ರಾಜಕೀಯ ಕ್ಷೇತ್ರದಲ್ಲಿ ಚಿಂತಿಸುವುದಾದರೆ, ಪಾಶ್ಚಾತ್ಯ ದೇಶಗಳಲ್ಲಿ ಶುದ್ಧ ಪ್ರಜಾಪ್ರುಭತ್ವ ಕಂಡು ಬರುವುದಿಲ್ಲ. ಅದಕ್ಕೆ ಪಾರ್ಲಿಮೆಂಟರಿ ವ್ಯವಸ್ಥೆಯ ಮುಸುಕನ್ನು ಎಳೆಯಲಾಗಿದೆ. ಈ ವ್ಯವಸ್ಥೆಯಲ್ಲಿ ಒಂದು ಗುಂಪು (ಪಕ್ಷ) ಅಥವಾ ಏಕೈಕ ಪ್ರಬಲ ವ್ಯಕ್ತಿ ಆಳುತ್ತಿರುತ್ತಾನೆ. ಜೀಸಸ್‌ನಂತಹ ಧರ್ಮದಲ್ಲಿ ಅಂದರೆ ಸಹನಶೀಲವೂ ಮತ್ತು ವೈಯುಕ್ತಿಕ ಆದ ಧರ್ಮದಲ್ಲಿ ಕೂಡಾ ಪಾಶ್ಚಾತ್ಯ ದೇಶದಲ್ಲಿ ಅಧಿಕಾರವೆಲ್ಲವೂ ಒಬ್ಬನಲ್ಲಿ ಅಂದರೆ ಪೋಪ್‌ನಲ್ಲಿ ಅಥವಾ ಚರ್ಚ್‌ನಂತಹ ಒಂದು ಸಂಘಟನೆಯಲ್ಲಿ ಏಕೀಕೃತವಾಗಿದೆ. ಸಾಮಾಜಿಕ ಬದುಕಿನಲ್ಲಿಯೂ ನಮ್ಮ ಜೀವನ ಶೈಲಿ ಅರಮನೆಯಿಂದ ಗುಡಿಸಲಿಗೆ ಬರುತ್ತದೆ. ಪಟ್ಟಣಗಳು ಸಾಮಾಜಿಕ ಸಂರಕ್ಷಣೆಯ ಮೇಲೆ ದಟ್ಟ ಪರಿಣಾಮ ಉಂಟು ಮಾಡಿದೆ. ಪಟ್ಟಣ ನಾಗರೀಕತೆ ಗ್ರೀಸ್ ಮತ್ತು ರೋಂ ನಾಗರೀಕತೆ ಅಭಿವೃದ್ಧಿ ಹೊಂದಿತು.

ಇನ್ನೊಂದು ಮಗ್ಗುಲಲ್ಲಿ ಭಾರತದಲ್ಲಿ ಗ್ರಾಮದ ವ್ಯವಹಾರವನ್ನು ಗ್ರಾಮೀಣ ಪಂಚಾಯ್ತಿಗಳು (ಗ್ರಾಮ ರಿಪಬ್ಲಿಕ್) ನಿರ್ವಹಿಸಿಸುತ್ತಿದ್ದವು. ಪರಕೀಯರ ಧಾಳಿಯ ಸಂದರ್ಭದಲ್ಲಿಯೂ ಗ್ರಾಮೀಣ ಜನರ ದಿನನಿತ್ಯದ ಬದುಕು ಭಂಗಗೊಳ್ಳಲಿಲ್ಲ. ಧಾರ್ಮಿಕ ವಿಚಾರದಲ್ಲಿಯೂ ಇದೇ ಪ್ರವೃತ್ತಿಯು ಮುಂದುವರೆದು ಪೂಜಾ ವಿಧಾನ ಮತ್ತು ದೈವದ ಪರಿಕಲ್ಪನೆಯೂ ವಿಕೇಂದ್ರಿಕೃತಗೊಂಡ ಪರಿಣಾಮವಾಗಿ ಅತ್ಯಂತ ಹೆಚ್ಚಿನ ಧರ್ಮ ಸಹಿಷ್ಣುತೆ ಉಂಟಾಯಿತು. ಸಾಮಾಜಿಕ ಕ್ಷೇತ್ರದಲ್ಲಿ ಅರಮನೆ ಮತ್ತು ದೇವಾಲಯಗಳಲ್ಲಿ ಮಾತ್ರ ವೈಭವ ಕಾಣುತ್ತಿತ್ತು. ಅದೇ ಸಮಯದಲ್ಲಿ ಸಾಮಾನ್ಯರ ಬದುಕು ಸರಳವಾಗಿದ್ದು ಗ್ರಾಮೀಣ ಬದುಕಿಗೆ ಹೊಂದಿಕೊಂಡಂತಿತ್ತು. ಜನ ಸಾಮಾನ್ಯರ ಆಡಂಬರ ಮತ್ತು ಬಣ್ಣದ ಬಗೆಗಿನ ಆಕಾಂಕ್ಷೆಗಳು

ಕಲಾತ್ಮಕವಾಗಿ ಹಬ್ಬ, ಅರಮನೆ ಮತ್ತು ದೇವಸ್ಥಾನಗಳಲ್ಲಿ ಮಾತ್ರ ಅಭಿವ್ಯಕ್ತಿಗೊಂಡು ವ್ಯಕ್ತಿಗತ ಆಡಂಬರಕ್ಕೆ ಅವಕಾಶವಿಲ್ಲದಂತೆ ಇತ್ತು.

ಧಾರ್ಮಿಕ ವಿಷಯದಲ್ಲಿಯೂ ಇದೇ ರೀತಿ ಇತ್ತು. ಪೂಜಾ ವಿಧಾನ ಮತ್ತು ದೈವದ ಪರಿಕಲ್ಪನೆ ಸಂಪೂರ್ಣ ವಿಕೇಂದ್ರಿಕೃತವಾಗಿತ್ತು. ಇದರ ಪರಿಣಾಮವಾಗಿ ದೊಡ್ಡ ಪ್ರಮಾಣದಲ್ಲಿ ಸಹನಶೀಲತೆ ಬೆಳೆದು ಬಂದಿತು. ಅರಮನೆ ಮತ್ತು ದೇವಾಲಯಗಳಲ್ಲಿ ವೈಭವ ಮತ್ತು ಆಡಂಬರ ಇದ್ದುದು ನಿಜ. ಆದರೆ ಇಲ್ಲಿಯ ಮಕ್ಕಳ ಬದುಕು ಸರಳವಾಗಿದ್ದು ಹಳ್ಳಿಯ ಬದುಕಿಗೆ ಹೊಂದುವಂತೆ ಇತ್ತು. ಜನರಲ್ಲಿ ಇದ್ದ ಆಡಂಬರ ಮತ್ತು ವರ್ಣ ವೈವಿಧ್ಯದ ಸುಪ್ತ ಆಕಾಂಕ್ಷೆಗೆ ಕಲಾತ್ಮಕ ಅಭಿವ್ಯಕ್ತಿ ದಾರಿ ಮಾಡಿಕೊಟ್ಟಿತು. ದೇವಾಲಯಗಳು ಮತ್ತು ಅರಮನೆಗಳು ಇದಕ್ಕೆ ಅವಕಾಶ ಕಲ್ಪಿಸಿದವು. ವೈಯುಕ್ತಿಕ ಪ್ರದರ್ಶನದ ತೆವಲಿಗೆ ಅವಕಾಶ ಇರಲಿಲ್ಲ. ಹೀಗೆ Pack Type ಮತ್ತು Heard Type ನಲ್ಲಿ ಮೂಲಭೂತವಾದ ವ್ಯತ್ಯಾಸವನ್ನು ಗುರುತಿಸಬಹುದು.

ಭಾರತದಲ್ಲಿ ಶತ ಶತಮಾನಗಳಿಂದ Heard Type ನಾಗರೀಕತೆ ಅಸ್ತಿತ್ವದಲ್ಲಿ ಇದೆ. ಇಲ್ಲಿಯ ಸಂಸ್ಕೃತಿಯೂ ಬೆಳೆದದ್ದು ಇದರಿಂದಲೇ ! ಆದುದರಿಂದಲೇ ನಾಯಕನನ್ನು ಪ್ರಶ್ನಿಸದೆ ಕೆಲಸ ಮಾಡಬಹುದಾದ ಒಂದು ಸಣ್ಣ ಗುಂಪನ್ನೂ ಭಾರತದಲ್ಲಿ ಸೃಷ್ಟಿಸುವುದು ಕಷ್ಟ.ಏನನ್ನೂ ಪ್ರಶ್ನಿಸದೇ ನಾಯಕನಿಗೆ ವಿಧೇಯತೆ ತೋರುವುದು ಅವನ ಆದೇಶ ಪಾಲಿಸುವುದು – ಇವು Pack Type ನಾಗರಿಕತೆ ಬೇಡುವ ಅಂಶ. ಜಿಲ್ಲಾ ಬೋರ್ಡ್‌ನಂತಹ ವ್ಯವಸ್ಥೆಯಲ್ಲಿ ಎಲ್ಲರನ್ನೂ ಒಳಗೊಂಡು ಕೆಲಸ ಮಾಡಲು ಇರುವ ಸಂಕಷ್ಟವನ್ನು, ಪ್ರತಿದಿನಾ ಪತ್ರಿಕೆಗಳಲ್ಲಿ ಗಮನಿಸಬಹುದು. ನಮ್ಮಲ್ಲಿನ ಮತ್ತು ಪಾಶ್ಚಾತ್ಯ ನಾಗರಿಕತೆಗಳಲ್ಲಿನ ವ್ಯತ್ಯಾಸದಲ್ಲಿ ಈ ಸಮಸ್ಯೆಗಳ ಮೂಲ ಇದೆ. ಪಶ್ಚಿಮದಲ್ಲಿ ಕೈಗಾರಿಕ ಕ್ರಾಂತಿ ಸೃಷ್ಟಿಸಿರುವ ಕೇಡುಗಳು ಭಾರತದಲ್ಲಿ ಕಾಣಿಸಿಕೊಳ್ಳಬಾರದೆಂದು ನಾವು ಬಯಸಿದಲ್ಲಿ ನಾವು ನಮ್ಮ ಆರ್ಥಿಕ ಅಭಿವೃದ್ಧಿಯನ್ನು ರೂಪಿಸುವಾಗ, ಈ ಅಂಶ ನೆನಪಿಟ್ಟುಕೊಳ್ಳಬೇಕು.

ನಮ್ಮ ಪ್ರಾಚೀನ ಸಂಸ್ಕೃತಿಯ ಅಡಿಪಾಯದ ಮೇಲೆ ಪರಿಕೀಯವಾದ ವ್ಯವಸ್ಥೆಯನ್ನು ನಿರ್ಮಾಣ ಮಾಡಲಾಗುವುದಿಲ್ಲ. ಹಾಗೊಂದು ವೇಳೆ ಮಾಡಹೋದರೆ ನಿರ್ಮಿತ ಕಟ್ಟಡದ ಮೇಲು ಭಾಗವು ಇಸ್ಪೀಟು ಎಲೆಯಂತೆ ಉದುರಿ ಹೋಗುತ್ತದೆ. ರಷ್ಯಾದ ಗಾಜಿನ ಮನೆಗಳಲ್ಲಿ ಆಕರ್ಷಕವಾಗಿ ಕಾಣುವ ಹೂವುಗಳು ನಮ್ಮ ನೆಲದಲ್ಲಿ ನಾಟಿ ಮಾಡಿದರೆ ಬೆಳೆಯುವುದಿಲ್ಲ.

Pack Type ನಾಗರೀಕತೆ ದೂರದೃಷ್ಟಿ ಇಲ್ಲದ ನಾಗರೀಕತೆ. ಇದು ವ್ಯಕ್ತಿ ನಿಷ್ಠವಾದದು. ಕೇಂದ್ರೀಕೃತವಾದ ನಿಯಂತ್ರಣ ವ್ಯವಸ್ಥೆ ಇರುವಂತಹುದು. ಸ್ವಾರ್ಥಪರವಾದುದು. ಆದರೆ ಇದನ್ನು ವಿಕೇಂದ್ರಿಕೃತವಾದ ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸಿದಲ್ಲಿ ಅದರ ನೀತಿಗಳು ಅಲ್ಪದೃಷ್ಟಿಯದಾಗಿರುತ್ತದೆ.

ಪಾಶ್ಚಾತ್ಯ ದೇಶಗಳು ತಮ್ಮದೇ ಆದ Pack Type ನಾಗರಿಕತೆಯನ್ನು ಆಧರಿಸಿ ತಮ್ಮ ಕೈಗಾರಿಕಾ ಸಮಾಜದ ಜೀವನಕ್ಕೆ ಬೇಕಾದ ವ್ಯವಸ್ಥೆಯು ರೂಪುಗೊಳಿಸಿವೆ. ಭಾರತದ್ದು ಬೇಸಾಯ ಆಧಾರಿತವಾದ Heard Type ನಾಗರೀಕತೆಯಾಗಿದ್ದು ಅದು ಈಗ ಅವನತಿಯ ದಾರಿ ಹಿಡಿದಿದೆ.

ನಾಲ್ಕು ವರ್ಣಗಳು

ನಾವು ನಮ್ಮ ಆದರ್ಶದಿಂದ ದೂರ ಬಿದ್ದದ್ದೇವೆ. ನಾವು ಅದನ್ನು ಪುನರ್ ನಿರ್ಮಾಣ ಮಾಡಬೇಕೆಂದರೆ ನಮ್ಮ ಪೂರ್ವಜರಿಗೆ ಮಾರ್ಗದರ್ಶನ ನೀಡಿದ ತತ್ವಗಳನ್ನು ನಾವು ಮರು

ಪಡೆಯಬೇಕು. ನಮ್ಮ ಅವನತಿಗೆ, ನಾವು ಕಳೆದುಕೊಂಡ ರಾಷ್ಟ್ರೀಯ ಚಾರಿತ್ರ್ಯ ಮತ್ತು ಅತಿಯಾದ ಸ್ವಾರ್ಥವೇ ಕಾರಣ. ಸಮಾಜ ವಿವಿಧ ರೀತಿಯ ಜನರನ್ನು ಒಳಗೊಂಡಿರುತ್ತದೆ. ಅದನ್ನು ನಾಲ್ಕು ಬಗೆಯಾಗಿ ವಿಂಗಡಿಸಬಹುದು.

೧. ಧ್ಯೇಯ ನಿಷ್ಠರು :-

ಇವರು ಅತ್ಯಂತ ದೂರದೃಷ್ಟಿ ಹೊಂದಿದ, ತಮ್ಮ ಆದರ್ಶಗಳಿಗೆ ನಿಷ್ಠರಾಗಿ ಜೀವನ ರೂಪಿಸಿಕೊಂಡಿರುವವರು. ಇವರನ್ನು ಧ್ಯೇಯ ನಿಷ್ಠರು ಎನ್ನಬಹುದು.

೨. ಲೋಕ ಹಿತೈಷಿಗಳು :-

ಮೇಲಿನವರಿಗೆ ಹೋಲಿಸಿದರೆ, ಇವರದು ಸೀಮಿತ ದೂರದೃಷ್ಟಿ ಆದರೂ ಅವರ ದೃಷ್ಟಿಕೋನವು ಅವರ ಬದುಕಿನಾಚೆಗೂ ಚಾಚಿಕೊಂಡಿರುವಂತಹದು.

೩ .ಲೌಕಿಕರು:-

ತಮ್ಮ ದೃಷ್ಟಿಕೋನವನ್ನು ತಮ್ಮ ಬದುಕಿಗಷ್ಟೆ ಮಿತಿಗೊಂಡಿಸಿಕೊಂಡಿರುವವರು.

೪. ನಾಲ್ಕನೆಯವರು ಹಲವರು ಸವೆಸಿದ ಹಾದಿಯಲ್ಲಿ ಹೆಚ್ಚಿನ ಕಲ್ಪನೆಯಿಲ್ಲದೆ ಬದುಕುವವರು.

ವರ್ಣ ವ್ಯವಸ್ಥೆಯಲ್ಲಿ ಕ್ರಮವಾಗಿ ಇವರನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ಕರೆಯಬಹುದು.

ಬ್ರಾಹ್ಮಣನು ದೂರದೃಷ್ಟಿಯಿಂದ ಭವಿಷ್ಯವನ್ನು ನೋಡಬಲ್ಲವನಾಗಿರುತ್ತಾನೆ. ಈ ಕಾರಣದಿಂದ ತನ್ನ ಮೃಣ್ಮಯ ಕೋಶವನ್ನು ಮರೆತು ತನ್ನ ಆದರ್ಶಗಳಲ್ಲಿ ಜೀವಿಸಬಲ್ಲವನನಾಗಿರುತ್ತಾನೆ. ಭಿಕ್ಷಾಪಾತ್ರೆಯೇ ಆತನ ಸಂಕೇತ. ತಾನು ನಂಬಿದ ಆದರ್ಶಕ್ಕೋಸ್ಕರ ಎಲ್ಲವನ್ನು ತ್ಯಾಗಮಾಡಲು ಆತ ಸಿದ್ಧನಾಗಿರುತ್ತಾನೆ. ಆತನಿಗೆ ರಾಜಿ ಮನೋಧರ್ಮ ಇಲ್ಲ. ಬೌದ್ಧಿಕ ಬಲವನ್ನು ಬಳಸಿ ಕೆಲಸ ಮಾಡುವವರು ಈ ಗುಂಪಿನವರು. ತಮಗೆ ದತ್ತವಾಗಿರುವ ಸಹಜ ಪ್ರತಿಭೆಯನ್ನು ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳದೇ, ಆರ್ಥಿಕವಾಗಿ ಶುದ್ಧವಾಗಿರುವವನು. ಸಮುದಾಯದ ಸೇವೆಯನ್ನು ಶುದ್ಧ ಮಾರ್ಗದಲ್ಲಿ ಮಾಡುವುದು ಅವನ ಗುರಿ. ಅದಕ್ಕೆ ಅವನಿಗೆ ಸಿಗುವ ಪ್ರತಿಫಲ ಸಮಾಜದಲ್ಲಿ ಗೌರವ ಸ್ಥಾನ ಮತ್ತು ಗೌರವ.

ಕ್ಷತ್ರಿಯ ತನ್ನ ದೇಹದಾಚೆಗೂ ತನ್ನ ಗಮನ ಹರಿಸಿದರೂ, ತಾನು ಜೀವಿಸಿರುವ ಸಮಾಜದ ಆಚೆಗೆ ದೃಷ್ಟಿ ಹರಿಸಲಾರ. ತನ್ನ ಸಮಾಜಕ್ಕೆ ಅನುಕೂಲವಾಗುದಾದರೆ ಆತ ತನ್ನ ಆದರ್ಶಗಳೊಂದಿಗೆ ರಾಜಿ ಮಾಡಿಕೊಳ್ಳಬಲ್ಲ. ಧ್ವಜ ಅಥವಾ ಬಾವುಟ ಆತನ ಸಂಕೇತ. ಸಮಾಜದ ಒಳಿತಿನಲ್ಲಿ ತನ್ನನ್ನು ತಾನು ಕಳೆದುಕೊಂಡು ಬಿಡಬಲ್ಲ. ತನ್ನ ಸಹಜೀವಿಗಳ ಸೇವೆಯೇ ಅವನ ಗೆಲವು. ಅಧಿಕಾರ ಮತ್ತು ಸ್ಥಾನಮಾನ ಇವು ಆತ ಬಯಸುವ ಪ್ರತಿಫಲ.

ಮೂರನೆಯ ವರ್ಗದ ಲೌಕಿಕ, ತನ್ನೊಳಗೆ ತಾನೇ ಬಂಧಿ. ಅದರಿಂದಾಚೆಗೆ ಆತನಿಗೆ ನೋಡಲು ಸಾಧ್ಯವಿಲ್ಲ. ಜೈಲು ಅಥವಾ ಶಿಕ್ಷೆ ತಪ್ಪಿಸಿಕೊಂಡು ತನ್ನ ಬದುಕಿನಲ್ಲಿ ಗರಿಷ್ಠ ಪ್ರಮಾಣ ಸಾಧಿಸುವುದು ಆತನ ಆದರ್ಶ. ಅವನು ಸ್ವ ಕೇಂದ್ರಿತ ಮನುಷ್ಯ. ಆತನ ಗುರುತು ತಕ್ಕಡಿ. ಇವರು ವೈಶ್ಯರು, ಪ್ರಾಪಂಚಿಕವಾಗಿ ವರ್ತಕರು ಮತ್ತು ಉದ್ಯಮಿಗಳು. ಸಮುದಾಯದ ಬಳಕೆಗಾಗಿ ತನ್ನ ಗಳಿಕೆಯನ್ನು ತೊಡಗಿಸಿದಾಗ ಸಿಗುವ ತಾತ್ಕಾಲಿಕ ಪ್ರತಿಫಲ ಬಿಟ್ಟರೆ ಆತನಿಗೆ ಬೇರೆಯ ಗೌರವವಾಗಲೀ ಸ್ಥಾನವಾಗಲೀ ಸಿಕ್ಕುವುದಿಲ್ಲ.

ಶೂದ್ರರು, ವೈಶ್ಯರಷ್ಟು ಸಾಹಸಿಗಳಲ್ಲ. ಅವರಿಗಿರುವ ಕಲ್ಪನೆ ಈ ವರ್ಗಕ್ಕಿರುವುದಿಲ್ಲ. ಆತ ತನಗಾಗಿ ಸ್ಪಷ್ಟವಾದ ಚೌಕಟ್ಟು ನಿರ್ಮಿಸಿಕೊಂಡಿರುತ್ತಾನೆ. ತನ್ನ ಸಂಬಳ, ತನ್ನ ಪಿಂಚಣಿ ಮತ್ತು

ತನ್ನ ಪಿ.ಎಫ್. ಇವುಗಳಿಂದ ಆತ ಸಂತುಷ್ಟ.

ಇವುಗಳಿಗೆ ಒಂದು ಉದಾಹರಣೆ ನೀಡಬಹುದು. ತನ್ನ ಸ್ವಂತಕ್ಕೇನೂ ಲಾಭವಿಲ್ಲದೇ ವಿಜ್ಞಾನದ ಸಾಧ್ಯತೆಗಳನ್ನು ಅನ್ವೇಷಿಸುವ "ಎಲೆಕ್ಟ್ರಿಷಿಯನ್" ಬ್ರಾಹ್ಮಣ. ವಿಜ್ಞಾನ ಕಲಿತು ಕೈಗಾರಿಕೀಕರಣಕ್ಕೆ ನೆರವು ನೀಡಿ ತನ್ನ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವವನು ಕ್ಷತ್ರಿಯ. ವಿದ್ಯುತ್ ಅಥವಾ ಇತರೇ ಸರಬರಾಜಿನ ಗುತ್ತಿಗೆ ಹಿಡಿಯುವವ ವೈಶ್ಯ. ತನ್ನ ಭದ್ರತೆಗಾಗಿ ವಿದ್ಯುತ್ ಇಲಾಖೆಯಲ್ಲಿ ಸಂಬಳದ ಕೆಲಸ ಹಿಡಿಯುವವನು ಶೂದ್ರ.

ಹುಟ್ಟಿನಿಂದ ಬ್ರಾಹ್ಮಣನಾದರೂ ಮನುಷ್ಯನ ಮೂಲಭೂತವಾದ ಜಗಳಗಂಟತನವನ್ನು ಬಂಡವಾಳ ಮಾಡಿಕೊಂಡು ಹಣ ಮಾಡಲು ವಕೀಲಿಕೆ ಮಾಡುವನು ಬ್ರಾಹ್ಮಣನಲ್ಲ ಅವನೊಬ್ಬ ಬನಿಯಾ.ಜಾತಿಯಿಂದ ಕ್ಷತ್ರಿಯನಾದರೂ ಪರಕೀಯ ಆಡಳಿತದಲ್ಲಿ ಅಧಿಕಾರ ಸ್ಥಾನಕ್ಕೆ ಏರುವವನು (ಅವನು ಹುಟ್ಟಿನಿಂದ ಕ್ಷತ್ರಿಯನಾದರೂ) ನಿಜ ಕ್ಷತ್ರಿಯನಲ್ಲ. ಏಕೆಂದರೆ ಹಣಕ್ಕಾಗಿ ಆತ ದಾಸ್ಯಕ್ಕೆ ಸಿಲುಕುತ್ತಾನೆ. ನಿಜವಾದ ಕ್ಷತ್ರಿಯ ಸಮಯ ಬಂದರೆ ಸ್ವಾತಂತ್ರ್ಯಕ್ಕಾಗಿ ರಕ್ತ ಚೆಲ್ಲಲೂ ಸಿದ್ಧನಿರಬೇಕು. ತನ್ನ ಆತ್ಮವನ್ನು ಮಾರಿಕೊಳ್ಳಬಾರದು.

ಹೊರಗಿನ ಎಲ್ಲ ಕಸವನ್ನೂ ತೆಗೆದು ಹಾಕಿದರೆ ಆಳದಲ್ಲಿ ಕಾಣಸಿಗುವುದು ವರ್ಣವ್ಯವಸ್ಥೆಯ ಈ ವ್ಯಾಖ್ಯೆ. ಸಾಮಾಜಿಕ ವ್ಯವಸ್ಥೆಯಲ್ಲಿ ಕೊರಳು ಕುಯ್ಯುವ ಎಲ್ಲ ಸ್ಪರ್ಧೆಗಳನ್ನು ಇದು ನಿಯಂತ್ರಿಸುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯ ಆಧಾರದಲ್ಲಿ ಸಹಕಾರ ಮತ್ತು ವಿಧೇಯತೆಗೆ ಒತ್ತು ನೀಡುತ್ತವೆ. ಈ ವಿಭಾಗಗಳನ್ನು ಸಾಂಸ್ಕೃತಿಕ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಮಾಡಲಾಗಿದೆ ಈ ಮೌಲ್ಯಗಳು ಹಣ ಕೇಂದ್ರಿತ ವ್ಯವಸ್ಥೆಗೆ ಪರಿಚಯವೇ ಇಲ್ಲ ಎನ್ನಬಹುದು. ಯಾವಾಗ ಮಾನವನ ಅಗತ್ಯಗಳು ನಮ್ಮ ಗಮನಕ್ಕೆ ಮುಖ್ಯವಾಗುತ್ತವೋ ಆಗ ಭೌತಿಕ ವಿಷಯಗಳು ನಗಣ್ಯವಾಗುತ್ತವೆ. ಸಮಾಜದಲ್ಲಿನ ನಮ್ಮ ಸ್ಥಾನವನ್ನು ನಮ್ಮ ಜವಾಬ್ದಾರಿ ತೀರ್ಮಾನಿಸುತ್ತದೆಯೇ ಹೊರತು ನಮ್ಮ ಹಕ್ಕಲ್ಲ ಎಂಬ ನಿಯಮಗಳು ಖಚಿತವಾಗಿ ಸಮಾಜದಲ್ಲಿ ಚಾಲ್ತಿಗೆ ಬಂದಾಗ ನಾವು ಶಾಂತಿಗೆ ಸುಗಮವಾದ ಹಾದಿ ನಿರ್ಮಾಣ ಮಾಡಿ ಯುದ್ಧಕ್ಕೆ ಅಂತ್ಯ ಹೇಳುತ್ತಿರುತ್ತೇವೆ.

(ಮುಂದುವರೆಯುವುದು)

ವೈ ದಿ ವಿಲಜ್ ಮೂಮೆಂಟ್ ಪುಸ್ತಕದ ಅನುವಾದ
ಮೂಲ : ಜೆ.ಸಿ.ಕುಮಾರಪ್ಪ
ಕನ್ನಡಕ್ಕೆ : ಕೆ. ವೆಂಕಟರಾಜು

ಹರಿಲಾಲ್ ಗಾಂಧಿ ಕಥನ-೪

ಕುಟುಂಬವನ್ನು ತ್ಯಜಿಸಿದ ಹರಿಲಾಲ್

ಮಹಾತ್ಮ ಗಾಂಧಿಯವರು ಇಂಗ್ಲೆಂಡ್‌ನಲ್ಲಿ ಬ್ಯಾರಿಸ್ಟರ್ ಪದವಿ ಅಧ್ಯಯನ ಮಾಡುತ್ತಿದ್ದಾಗ ಡಾ. ಪ್ರೇಮ್ ಜೀವನ್ ದಾಸ್ ಎಂಬುವರು ಗಾಂಧೀಜಿಗೆ ಆತ್ಮೀಯರಾಗಿದ್ದರು. ನಂತರದ ದಿನಗಳಲ್ಲಿಯೂ ಸಹ ಅವರಿಬ್ಬರ ನಡುವೆ ಈ ಸಂಬಂಧ ಮುದುವರಿದಿತ್ತು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರು ನಡೆಸುತ್ತಿದ್ದ ಹೋರಾಟವನ್ನು ಗಮನಿಸುತ್ತಾ ಬಂದಿದ್ದ ಡಾ. ಮಿಶ್ರಾ ಅವರು ಗಾಂಧೀಜಿಗೆ ಪತ್ರ ಬರೆದು ನಿಮ್ಮ ಒಬ್ಬ ಪುತ್ರ ಮತ್ತು ಫಿನಿಕ್ಸ್ ಆಶ್ರಮದ ಒಬ್ಬ ನಿವಾಸಿ ಇವರುಗಳಿಗೆ ಇಂಗ್ಲೆಂಡಿನಲ್ಲಿ ನಾನು ವಿದ್ಯಾಭ್ಯಾಸದ ಖರ್ಚು ಭರಿಸಲು ಸಿದ್ಧನಿದ್ದೇನೆ ಎಂದು ಪತ್ರ ಬರೆದು ತಿಳಿಸಿದರು. ಜೊತೆಗೆ ನಿಮ್ಮ ಪುತ್ರ ಮಣಿಲಾಲ್‌ಗೆ ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆಯವಂತಹ ಅರ್ಹತೆ ಇದೆ, ಎಂಬುದಾಗಿಯೂ ಸಹ ಅವರು ತಮ್ಮ ಅಭಿಪ್ರಾಯ ತಿಳಿಸಿದ್ದರು.

ಆದರೆ, ಗಾಂಧೀಜಿಯವರು ತಮ್ಮ ಮಕ್ಕಳು ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆಯುವುದಕ್ಕೆ ವಿರೋಧ ವ್ಯಕ್ತ ಪಡಿಸಿದರು. ಇದಕ್ಕೆ ಎರಡು ಪ್ರಬಲ ಕಾರಣಗಳಿದ್ದವು. ಪಾಶ್ಚಿಮಾತ್ಯ ಶಿಕ್ಷಣ ನೀತಿಯ ಕುರಿತಂತೆ ಗಾಂಧಿಜಿಗೆ ಒಲವಿರಲಿಲ್ಲ. ಮತ್ತೊಂದು ಕಾರಣವೆಂದರೆ, ಅನ್ಯರ ನೆರವಿನಿಂದ ಶಿಕ್ಷಣ ಪಡೆದ ನಂತರ ವಿದ್ಯಾರ್ಥಿಯು ಜೀವನ ಪೂರ್ತಿ ಸಾರ್ವಜನಿಕ ಸೇವೆಗೆ ಕಂಕಣ ಬದ್ಧನಾಗಿರಬೇಕೆಂದು ಅವರು ಬಯಸಿದ್ದರು. ಈ ಕಾರಣಕ್ಕಾಗಿ ತಮ್ಮ ಸಂಬಂಧಿ ಚಗನ್‌ಲಾಲ್ ನನ್ನು ಆಯ್ಕೆ ಮಾಡಿದರು. ಇಂಗ್ಲೆಂಡಿಗೆ ತೆರಳುವ ಮುನ್ನ ಭಾರತಕ್ಕೆ ಹೋಗಿ ಇಡೀ ದೇಶವನ್ನು ತಮ್ಮ ಮಿತ್ರ ಪೊಲ್ಲಾಕ್ ಜೊತೆ ಸುತ್ತಬೇಕೆಂದು ಚಗನ್ ಲಾಲ್ ಗೆ ಆದೇಶಿಸಿದ್ದರು. ಅದರಂತೆ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ ನಂತರ ಚಗನ್‌ಲಾಲ್ ತಮ್ಮ ನಿರ್ಧಾರವನ್ನು ಬದಲಿಸಿ, ತಾನು ಇಂಗ್ಲೆಂಡ್ ಗೆ ಉನ್ನತ ಶಿಕ್ಷಣಕ್ಕೆ ತೆರಳಲಾರೆ ಎಂದು ಗಾಂಧೀಜಿಗೆ ಪತ್ರ ಬರೆದರು. ಈ ಪತ್ರ ಗಾಂಧೀಜಿಯವರನ್ನು ತೀವ್ರವಾಗಿ ಕೆರಳಿಸಿತು. ಏಕೆಂದರೆ, ತಮ್ಮ ಪುತ್ರರಾದ ಹರಿಲಾಲ್ ಮತ್ತು ಮಣಿಲಾಲ್ ಇಬ್ಬರಿಗೂ ಈ ಅವಕಾಶವನ್ನು ತಪ್ಪಿಸಿ, ಉನ್ನತ ಶಿಕ್ಷಣದ ಅವಕಾಶವನ್ನು ಚಗನ್ ಲಾಲ್ ಗೆ ನೀಡಿದ್ದರು. ಗಾಂಧಿಯವರು ಚಗನ್ ಲಾಲ್ ಪತ್ರ ಬರೆದು " ನೀನು ನನಗೆ ಮೀರ್ ಆಲಂ ಗಿಂತ ಹೆಚ್ಚು ಬಲವಾದ ಪೆಟ್ಟು ನೀಡಿದ್ದೀಯಾ" ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದರು.
(ಭಾರತ ಮೂಲದ ಮೀರ್ ಆಲಂ ಎಂಬ ವ್ಯಕ್ತಿ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಮೇಲೆ ಹಲ್ಲೆ ಮಾಡಿದನು)

ಈ ಎಲ್ಲಾ ಬೆಳವಣಿಗೆಗಳು ಹರಿಲಾಲ್ ಗಾಂಧಿಗೂ ಸಹ ಗೊತ್ತಿದ್ದ ಸಂಗತಿಗಳು ಎಂದು ಹೇಳುವುದಕ್ಕೆ ಯಾವುದೇ ಸಾಕ್ಷಾಧಾರಗಳಿಲ್ಲ. ಏಕೆಂದರೆ, ಚಗನ್ ಲಾಲ್ ಅವರು ೧೯೧೦ ರಲ್ಲಿ ದಕ್ಷಿಣ ಆಫ್ರಿಕಾವನ್ನು ತೊರೆದು ಭಾರತಕ್ಕೆ ಹಿಂತಿರುಗಿದಾಗ ಹರಿಲಾಲ್ ಜೈಲಿನಲ್ಲಿದ್ದರು. ಗಾಂಧೀಜಿಯವರು ಕಾರ್ಯನಿಮಿತ್ತ ಇಂಗ್ಲೆಂಡಿನಲ್ಲಿದ್ದರು. ಹರಿಲಾಲ್‌ಗೆ ಇತರೆ ವಿದ್ಯಾಮಾನಗಳಿಗಿಂತ ಹೆಚ್ಚಾಗಿ ಸತ್ಯಾಗ್ರಹದ ಹೋರಾಟ ಮುಖ್ಯವಾಗಿತ್ತು. ಈ ಕಾರಣಕ್ಕಾಗಿ ತಮ್ಮ ಕಿರಿಯ ಸಹೋದರ ಮಣಿಲಾಲ್ ಗೆ ಕುಟುಂಬದ ಜವಾಬ್ದಾರಿಯನ್ನು ವಹಿಸಿ, ಟ್ರಾನ್ಸ್ ವಾಲ್ ನಗರಕ್ಕೆ ತೆರಳಿ ಅಲ್ಲಿನ ಕಾನೂನು ಉಲ್ಲಂಘಿಸುತ್ತಾ ಜೈಲುವಾಸ ಅನುಭವಿಸುತ್ತಿದ್ದರು. ೧೯೧೦

ನವಂಬರ್ ತಿಂಗಳಿನಲ್ಲಿ ಹರಿಲಾಲ್‌ಗಾಂಧಿಯವರು ಟ್ರಾನ್ಸ್ ವಾಲ್ ನಗರದಲ್ಲಿ ಕಾನೂನು ಉಲ್ಲಂಘಿಸಿದ ಕಾರಣ ಅಲ್ಲಿನ ಸರ್ಕಾರ ಅವರನ್ನು ಬಂಧಿಸಿ, ಆರು ತಿಂಗಳ ಕಾಲ ಶಿಕ್ಷೆ ವಿಧಿಸಿ ಸೆರೆಮನೆಗೆ ನೂಕಿತು. ಇಂಗ್ಲೆಂಡಿನಲ್ಲಿದ್ದ ಗಾಂಧೀಜಿ ಈ ವಿಷಯ ತಿಳಿದು ಸಂತೋಷಪಟ್ಟರು.

ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಹಿಂತಿರುಗಿದ ನಂತರ ಗಾಂಧೀಜಿಯವರು ಫಿನಿಕ್ಸ್ ಆಶ್ರಮದ ನಿರ್ವಹಣೆಗೆ ಟ್ರಸ್ಟ್ ಒಂದನ್ನು ಸ್ಥಾಪಿಸಿ, ಅದಕ್ಕೆ ಕೆಲವು ನಿಯಾಮಾವಳಿಗಳನ್ನು ರೂಪಿಸಿದರು. ಟ್ರಸ್ಟಿನ ಪದಾಧಿಕಾರಿಗಳು ಮತ್ತು ಆಶ್ರಮವಾಸಿಗಳು ಹೇಗಿರಬೇಕು ಮತ್ತು ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದ ಕುರಿತು ನಿಯಮಾವಳಿಗಳಲ್ಲಿ ಕೆಲವು ಮಾರ್ಗದರ್ಶಿ ಸೂತ್ರಗಳಿದ್ದವು. ಹರಿಲಾಲ್ ಕೂಡ ಇವುಗಳಿಗೆ ಸಂಪೂರ್ಣ ಸಹಮತ ವ್ಯಕ್ತಪಡಿಸಿದರು. ವೊಲ್ಕ್‌ಸ್ರಸ್ಟ್ ನಗರದ ಜೈಲಿನಲ್ಲಿದ್ದ ಹರಿಲಾಲ್ ಅವರನ್ನು ಕೆಲವು ದಿನಗಳ ನಂತರ ಜೋಹಾನ್ಸ್ ಬರ್ಗ್ ಜೈಲಿಗೆ ಸ್ಥಳಾಂತರಿಸಲಾಯಿತು. ಈ ಸಂದರ್ಭದಲ್ಲಿ ಒಬ್ಬ ಕ್ರಿಮಿನಲ್ ಅಪರಾಧಿಗೆ ಕೈ ತೋಳ ತೊಡಿಸುವ ಹಾಗೆ ಅವರಿಗೆ ಕೈಗಳಿಗೆ ತೋಳವನ್ನು ಹಾಕುವುದರ ಮೂಲಕ, ಅವರ ವಸ್ತುಗಳು, ಪುಸ್ತಕಗಳು ಹಾಗೂ ಇನ್ನಿತರೆ ವಸ್ತುಗಳೊಂದಿಗೆ ಜೈಲಿನ ವಾರ್ಡನ್ ರಕ್ಷಣೆಯಲ್ಲಿ ರೈಲಿನಲ್ಲಿ ಜೋಹಾನ್ಸ್ ಬರ್ಗ್ ಜೈಲಿಗೆ ಕರೆದೊಯ್ಯಲಾಗಿತ್ತು.

೧೯೧೦ ರ ಏಪ್ರಿಲ್ ೩೦ ರಂದು ಜೈಲಿನಿಂದ ಬಿಡುಗಡೆಯಾದ ಹರಿಲಾಲ್ ಮೇ ೬ ರಂದು ಫೊನಿಕ್ಸ್ ಆಶ್ರಮಕ್ಕೆ ತೆರಳಿ ತಾಯಿ ಕಸ್ತೂರಬಾ ಮತ್ತು ಪತ್ನಿ ಹಾಗೂ ಮಗಳನ್ನು ಭೇಟಿ ಮಾಡಿ ಅವರೊಂದಿಗೆ ಕೆಲವು ದಿನಗಳ ಕಾಲ ಇದ್ದರು. ಆ ವೇಳೆಗಾಗಲೇ ಗಾಂಧೀಜಿಯವರು ಜೋಹಾನ್ಸ್ ಬರ್ಗ್ ನಗರದಿಂದ ಸುಮಾರು ೩೬ ಕಿಲೊಮೀಟರ್ ದೂರದಲ್ಲಿ ತಮ್ಮ ಮಿತ್ರರಾದ ಹರ್ಮನ್ ಕಲ್ಲೆನ್‌ಬಚ್ ಎಂಬುವವರ ಒಂದು ಸಾವಿರ ನೂರು ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಟಾಲ್‌ಸ್ಟಾಯ್ ಫಾರಂ ಎಂಬ ಎರಡನೇ ಆಶ್ರಮವನ್ನು ಆರಂಭಿಸಿ, ಅಲ್ಲಿ ವಾಸವಾಗಿದ್ದರು. ಇದೇ ಸಂದರ್ಭದಲ್ಲಿ ಹರಿಲಾಲ್ ಪತ್ನಿ ಗುಲಾಬ್ ಬೆನ್ ಎರಡನೆಯ ಬಾರಿಗೆ ಗರ್ಭವತಿಯಾದರು. ಮಗಳು ರಾಮಿಯೊಂದಿಗೆ ಗುಲಾಬ್ ಬೆನ್ ಅವರನ್ನು ತವರು ಮನೆಗೆ ಕಳಿಸಿಕೊಡಲು ಗಾಂಧೀಜಿ ನಿರ್ಧರಿಸಿದರು. ಹರಿಲಾಲ್ ಅಪೇಕ್ಷೆಯಂತೆ ಅವರನ್ನು ಭಾರತಕ್ಕೆ ಮೂರನೆಯ ದರ್ಜೆಯ ಪ್ರಯಾಣಿಕರ ಕ್ಯಾಬಿನ್ ನಲ್ಲಿ ಕಳಿಸಿಕೊಡುವುದರ ಬದಲಾಗಿ ಎರಡನೇ ದರ್ಜೆಯ ವರ್ಗದಲ್ಲಿ ಗಾಂಧೀಜಿಯವರು ಕಳುಹಿಸಿಕೊಟ್ಟರು. ಆದರೆ, ಪತ್ನಿ ಮತ್ತು ಪುತ್ರಿಯೊಂದಿಗೆ ಭಾರತಕ್ಕೆ ಹೋಗಿ ಬರುವ ತಮ್ಮ ಪುತ್ರನ ಆಕಾಂಕ್ಷೆಯನ್ನು ಗಾಂಧೀಜಿಯವರು ನೇರವಾಗಿ ತಿರಸ್ಕರಿಸಿದರು. ನಿನ್ನ ಪ್ರಯಾಣದ ಹೋಗಿ ಬರುವ ವೆಚ್ಚವನ್ನು ಭರಿಸುವ ಶಕ್ತಿ ನನ್ನಲ್ಲಿ ಇಲ್ಲ ಎಂದು ಗಾಂಧೀಜಿಯವರು ತಮ್ಮ ಪುತ್ರ ಹರಿಲಾಲ್ ಗೆ ನೇರವಾಗಿ ತಿಳಿಸಿದರು. ಈ ಘಟನೆಯು ಪ್ರಥಮ ಬಾರಿಗೆ ತಂದೆ ಮತ್ತು ಮಗನ ನಡುವಿನ ಬಾಂಧವ್ಯದಲ್ಲಿ ಬಿರುಕು ಕಾಣಿಸಿಕೊಳ್ಳಲು ಕಾರಣವಾಯಿತು.

ಹರಿಲಾಲ್ ಪುನಃ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿ ಟ್ರಾನ್ಸ್‌ವಾಲ್ ನಗರದತ್ತ ಹೊರಟರು. ೧೯೧೦ ರ ಜೂನ್ ೧೦ ರಂದು ನಗರವನ್ನು ಪ್ರವೇಶ ಮಾಡಿ ೨೩ ರಂದು ಬಂಧನಕ್ಕೆ ಒಳಗಾದರು. ಮೂರು ತಿಂಗಳ ಕಾಲ ಸೆರೆಮನೆ ವಾಸ ಅನುಭವಿಸಿ ಸೆಪ್ಟಂಬರ್ ೨೨ ರಂದು ಬಿಡುಗಡೆಯಾದರು. ಆ ವೇಳೆಗೆ ಅವರ ಪತ್ನಿ ಗುಲಾಬ್ ಬೆನ್ ಮತ್ತು ಪುತ್ರಿ ರಾಮಿ ಭಾರತದಲ್ಲಿ ತಮ್ಮ ತವರು ಮನೆಗೆ ಸುರಕ್ಷಿತವಾಗಿ ತಲುಪಿದ್ದರು. ಇತ್ತ ದಕ್ಷಿಣ ಆಫ್ರಿಕಾದಲ್ಲಿ ಹರಿಲಾಲ್ ರವರು ಜೈಲಿನಿಂದ ಬಿಡುಗಡೆಯಾದ ನಂತರ ಫೊನಿಕ್ಸ್ ಹಾಗೂ ಟಾಲ್‌ಸ್ಟಾಯ್ ಈ ಎರಡೂ ಆಶ್ರಮಗಳಲ್ಲಿ ಸೇವೆ ಸಲ್ಲಿಸುತ್ತಾ ಕಾಲಕಳೆಯುತ್ತಿದ್ದರು. ಈ ವೇಳೆಯಲ್ಲಿ ದಕ್ಷಿಣ ಆಫ್ರಿಕಾ ಸರ್ಕಾರವು ನೂತನ ಕಾನೂನನ್ನು ಜಾರಿಗೆ ತರಲು ಸಿದ್ಧತೆ ನಡೆಸಿರುವ ವಿಷಯ ತಿಳಿದ

ಗಾಂಧೀಜಿಯವರು ಈ ಕುರಿತಂತೆ ಮುಂದಿನ ಹೋರಾಟದ ಸ್ವರೂಪ ಕುರಿತಂತೆ ಚರ್ಚಿಸಲು ಕೇಪ್ ಟೌನ್ ನಗರದತ್ತ ಹೊರಟರು. ಈ ಸಂದರ್ಭದಲ್ಲಿ ತಂದೆಯ ಹೊಣೆಗಾರಿಕೆಯನ್ನು ಹರಿಲಾಲ್ ತಮ್ಮ ಹೆಗಲಿಗೆ ವರ್ಗಾಯಿಸಿಕೊಂಡರು.

೧೯೧೧ ರ ಏಪ್ರಿಲ್ ತಿಂಗಳಿನಲ್ಲಿ ಸ್ಥಳಿಯ ಆಸ್ಪತ್ರೆಯಿಂದ ಆಶ್ರಮಕ್ಕೆ ದೂರವಾಣಿ ಕರೆಯೊಂದು ಬಂದಿತು. ಅನಾಮಧೇಯ ಭಾರತೀಯ ನಾಗರಿಕನೊಬ್ಬ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಆತನ ವಿಳಾಸ ಮತ್ತು ಗುರುತು ಪತ್ತೆಯಾಗದ ಕಾರಣ ಆಸ್ಪತ್ರೆಯ ಅಧಿಕಾರಿಗಳು ಫೊನಿಕ್ಸ್ ಆಶ್ರಮಕ್ಕೆ ಕರೆ ಮಾಡಿದ್ದರು. ಹರಿಲಾಲ್ ಆಸ್ಪತ್ರೆಗೆ ತೆರಳಿ ಅನಾಥ ಶವವನ್ನು ಪಡೆದು ಅಂತಿಮ ಸಂಸ್ಕಾರ ನೆರವೇರಿಸಿದರು.

ಸ್ಥಳಿಯ 'ಟ್ರಾನ್ಸ್ ವಾಲ್ ಲೀಡರ್' ಎಂಬ ಪತ್ರಿಕೆಯ ಸಂಪಾದಕರಾಗಿದ್ದ ರೆವರೆಂಡ್ ಫಿಲಿಪ್ಸ್ ಮತ್ತು ಆಲ್ಬರ್ಟ್ ಕಾರ್ಟ್‌ವೈಟ್ ಎಂಬುವವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ನಾಗರಿಕರ ಬಗ್ಗೆ ಸಹಾನುಭೂತಿಯುಳ್ಳವರಾಗಿ ಗಾಂಧೀಜಿಯವರ ಹೋರಾಟಕ್ಕೆ ಪತ್ರಿಕೆಯ ಮೂಲಕ ನೈತಿಕ ಬೆಂಬಲ ವ್ಯಕ್ತಪಡಿಸುತ್ತಿದ್ದರು. ಅವರಿಬ್ಬರೂ ಇಂಗ್ಲೆಂಡ್‌ಗೆ ತೆರಳುವ ಸಂದರ್ಭದಲ್ಲಿ ಹರಿಲಾಲ್ ತಾವೇ ಸ್ವತಃ ಮುಂದಾಳತ್ವ ವಹಿಸಿ, ಅವರಿಬ್ಬರಿಗೆ ಆಶ್ರಮದಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸುವುದರ ಮೂಲಕ ಗೌರವಿಸಿದರು. ಸತ್ಯಾಗ್ರಹಿಗಳು ಜೈಲಿನಿಂದ ಬಿಡುಗಡೆಯಾಗುವ ಸಂದರ್ಭದಲ್ಲಿ ಜೈಲಿನ ಮುಖ್ಯ ದ್ವಾರದಲ್ಲಿ ನಿಂತು ಅವರಿಗೆ ಹೂ ಮಾಲೆ ಹಾಕಿ ಸ್ವಾಗತಿಸುತ್ತಿದ್ದರು. ಒಟ್ಟಾರೆ ಹರಿಲಾಲ್ ಅವರ ಕಾರ್ಯಚಟುವಟಿಕೆಗಳು ಗಾಂಧೀಜಿಗೆ ಒಬ್ಬ ಸಮರ್ಥನಾದ ಪುತ್ರ ಹಾಗೂ ಹೋರಾಟದ ಉತ್ತರಾಧಿಕಾರಿ ದೊರೆತನು ಎಂಬ ಅಭಿಪ್ರಾಯ ಎಲ್ಲೆಡೆ ಮೂಡಿಬರಲು ಕಾರಣವಾದವು. ಇದರ ಜೊತೆಗೆ ಗಾಂಧೀಜಿಯವರ ಸಹವರ್ತಿಗಳಲ್ಲಿ ಒಬ್ಬರಾಗಿದ್ದ ಜೋಸೆಫ್ ರಾಯಪ್ಪನ್ ಎಂಬುವರು ಟ್ರಾನ್ಸ್‌ವಾಲ್ ನಗರದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಇಚ್ಛಿಸಿದಾಗ ಗಾಂಧೀಜಿಯವರ ನೇತೃತ್ವದಲ್ಲಿ ಅವರನ್ನು ಗೌರವಿಸಿ ಕಳುಹಿಸಿಕೊಡಲಾಯಿತು. ಈ ಸಮಾರಂಭದಲ್ಲಿಯೂ ಕೂಡ ಹರಿಲಾಲ್ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ದಕ್ಷಿಣಾ ಆಫ್ರಿಕಾದಲ್ಲಿ ನಡೆಯುತ್ತಿದ್ದ ಹೋರಾಟದಲ್ಲಿ ಭಾಗವಹಿಸಿ ಎಲ್ಲರಿಗೂ ಸ್ಫೂರ್ತಿಯಾಗಿದ್ದ ಹರಿಲಾಲ್ ಒಳಗೊಳಗೆ ತನ್ನ ತಂದೆಯ ಹಲವು ನಿರ್ಧಾರಗಳ ವಿರುದ್ಧ ಅಸಹನೆಯಿಂದ ಕುದಿಯುತ್ತಿದ್ದರು. ಅವುಗಳಲ್ಲಿ ಪ್ರಮುಖವಾಗಿ ವಿವಾಹ ಕುರಿತಂತೆ ಬಾಪು ವ್ಯಕ್ತಪಡಿಸಿದ ಅಭಿಪ್ರಾಯ ಹಾಗೂ ಮಕ್ಕಳ ಶಿಕ್ಷಣ ಕುರಿತಂತೆ ಗಾಂಧೀಜಿಗೆ ಇದ್ದ ಖಚಿತ ನಿಲುವುಗಳ ಬಗ್ಗೆ ಹರಿಲಾಲ್ ಗೆ ಸಹಮತವಿರಲಿಲ್ಲ. ಹರಿಲಾಲ್ ಹಾಗೂ ಅವರ ಹೆಂಡತಿ ಆಫ್ರಿಕಾಕ್ಕೆ ತೆರಳಿ ಫೊನಿಕ್ಸ್ ಆಶ್ರಮವಾಸಿಗಳಾಗಿದ್ದ ಸಂದರ್ಭದಲ್ಲಿಯೂ ಸಹ ಗಾಂಧೀಜಿಯವರು ಒಮ್ಮೆ ತಮ್ಮ ಪುತ್ರನ ವಿವಾಹ ಕುರಿತಂತೆ ಪ್ರಸ್ತಾಪಿಸುತ್ತಾ " ಈಗ ಹರಿಲಾಲ್ ನ ನಿರ್ಧಾರ ಬಗ್ಗೆ ಹೇಳಲು ನನಗೇನೂ ಉಳಿದಿಲ್ಲ, ಅದು ಸರಿಯಾದ ನಿರ್ಧಾರ ಎಂದೂ ಸಹ ನಾನು ಹೇಳಲಾರೆ" ಎಂದು ಆಡಿದ ಮಾತುಗಳು ಹರಿಲಾಲ್ ಅವರನ್ನು ಘಾಸಿಗೊಳಿಸಿದ್ದವು. ನಂತರ ಮಕ್ಕಳ ಶಿಕ್ಷಣ ಕುರಿತಂತೆ ಅವರು ತೆಗೆದುಕೊಂಡ ಕಠಿಣ ನಿಲುವುಗಳು ಹರಿಲಾಲ್ ಗೆ ತನ್ನ ತಂದೆಯ ವಿರುದ್ಧ ಸಿಡಿದೇಳುವಂತೆ ಉದ್ದೀಪಿಸಿದವು. ●

(ಮುಂದುವರಿಯುವುದು)

ಹರಿಲಾಲ್ ಗಾಂಧೀ ಜೀವನ ಕಥನ

ಮೂಲ : ಚಂದೂಲಾಲ್ ಜೈನ್; ಕನ್ನಡಕ್ಕೆ : ಜಗದೀಶ ಕೊಪ್ಪ

ಎಂಥ ಮರುಳಯ್ಯಾ, ಇದು ಎಂಥಾ ಮರಳು

ಸುಗಿತನಯ

ಅಕ್ಟೋಬರ್ ೧೪ ೨೦೧೭ ಈ ದೇಶದ ಚರಿತ್ರೆಯಲ್ಲಿ ಸೇರುವ ಮತ್ತೊಂದು ಮಹತ್ವದ ದಿನ. ಇದು ಸಂತೋಷದ ದಿನವಲ್ಲ. ಅತ್ಯಂತ ದು:ಖದ , ಭಯ ಪಡಬೇಕಾದ ದಿನ. ಆ ದಿನ 'ಅನ ದೊರೊತಿಯಾ' ಎಂಬ ಹಡಗು ಮಲೇಶಿಯಾದಿಂದ ಹೊತ್ತು ತಂದಿದ್ದ ಮಾಲನ್ನು ಇಳಿಸಲು ತುತ್ತಿಕುಡಿಯ ಚಿದಂಬರನಾರ್ ಬಂದರಿನಲ್ಲಿ ಬಂದು ನಿಂತಿತು. ಅದು ಮಹತ್ವದ ದಿನ, ಏಕೆಂದರೆ ದೇಶದ ಮರಳನ್ನೆಲ್ಲಾ ಖಾಲಿ ಮಾಡಿದ ನಾವು ಮೊದಲಬಾರಿಗೆ ವಿದೇಶದಿಂದ ಮರಳು ಆಮದು ಮಾಡಿಕೊಳ್ಳುವ ಸ್ಥಿತಿಯನ್ನು ತಲುಪಿದೆವು. ೫೫ ಸಾವಿರ ಟನ್ ಅಥವಾ ೧,೮೫೦ ಲಾರಿ ಭರ್ತಿ ಮರಳು ಮಲೇಶಿಯಾದ ಸುಂಗೈ ಪಹಾಂಗ್ ನದಿಯ ದಡದಿಂದ ಎತ್ತಿದ ಮರಳು ರಫ್ತಾಗಿ ತುತ್ತಿಕೋಡಿನ ಬಂದರಿಗೆ ಬಂದಿತ್ತು.

ಈ ಮರಳು ತುಂಬಿದ ಹಡಗು ಬಂದರು ತಲುಪುವ ವೇಳೆಗೆ ಈ ಆಮದು ಮಾಡಕೊಂಡ ಮರಳಿಗೆ ಬೇಡಿಕೆಯ ಸುರಿಮಳೆಯೇ ಬಂತು ಎಂದು ಸಂತೋಷದಿಂದ ಹೇಳುತ್ತಾರೆ ಎಂ ಆರ್ ಎಂ ರಾಮಿಯಾ ಎಂಟರ್ ಪ್ರೈಸಸ್‌ನ ವಿಜಯರಾಜ್.

ಮರಳು ಸಿಮೆಂಟು ತಯಾರಿಕೆಯಲ್ಲಿ ಕಾಂಕ್ರಿಟ್ ತಯಾರಿಕೆಯಲ್ಲಿ ಪ್ರಮುಖವಾಗಿ ಬೇಕಾದ ವಸ್ತು. ಆದರೆ ಎಲ್ಲ ರೀತಿಯ ಮರಳೂ ಸಿಮೆಂಟು ಮತ್ತು ಕಾಂಕ್ರಿಟ್ ತಯಾರಿಕೆಗೆ ಪ್ರಯೋಜನಕ್ಕೆ ಬರುವುದಿಲ್ಲ. ಮರಳುಗಾಡಿನಲ್ಲಿರುವ ಮರಳಿನ ಕಣಗಳು ಬಹಳ ನುಣುಪಾಗಿದ್ದು ಅವು ಒಂದಕ್ಕೊಂದು ಅಂಟಿಕೊಳ್ಳದ ಕಾರಣ ಅದು ಪ್ರಯೋಜನಕ್ಕೆ ಬರುವುದಿಲ್ಲ. ಅದೇ ರೀತಿ ಸಮುದ್ರದ ಮರಳಿನಲ್ಲಿ ಉಪ್ಪಿನ ಅಂಶ ಇರುವುದರಿಂದ ಕಾಂಕ್ರೀಟ್ ತಯಾರಿಕೆಯಲ್ಲಿ ಅದನ್ನು ಬಳಸುವುದು ಕಷ್ಟ. ಹಾಗಾಗಿ ನದಿಯಿಂದ ತೆಗೆದ ಮರಳಿಗೆ ಬೇಡಿಕೆ ಹೆಚ್ಚು.

ಅನ ದೊರೊತಿಯಾ ತತ್ತುಕುಡಿಯನ್ನು ತಲುಪಿದ ಕೆಲವೇ ದಿವಸಗಳಲ್ಲಿ ನಮ್ಮ ಕಂಪನಿಗೆ ಆಮದು ಮಾಡಿಕೊಂಡ ಮರಳಿಗಾಗಿ ೭ ಲಕ್ಷ ಟನ್ ಗಾಗಿ ಮತ್ತೆ ಬೇಡಿಕೆ ಬಂದಿದೆ ಎನ್ನುತ್ತಾರೆ ವಿಜಯರಾಜ್. ಆಮದು ಮಾಡಿಕೊಂಡ ಮರಳು ದೇಶದ ಕಿನಾರೆಯನ್ನು ತಲುಪುತ್ತಿದ್ದಂತೆ ಕಾನೂನಿನ ಅಡಚಣೆಗಳು ರಾಮಿಯಾ ಕಂಪನಿಯ ೬ ಲಾರಿಗಳನ್ನು ತಡೆದ ಪೊಲೀಸರು ಗಣಿಗಾರಿಕೆಗೆ ಪರವಾನಿಗೆ ಇಲ್ಲದೆ ಮರಳನ್ನು ಸಾಗಿಸುತ್ತಿರುವುದಕ್ಕೆ ಲಾರಿ ಚಾಲಕನನ್ನು ಬಂಧಿಸಿ ಕಂಪನಿಯ ಮೇಲೆ ಪ್ರಕರಣ ದಾಖಲು ಮಾಡಿಕೊಂಡರು. ಮದ್ರಾಸ್ ಉಚ್ಚನ್ಯಾಯಾಲಯದ ಮೊರೆ ಹೋದ ಕಂಪನಿಯ ಪರವಾಗಿ ಆದೇಶ ಹೊರಬಿದ್ದು ಬಹಳ ಬೇಡಿಕೆ ಮತ್ತು ಅಧಿಕ ಕೊರತೆ ಇರುವುದರಿಂದ ಕಂಪನಿ ಮರಳು ದಂಧೆ ಮಾಡಲು ಯಾವುದೇ ಅಡಚಣೆಯಿಲ್ಲ ಎಂದು ತೀರ್ಪು ಇತ್ತಿತು. ಸಮಸ್ಯೆ ಇದ್ದದ್ದು ಈ ರೀತಿಯ ಪರಿಸ್ಥಿತಿಯೊಂದು ನಿರ್ಮಾಣವಾಗಬಹುದೆಂಬ

ಊಹೆಯೂ ಕಾನೂನು ರಚನೆ ಮಾಡಿದವರಿಗೆ ಬಂದಿರಲಿಲ್ಲ ! ಮರಳಿನ ಕೊರತೆ ಎಷ್ಟಿದೆ ಎಂದರೆ ,ಕಾನೂನಿನ ತೊಡಕು ತಮಿಳುನಾಡಿನಲ್ಲಿ ಉಂಟಾಗುತ್ತಿದ್ದಂತೆ ರಾಮಿಯಾ ಕಂಪನಿಯು ತಮಿಳುನಾಡಿನ ಸಹವಾಸವೇ ಬೇಡ ಎಂದು ಕೇರಳದ ಕೊಚ್ಚಿನ್ ಬಂದರಿನಲ್ಲಿ ಮುಂದಿನ ಕಂತು ೪೫ ಸಾವಿರ ಟನ್ ಮರಳನ್ನು ಇಳಿಸಿತು. ಮರಳಿನ ಕೊರತೆ ಅರಿತಿದ್ದ ಕೇರಳ ಸರ್ಕಾರ ಎರಡೇ ದಿನದಲ್ಲಿ ಕಂಪನಿಗೆ ಮರಳು ಮಾಡಲು ಅವಕಾಶ ನೀಡಿತು. ಕಂಪನಿಯು ಒಂದು ಟನ್ನಿಗೆ ಎರಡು ಸಾವಿರದಂತೆ ಮಾರಾಟ ಮಾಡಲು ಪ್ರಾರಂಭಿಸಿತು. ಇದರಿಂದ ಉಲ್ಲಸಿತರಾದ ಇನ್ನೂ ನಾಲ್ಕು ಕಂಪನಿಗಳು ವ್ಯಾಪಾರದ ಕಣಕ್ಕಿಳಿದವು. ಕೊಚ್ಚಿನ್ ಬಂದರಿನಲ್ಲಿ ೧ ಲಕ್ಷ ಟನ್ ಮಲೇಶಿಯಾದ ಮರಳು ಕೊಚ್ಚಿನ್ ಬಂದರಿಗೆ ಬರುವಂತೆ ಮಾಡಿದವು. ಇದನ್ನು ನೋಡಿದ ಕರ್ನಾಟಕ ತನ್ನ ರಾಜ್ಯದ ಮರಳಿನ ಕೊರತೆಯನ್ನು ನೀಗಿಸಲು ಎಂ.ಎಸ್.ಐ.ಎಲ್ ಮೂಲಕ ತಾನೂ ೫೪ ಸಾವಿರ ಟನ್ ಮರಳು ಖರೀದಿಸಿ ಟನ್ ಗೆ ೩,೯೦೦/- ರೂಪಾಯಿಯಂತೆ ಮಾರಲು ಪ್ರಾರಂಭಿಸಿತು. ಇದನ್ನು ನೋಡಿದ ಮಹಾರಾಷ್ಟ್ರ ಮತ್ತು ಆಂಧ್ರ ಸರ್ಕಾರಗಳು ಫಿಲಿಪೈನ್ಸ ದೇಶದ ಮರಳು ಆಮದಿಗೆ ಮುಂದಾಗಿವೆ. ಬೆಲೆಯೇ ಇರದಿದ್ದ ಮರಳಿಗೆ ಏಕಾಏಕಿ ಇಷ್ಟೊಂದು ಬೆಲೆ ಬರಲು ಕಾರಣವೆಂದರೆ ನಗರೀಕರಣದಿಂದಾಗಿ ಕಟ್ಟದ ನಿರ್ಮಾಣ ದಂಧೆ ದೊಡ್ಡ ಪ್ರಮಾಣದಲ್ಲಿ ಬೆಳೆದದ್ದು. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಈ ರಾಜ್ಯಗಳಲ್ಲಿ ಶೇ ೩೫ ಜನಸಂಖ್ಯೆ ನಗರಗಳಲ್ಲಿ ವಾಸಿಸತೊಡಗಿವೆ. ಅಗಾಧ ಪ್ರಮಾಣದಲ್ಲಿ ವಸತಿ ಸಮಸ್ಯೆ ಉಂಟಾಗತೊಡಗಿದೆ.

ಇದು ಕೇವಲ ಮರಳಿನ ಸಮಸ್ಯೆ ಮಾತ್ರವಲ್ಲ. ಎಲ್ಲ ಸ್ವಾಭಾವಿಕ ಸಂಪನ್ಮೂಲಗಳನ್ನೂ ನಾವು ಇದೇ ರೀತಿ ಕರಗಿಸುತ್ತಾ ಬಂದಿದ್ದೇವೆ. ನೀರು, ಕಲ್ಲು, ಕೂಡ ಈಗಾಗಲೇ ಮರಳಿನ ಸ್ಥಿತಿಗೆ ಬಂದು ತಲುಪಿವೆ. ಜನರು ಈಗಾಗಲೇ ಕುಡಿಯುವ ನೀರನ್ನು ಹಣ ಕೊಟ್ಟು ಕೊಳ್ಳುವ ವ್ಯವಸ್ಥೆಯನ್ನು ಒಪ್ಪಿಕೊಂಡಂತಾಗಿದೆ. ಇದಕ್ಕೆಲ್ಲಾ ಕಾರಣ ಅಭಿವೃದ್ಧಿಯ ಬಗೆಗಿನ ನಮ್ಮ ಪರಿಕಲ್ಪನೆಯಲ್ಲಿ ದೋಷ ಇರುವುದೇ ಆಗಿದೆ. ಆದರೆ ಅಭಿವೃದ್ಧಿಯ ಪರಿಕಲ್ಪನೆ ಬಂಡವಾಳಶಾಹಿಗಳು ಮತ್ತು ಕೇವಲ ಸ್ವಹಿತದ ರಾಜಕಾರಣಿಗಳ ಕೈಯಲ್ಲಿ ಸಿಲುಕಿಹೋಗಿದೆ. ಜನಸಾಮಾನ್ಯರು ಪ್ರಕೃತಿ ಎಂದರೆ ಅಕ್ಷಯ ಪಾತ್ರೆ ಎಂಬ ಭ್ರಮೆಯಲ್ಲಿ ಬಿದ್ದಿದ್ದಾರೆ. ಬಿಡುಗಡೆಯ ದಾರಿ ಕಾಣದಾಗಿದೆ. ಒಟ್ಟಿನಲ್ಲಿ ಮನುಷ್ಯನ ಈ ಹುಚ್ಚಾಟಕ್ಕೆ ಪ್ರಕೃತಿಯೇ ನಿಯಂತ್ರಣ ತರಬೇಕಷ್ಟೆ. ●

ನಾವೆಷ್ಟು ನಾಗರಿಕರು ?

–ವೈನತೇಯ

ನಮ್ಮೆಲ್ಲರಿಗೂ ಪರಿಚಿತವಾಗಿರುವ 'ನಾಗರಿಕತೆ' ಎಂಬ ಪದವನ್ನು ಸೂತ್ರರೂಪದಲ್ಲಿ ವಿವರಿಸುವುದು ಕಷ್ಟ. 'ನಗರದಲ್ಲಿ ವಾಸಿಸುವವರ ನಡೆವಳಿಕೆಯೇ ನಾಗರಿಕತೆ' ಎಂಬರ್ಥದಲ್ಲಿ ಈ ಪದ ಹುಟ್ಟಿಕೊಂಡಿರಬೇಕು. ಒಂಟಿಯಾಗಿಯೇ ಸೀಮಿತ ಪರಿವಾರದೊಂದಿಗೆ ತನ್ನಷ್ಟಕ್ಕೆ ತಾನೆ ಬದುಕುತ್ತಿದ್ದ ಪ್ರಾಚೀನ ಮಾನವನಿಗೆ ನಾಗರಿಕತೆಯ ಕಲ್ಪನೆ ಇರಲ್ಲಿಲ್ಲ. ಆತ ಇತರರ ಬಗ್ಗೆ ಯೋಚಿಸುತ್ತಿರಲಿಲ್ಲ. ತಾನು ಮತ್ತು ತನ್ನ ಪರಿವಾರ ಮಾತ್ರ ಬದುಕಿದರೆ ಸಾಕು ಎಂಬ ಧೋರಣೆಯಿಂದ ತನ್ನ ಜೀವನ ಕ್ರಮವನ್ನು ರೂಪಿಸಿಕೊಂಡಿದ್ದ. ಆದರೆ ಕಾಲಕ್ರಮೇಣ ಆತನಿಗೆ ಸಮುದಾಯದಲ್ಲಿ ಬದುಕಬೇಕಾದ ಅಗತ್ಯ ಉಂಟಾಯಿತು. ಅದಕ್ಕನುಗುಣವಾಗಿ ಆತನ ಆಲೋಚನಾಕ್ರಮ ಹಾಗೂ ಜೀವನಕ್ರಮಗಳಲ್ಲಿ ಬದಲಾವಣೆ ಕಾಣಿಸಿಕೊಂಡಿತ್ತು. "ತಾನು ಮಾತ್ರ ಬದುಕಿದರೆ ಸಾಲದು; ಇತರರು ಬದುಕಬೇಕು, ಅವರಿಗೆ ತನ್ನಿಂದ ತೊಂದರೆಯಾಗಬಾರದು" ಎಂಬ ತಿಳವಳಿಕೆ ಮನುಷ್ಯನಲ್ಲಿ ಮೂಡಿದಾಗಲೇ 'ನಾಗರಿಕತೆ' ಎಂಬ ಪರಿಕಲ್ಪನೆಯ ಉದಯವಾಯಿತೆನ್ನಬಹುದು.

ಸಾಮಾನ್ಯವಾಗಿ ಒಬ್ಬ ಮನುಷ್ಯನನ್ನು ಆತನ ವೇಷಭೂಷಣ, ಮಾತಾಡುವ ರೀತಿ, ಇತರರೊಂದಿಗೆ ಆತನ ವರ್ತನೆ ಮುಂತಾದವುಗಳನ್ನು ಆಧರಿಸಿ ಆತ ನಾಗರಿಕನೋ, ಅನಾಗರಿಕನೋ ಎಂಬುದನ್ನು ಗುರುತಿಸುತ್ತೇವೆ. ಅರ್ಥಾತ್ ನಾಗರಿಕತೆ ಎಂಬುದನ್ನು ವ್ಯಕ್ತಿಯೊಬ್ಬನ ಬಾಹ್ಯ ಸ್ವರೂಪ ಹಾಗೂ ವರ್ತನೆಗಳ ಸಹಾಯದಿಂದ ಅಳೆಯುತ್ತೇವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ "ಮನುಷ್ಯ ತನ್ನ ಬಾಹ್ಯ ಸನ್ನಿವೇಶಗಳಿಗೆ ಅಂದರೆ ಸಮಾಜ, ಅವಕಾಶ, ವ್ಯವಹಾರ ಮೊದಲಾದವುಗಳಿಗೆ ತೋರಿಸುವ ಪ್ರತಿಕ್ರಿಯೆಯ ಫಲವೇ ನಾಗರಿಕತೆ". ನಾಗರಿಕತೆ ಹಾಗೂ ಸಂಸ್ಕೃತಿ ಎಂಬ ಎರಡು ಪರಿಕಲ್ಪನೆಗಳೂ ಪರಸ್ಪರ ತಳಕು ಹಾಕಿಕೊಂಡಿರುವಂಥವು. ಸಂಸ್ಕೃತಿ ಎಂಬುದು ವ್ಯಕ್ತಿಯ ಅಂತರಂಗದಲ್ಲಿ ವಿಕಸಿತವಾಗಿ, ಆತನ ಬಹಿರಂಗದಲ್ಲಿ ಹೊಮ್ಮುವಂಥದು. ನಾಗರಿಕತೆ ಬಹಿರ್ಮುಖವಾಗಿದ್ದು ನಿಧಾನವಾಗಿ ಅಂತರಂಗಕ್ಕೆ ಇಳಿಯಬೇಕಾದುದು. ನಮ್ಮ ಮಹತ್ವದ ಚಿಂತಕರಲ್ಲೊಬ್ಬರಾಗಿರುವ ಪ್ರೋ. ಎಲ್. ಎಸ್. ಶೇಷಗಿರಾವ್ ಅವರು ತಮ್ಮದೊಂದು ಲೇಖನದಲ್ಲಿ ಈ ಬಗ್ಗೆ ಸೊಗಸಾಗಿ ವಿಶ್ಲೇಷಿಸಿದ್ದಾರೆ. ಅವರೆನ್ನುತ್ತಾರೆ: " ಸಮಾಜದ ನಿಯಮ, ಇತರರ ಅಭಿಪ್ರಾಯ, ಯೋಗ್ಯ ಅಯೋಗ್ಯಗಳ ಬಗೆಗೆ ತನ್ನ ಸ್ವಂತ ಪ್ರಜ್ಞೆ – ಯಾವುದಕ್ಕೂ ಲಕ್ಷ್ಯ ಮಾಡದವನು ಅನಾಗರಿಕ, ಅಸಂಸ್ಕೃತ. ಸಮಾಜದ ಕಟ್ಟಳೆಗೆ ವಿರುದ್ಧವಾಗಿ ನಡೆದರೆ ತನಗೆ ಶಿಕ್ಷೆಯಾಗುತ್ತದೆ ಎಂದು ಭಯಪಡುವವನಲ್ಲಿ ನಾಗರಿಕತೆ ಅಂಕುರವಿಟ್ಟಿದೆ. ತನ್ನ ಸುತ್ತಮುತ್ತಲಿರುವವರು ತನಗೆ ಶಿಕ್ಷೆ ಕೊಡಲಾರರು, ಆದರೂ ಅವರ ಅಭಿಪ್ರಾಯಕ್ಕೆ ತಾನು ಮನ್ನಣೆ ಕೊಡಬೇಕು ಎಂಬ ಅರಿವಿರುವವನು ನಾಗರಿಕತೆಯನ್ನು ಇನ್ನೂ

ಹೆಚ್ಚಾಗಿ ಬೆಳೆಸಿಕೊಂಡಿದ್ದಾನೆ, ಸಂಸ್ಕೃತಿಯತ್ತ ಸಾಗಿದ್ದಾನೆ. ಇದು ಮನುಷ್ಯನಿಗೆ ಸಲ್ಲದ ನಡತೆ ಎಂಬ ಪ್ರಜ್ಞೆ ಬೆಳಕಿನಲ್ಲಿ ನಡೆಯುವವನು ಸುಸಂಸ್ಕೃತ".

ಇದನ್ನು ಹಿನ್ನೆಲೆಯಾಗಿರಿಸಿಕೊಂಡು ನಮ್ಮ ದೇಶದ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದಾಗ "ನಾವೆಷ್ಟು ನಾಗರಿಕರು?" ಎಂಬ ಪ್ರಶ್ನೆಗಿಂತ "ನಾವು ನಾಗರಿಕರೆ?" ಅಥವಾ "ನಾವು ನಿಜಕ್ಕೂ ಮನುಷ್ಯರೇ?" ಎಂಬ ಪ್ರಶ್ನೆಗಳೇ ಸೂಕ್ತವಾದಾವು. ನೈಸರ್ಗಿಕ ಶಕ್ತಿಗಳನ್ನು ವಶಪಡಿಸಿಕೊಂಡು, ಆಧುನಿಕ ಆವಿಷ್ಕಾರಗಳನ್ನು ಬಳಸಿಕೊಂಡು ಬದುಕುತ್ತಿರುವ ನಾವು ನಾಗರಿಕರಾಗಿ, ಮನುಷ್ಯರಾಗಿ ಬದುಕುವುದರಲ್ಲಿ ಸೋಲುತ್ತಿದ್ದೇವೆ. ನಮ್ಮ ಹಿರಿಯರಲ್ಲಿ ಪ್ರಮುಖವಾಗಿದ್ದ ಮೌಲ್ಯಪ್ರಜ್ಞೆ ನಮ್ಮಲ್ಲಿ ಸಂಪೂರ್ಣ ಮಂಕಾಗಿದೆ. ಅಂತರಂಗ ಮತ್ತು ಬಹಿರಂಗ ಎರಡನ್ನೂ ನಿರ್ಮಲವಾಗಿ ಇರಿಸಿಕೊಳ್ಳಬೇಕೆಂಬ ವಿವೇಕ ನಮ್ಮಲ್ಲಿಲ್ಲ. ಹೆಣ್ಣುಮಕ್ಕಳನ್ನು ಪೀಡಿಸಿ, ತಮ್ಮ ತೆವಲು ತೀರಿಸಿಕೊಳ್ಳುವ ಪೈಶಾಚಿಕ ಪ್ರವೃತ್ತಿ ಎಷ್ಟು ಹೆಚ್ಚಿದೆ ಎಂಬುದನ್ನು ದಿನನಿತ್ಯ ಮಾಧ್ಯಮಗಳಲ್ಲಿ ನೋಡುತ್ತಲೇ ಇದ್ದೇವೆ. ನಮ್ಮ ಪರಿಸರವನ್ನು ಸ್ವಚ್ಛವಾಗಿರಿಸಿಕೊಂಡು, ವಾಸಯೋಗ್ಯವಾಗಿ ಕಾಪಾಡಿಕೊಳ್ಳಬೇಕೆಂಬ ಎಚ್ಚರ ನಮ್ಮಿಂದ ಸಂಪೂರ್ಣ ಮರೆಯಾಗಿದೆ. ಉದ್ದೇಶಪೂರ್ವಕವಾಗಿ ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸಿ, ಸಮುದಾಯದ ಸ್ವಾಸ್ಥ್ಯವನ್ನು ಹಾಳುಮಾಡುವ ಪ್ರವೃತಿ ವಿಜೃಂಭಿಸುತ್ತಿದೆ. ಅಧಿಕಾರ ಗಿಟ್ಟಿಸಿಕೊಂಡು ಸಿಕ್ಕ ಅವಕಾಶದಲ್ಲಿ ಸಾಧ್ಯವಾದಷ್ಟು ಕೊಳ್ಳೆ ಹೊಡೆದು, ಹಲವು ತಲೆಮಾರುಗಳಿಗೆ ಸಾಕಾಗುವಷ್ಟು ಸಂಪತ್ತನ್ನು ಶೇಖರಿಸಿಡುವ ಹಪಾಹಪಿ ಉತ್ಕಟವಾಗಿ ಕಾಣುತ್ತಿದೆ. ಆದ್ದರಿಂದ "ನಾವೆಷ್ಟು ನಾಗರಿಕರು?" ಎಂಬ ಪ್ರಶ್ನೆ ಅಸಂಗತವೆನ್ನಿಸುವುದಿಲ್ಲವೆ?●

ಜನಪದ ಡೈರಿ

ಜನಪದ ಖಾದಿ

ಜನಪದ ಸೇವಾ ಟ್ರಸ್ಟಿನ ಖಾದಿ ಚಟುವಟಿಕೆಗೆ ಹೊಸ ಚೈತ್ಯನ ತುಂಬುವ ಕೆಲಸವನ್ನು ಸತತವಾಗಿ ಮಾಡುತ್ತಾ ಬರಲಾಗುತ್ತಿದೆ. ಸಂಸ್ಥೆಯ ಖಾದಿ ಚಟುವಟಿಕೆಯನ್ನು ಭವಿಷ್ಯದಲ್ಲಿ ಕೇಂದ್ರದಲ್ಲಿ ಕೆಲಸ ಮಾಡುವ ಕೆಲಸಗಾರರೇ ಕೇಂದ್ರದ ಸಂಪೂರ್ಣ ಹೊಣೆಹೊತ್ತು ನಡೆಸಿಕೊಂಡು ಹೋಗಬೇಕೆಂಬುದು ಇಚ್ಛೆಯಾಗಿದೆ. ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಲು ಕೆಲಸಗಾರರು ಕೇಂದ್ರದ ದುಡಿಯುವ ಬಂಡವಾಳದಲ್ಲಿ ಒಂದು ಭಾಗವನ್ನು ತಾವು ತೊಡಗಿಸಿ ಕೇಂದ್ರದ ಲಾಭ ನಷ್ಟದಲ್ಲಿ ಭಾಗಿಗಳಾಗುವಂತೆ ಮಾಡಿ ಅವರಲ್ಲಿ ಕೇಂದ್ರದ ಮಾಲೀಕರೆಂಬ ಭಾವ ಉಂಟು ಮಾಡಲು ಪ್ರಯತ್ನಿಸಲಾಗುತ್ತಿದೆ. ಇದಕ್ಕೆ ಚಾಲನೆ ಕೊಡುವ ಕೆಲಸವನ್ನು ದಿನಾಂಕ ೩.೬. ೨೦೧೮ ರಂದು ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅರ್ಥಶಾಸ್ತ್ರಜ್ಞರಾದ ಪ್ರೊ. ಎಂ.ಎಸ್.ಶ್ರೀರಾಮ ಅವರು ಆಗಮಿಸಿದ್ದರು. ಅಲ್ಲದೇ ಶ್ರೀಮತಿ ಗೌರಿ ಶ್ರೀರಾಮ, ಮೈಸೂರಿನ ಶ್ರೀ ಓಂಕಾರ್, ಶ್ರೀಮತಿ ಸ್ನೇಹಾ, ಶ್ರೀ ರಾಮು, ಶ್ರೀ ಮಹದೇವಪ್ಪ ಅವರು ಇದ್ದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜನಾರ್ಧನ, ಸದಸ್ಯರಾದ ಶ್ರಿ ಎಚ್.ಎನ್.ರಮೇಶ, ಶ್ರೀ ಮನು ಅವರೂ ಸಹ ಇದ್ದರು.



ನೇಕಾರ ಮಹಿಳೆಗೆ ಉಡುಗೊರೆ ಕೊಡುತ್ತಿರುವ ಪ್ರೊ. ಶ್ರೀರಾಮ

ನೇಯ್ಗೆ ಕೇಂದ್ರ ಎಲ್ಲ ಮಹಿಳೆಯರೂ ಮೊದಲ ಸಲ ಜನಪದ ಸೇವಾ ಟ್ರಸ್ಟಿನ ಜನಪದ ಖಾದಿಯೊಂದಿಗಿನ ತಮ್ಮ ಅನುಭವವನ್ನು ಹಂಚಿಕೊಂಡರು. ಹೊಸ ಜೀವನ ದಾರಿಯಲ್ಲಿರುವ ಜನಪದ ಖಾದಿ ಕೇಂದ್ರಕ್ಕೆ ಬಂದ ಮೇಲೆ ತಮ್ಮ ವ್ಯಕ್ತಿತ್ವದಲ್ಲಿ ಆಗಿರುವ ಸುಧಾರಣೆಯನ್ನು

ಎಲ್ಲರೊಂದಿಗೆ ಹಂಚಿಕೊಂಡರು. ಅವರುಗಳು ನಾಟಕ ಮಾಡಿದ್ದು, ಕೋಲಾಟ ಕಲಿತದ್ದು, ಪ್ರವಾಸ ಹೋಗಿದ್ದು ಅವರ ಮೇಲೆ ಬಹಳ ಪ್ರಭಾವ ಬೀರಿರುವುದು ಅವರ ಮಾತಿನಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು.

ಕೆಲಸಗಾರರ ಅನುಭವದ ಮಾತಿನ ನಂತರ ಮಾತನಾಡಿದ ಶ್ರೀರಾಮ ಅವರು ಜಾಗತೀಕರಣದ ಹಿನ್ನೆಲೆಯಲ್ಲಿ ಅದನ್ನು ಎದುರಿಸಲು ಸಹಕಾರ ತತ್ವ ನಮ್ಮಲ್ಲಿರುವ ಪ್ರಮುಖವಾದ ಅಸ್ತ್ರ. ಅದನ್ನು ಸಮರ್ಥವಾಗಿ ನಡೆಸಲು ಸರ್ಕಾರಗಳು ಸಾಕಷ್ಟು ಬೆಂಬಲ ನೀಡುತ್ತಿಲ್ಲ ಮತ್ತು ಸಹಕಾರಿ ಸದಸ್ಯರಿಗೆ ಇರಬೇಕಾದ ಹೃದಯ ವೈಶಾಲ್ಯತೆ ಕಡಿಮೆ ಇದೆ ಅದರ ಕಡೆಗೆ ತರಬೇತಿ ಬಹಳ ಆಗಬೇಕಿದೆ ಎಂದರು. ಜೊತೆಗೆ ಯಾವುದೇ ಸಂಸ್ಥೆಯ ಬೆಳವಣಿಗೆಗೆ ಒಂದು ಮಿತಿ ಇರಬೇಕು, ಅದು ಮಿತಿ ಮೀರಿದರೆ ಅದರ ಆದರ್ಶಗಳು ಕಳೆದು ಹೋಗುತ್ತವೆ ಎಂದರು. ಗುಜರಾತಿನ ಅಮುಲ್ ಸಹಕಾರಿ ಸಂಸ್ಥೆಯ ವಿವರಗಳನ್ನು ನೀಡುತ್ತಾ ಅಳತೆ ಮೀರಿ ಬೆಳೆದ ಆ ಸಂಸ್ಥೆ ತನ್ನ ಉದ್ದೇಶದಿಂದ ದೂರ ಹೋಗುತ್ತಿರುವುದನ್ನು ಪ್ರಸ್ತಾಪಿಸಿದರು ಮತ್ತು ಎಲ್ಲ ಸಂಸ್ಥೆಯೂ ತನ್ನ ಬೆಳವಣಿಗೆಗೆ ಒಂದು ಮಿತಿಯನ್ನು ಹಾಕಿಕೊಳ್ಳಬೇಕೆಂದು ಹೇಳಿದರು. ಜನಪದ ಖಾದಿ ತನ್ನ ಕೆಲಸಗಾರರನ್ನು ಪಾಲುಗಾರರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವುದು ಅತ್ಯಂತ ಶ್ಲಾಘನೀಯ ಸಂಗತಿ ಎಂದರು.

ವಿಶೇಷ ದತ್ತು ಕೇಂದ್ರ

ರಂಜಿತಾ : ರಂಜಿತಾ ನಮ್ಮಲ್ಲಿಗೆ ಬಂದು ಇಂದಿಗೆ ೧ ವರ್ಷ ೧ ತಿಂಗಳು. ಅವಳಿಗೀಗ ಸುಮಾರು ೫ ವರ್ಷ. ಅವಳ ಬೌದ್ಧಿಕ ವಯಸ್ಸು ೩ ವರ್ಷ. ಅವಳು ಬೆಳೆದ ವಾತಾವರಣದಿಂದ ಹೀಗಾಗಿದ ಎನ್ನುತ್ತಾರೆ , ವೈದ್ಯರು. ರಂಜಿತಾಳ ತಾಯಿ ಬುದ್ಧಿಮಾಂದ್ಯ ಹೆಂಗಸು. ಮನೆಯಲ್ಲಿ ರಂಜಿತಾಳ ತಾತಾ ಮತ್ತು ಅಜ್ಜಿ. ಇಬ್ಬರಿಗೂ ವಯಸ್ಸಾಗಿದೆ. ಈ ಹಠಮಾರಿ ಮಗುವನ್ನು ನೋಡಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅವಳ ಹಠಮಾರಿತನವನ್ನು ಕಡಿಮೆ ಮಾಡಿಸಲು ಮೈಮೇಲೆಲ್ಲಾ ಬರೆಹಾಕಿದ್ದಾರೆ. ಇನ್ನು ನಮ್ಮಿಂದ ಅವಳನ್ನು ನೋಡಿಕೊಳ್ಳಲು ಸಾಧ್ಯವಿಲ್ಲ ಎಂದು ಅವರಿಗೆ ಅನಿಸಿತು. ಹಾಗಾಗಿ ಕಳೆದ ಜೂನ್ ನಲ್ಲಿ ಅವಳನ್ನು ನಮಗೆ ಒಪ್ಪಿಸಿ ಬಿಟ್ಟರು. ಆದರೆ ಐದು ವರ್ಷದ ಮಗುವಿಗೆ ಇರಬೇಕಾದ ಸಹಜ ವರ್ತನೆ ಈ ಮಗುವಿಗಿಲ್ಲ. ಶಬ್ದಗಳ ಪರಿಚಯವೇ ಅವಳಿಗಿಲ್ಲ. ಏನು ತಿನ್ನಲು ಕೊಟ್ಟರೂ ಅದನ್ನು ಅನ್ನವೆಂದೇ ಕರೆಯುತ್ತಾಳೆ. ತಲೆ ಕೂದಲು ಎಣ್ಣೆ ಕಾಣದೆ ಎಷ್ಟೋ ತಿಂಗಳು ಕಳೆದಿದೆ. ಮೂಗಿನಿಂದ ಸತತವಾಗಿ ನೀರು ಸುರಿಯುತ್ತಿದೆ. ಹರಿದಬಟ್ಟೆ, ಬಾಯಿಯಲ್ಲಿ ಸದಾ ಬಟ್ಟೆ ಹಾಕಿ ಕೊಂಡು ಅದನ್ನು ಕಡಿಯುವ ಅಭ್ಯಾಸ ಅವಳಿಗೆ. ಹಾಗೆಯೇ ಬಿಟ್ಟರೆ ಸಂಜೆಯ ಹೊತ್ತಿಗೆ ಒಂದು ಕರವಸ್ತ್ರದಷ್ಟು ಬಟ್ಟೆ ಅಕೆಯ ಹೊಟ್ಟೆ ಸೇರುತ್ತದೆ. ತಟ್ಟೆಯಲ್ಲಿರುವುದನ್ನು ಸರಿಯಾಗಿ ಬೆರಳಲ್ಲಿ ತೆಗೆದು ಬಾಯಿಗೆ ಹಾಕಲು ಬರುತ್ತಿಲ್ಲ. ಅವಳು ಊಟ ಮಾಡಿದ ಮೇಲೆ ಹೊಟ್ಟೆ ಒಳಗೆ ಹೋದದ್ದಕ್ಕಿಂತ ಮುಖದ ಮೇಲೆ ಮೆತ್ತಿಕೊಂಡದ್ದೇ ಜಾಸ್ತಿ ಇರುತ್ತಿತ್ತು. ಈಗ ಒಂದು ವರ್ಷ ಕಳೆದಿದೆ. ಬೇಕಾದಷ್ಟು ಮಾತು ಕಲಿತಿದ್ದಾಳೆ. ಸಾಕಷ್ಟು ಹೊಸ ಶಬ್ದಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದಾಳೆ. ತಾನು ತಿನ್ನುವ ಎಲ್ಲಾ ಪದಾರ್ಥಗಳ ಹೆಸರೂ ಅವಳಿಗೆ ಪರಿಚಯವಾಗಿದೆ. ಒಂದು ವರ್ಷದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಆದರೆ ಕ್ರಮಿಸಿಬೇಕಾದ ದೂರ ಬಹಳವಿದೆ. ಅಂದಿಗೂ ಇಂದಿಗೂ ಸುಧಾರಣೆ ಆಗುತ್ತಿರುವ ರಂಜಿತಾಳನ್ನು ನೋಡಿದಾಗ ಧನ್ಯತೆಯ ಭಾವವೊಂದು ಮೂಡಿ ಹೋಗುತ್ತದೆ.

ತಿಂಗಳ ಕವನಕ್ಕೊಂದು ಟಿಪ್ಪಣಿ

ಆಧುನಿಕ ಕನ್ನಡ ಕಾವ್ಯಲೋಕದ 'ಋತುರಾಜ' ಎಂದು ಗುರುತಿಸಬಹುದಾದ ಕವಿ ಕೆ.ಎಸ್. ನರಸಿಂಹಸ್ವಾಮಿಯವರು 'ಮೈಸೂರ ಮಲ್ಲಿಗೆ' ಎಂಬ ಮೊದಲ ಸಂಕಲನದಿಂದಲೇ ಓದುಗರ ಹೃದಯಗಳಲ್ಲಿ ಶಾಶ್ವತಸ್ಥಾನ ಗಳಿಸಿಕೊಂಡವರು. ನವೋದಯ ಕಾಲದ ರಮ್ಯ ಶೈಲಿಯ ದಾರಿಯನ್ನು ಹಿಡಿದು ಕಾವ್ಯಯಾತ್ರೆಯನ್ನು ಪ್ರಾರಂಭಿಸಿದ ಕೆ.ಎಸ್.ನ. ಒಲುಮೆಯ ಕಾವ್ಯಕ್ಕಷ್ಟೇ ಸೀಮಿತವಾಗದೇ, ನವ್ಯ-ನವ್ಯೋತ್ತರ ಮಾರ್ಗಗಳಲ್ಲಿ ತಮ್ಮ ಹೆಜ್ಜೆಗುರುತುಗಳನ್ನು ಬಿಟ್ಟುಹೋಗಿದ್ದಾರೆ.

ಕೆ.ಎಸ್.ನ. ಅವರ ಆರಂಭದ ಕವಿತೆಗಳಲ್ಲಿ ಶಬ್ದಚಿತ್ರಗಳ ಮೆರವಣಿಗೆಯೇ ನಡೆಯುತ್ತದೆ. ಚಿತ್ತಾರಗಳ ಮೂಲಕವೇ ಅವರು ಸನ್ನಿವೇಶವೊಂದನ್ನು ಹೇಗೆ ದೃಶ್ಯವತ್ತಾಗಿ ಕಟ್ಟಿಕೊಡಬಲ್ಲರೆಂಬುದಕ್ಕೆ ಅವರ 'ಮನೆಗೆ ಬಂದ ಹೆಣ್ಣು' ಕವನವನ್ನು ಪರಿಶೀಲಿಸಬಹುದು. ಮೂರೇ ಚರಣಗಳಿರುವ ಈ ಪುಟ್ಟ ಕವಿತೆ ಭಾವಗೀತೆಯ ಸಂಕ್ಷಿಪ್ತತೆ, ಧ್ವನಿರಮ್ಯತೆ ಮತ್ತು ಗೇಯತೆ ಎಂಬ ಮೂರು ಪ್ರಮುಖ ಲಕ್ಷಣಗಳನ್ನು ಗರ್ಭೀಕರಿಸಿಕೊಂಡಿರುವ ಅತ್ಯಂತ ಚೆಲುವಾದ ರಚನೆ. ಹಿರಿಯರು ವ್ಯವಸ್ಥೆ ಮಾಡಿದ್ದ ಸಾಂಪ್ರದಾಯಿಕ ವಿವಾಹಕ್ಕೆ ಒಳಗಾಗಿ ಆಗಷ್ಟೇ ತೌರಿನಿಂದ ಗಂಡನ ಮನೆಗೆ ಬಂದ ಮುಗ್ಧ ಹೆಣ್ಣುಮಗಳೇ ಇಲ್ಲಿನ ನಾಯಕಿ. ಹೊಸ ಪರಿಸರಕ್ಕೆ ಹೊಂದಿಕೊಳ್ಳುವ ಸಂದರ್ಭದಲ್ಲಿ ಆಕೆಯಲ್ಲಾಗುವ ಭಾವವ್ಯತ್ಯಾಸಗಳೇ ಕವಿತೆಯ ವಸ್ತು.

ಆತ್ಮೀಯವಾದತೌರನ್ನು ಬಿಟ್ಟು ಸಂಪೂರ್ಣ ಅಪರಿಚಿತ ಪರಿಸರಕ್ಕೆ ಬಂದಿರುವ ಆ ಹೆಣ್ಣುಮಗಳಿಗೆ ದುಃಖ ಉಕ್ಕುಕ್ಕಿ ಬರುತ್ತಿದೆಯಾದರೂ ಆಕೆ ಅದನ್ನು ಕಷ್ಟಪಟ್ಟು ನಿಯಂತ್ರಿಸುತ್ತಿದ್ದಾಳೆ; ಸಂಪೂರ್ಣ ಮೌನಿಯಾಗಿದ್ದಾಳೆ. 'ಅಳುವೇ ತುಟಿಗೆ ಬಂದಂತೆ' ಅವಳ ಸ್ಥಿತಿ. 'ಬಿಡಿಹೂವ ಮುಡಿದಿ'ರುವ ಹೆಣ್ಣಿನಂತೆ ಆಕೆ ನಿರುತ್ಸಾಹಿಯಾಗಿದ್ದಾಳೆ. ಮದುವೆಯ ಸಡಗರ ಸಂಭ್ರಮಗಳು ಹಿಂದಕ್ಕೆ ಸರಿದು 'ಜೀವದಲಿ ಜಾತ್ರೆ ಮುಗಿದಂತೆ' ಶೂನ್ಯಭಾವ ಅವಳನ್ನು ಆವರಿಸಿದೆ.

ಆದರೆ ಎರಡನೆಯ ದಿನ (ಅಥವಾ ಸ್ವಲ್ಪ ಸಮಯದಲ್ಲಿ) ಆಕೆಯಲ್ಲಿ ತುಸು ಉತ್ಸಾಹ, ಲವಲವಿಕೆ ಕಾಣಿಸಿಕೊಳ್ಳುತ್ತಿವೆ. ಈಗ ಹಿಂದಿನಷ್ಟು 'ಇಳಿಮುಖವಿಲ್ಲ'. ದೂರಸರಿದಿದ್ದ ನಗುಮೂಗುತಿಯ ಹೊಳಪಿನಂತೆ ಒಮ್ಮೊಮ್ಮೆ ಮಿಂಚುತ್ತಿದೆ. ಆಗೊಮ್ಮೆ ಈಗೊಮ್ಮೆ ಆಡುವ ಮಾತು 'ನೀರೊಳಗೆ ವೀಣೆ ಮಿಡಿದಂತೆ' ಅಸ್ಪಷ್ಟವಾಗಿದೆ.

ಕ್ರಮೇಣ ಆಕೆ ಬದಲಾದ ಪರಿಸರಕ್ಕೆ ಹೊಂದಿಕೊಂಡು, ಪ್ರೀತಿ, ಆತ್ಮೀಯತೆಗಳನ್ನು ಗಿಟ್ಟಿಸಿಕೊಂಡು ಉತ್ಸಾಹದ ಮೂರ್ತಿಯಾಗಿದ್ದಾಳೆ. ಒಂಟಿ ಹೂವಿನ ಜಾಗದಲ್ಲಿ 'ದಂಡೆಹೂ' ಕಾಣಿಸಿಕೊಂಡಿದೆ. 'ಹೂವಿಗೂ ಜೀವ ಬಂದಂತೆ' ಉಲ್ಲಸಿತಳಾಗಿರುವ ಆ ನವವಧುವಿನ ಮನಸ್ಥಿತಿಯನ್ನು ಕವಿ 'ಬಿರುಬಾನಿಗೂ ಹುಣ್ಣಿಮೆಯ ಹಾಲು ಹರಿದಂತೆ' ಎಂದು ಬಣ್ಣಿಸುತ್ತಾರೆ. ಓದಿದಷ್ಟೂ ಖುಷಿ ಕೊಡುವ ಈ ಕವಿತೆ ಒಂದು ಪರಿಪೂರ್ಣ ರಚನೆ! •

– ಎನ್. ಶ್ರೀನಿವಾಸ ಉಡುಪ



೧೦೦ ವರ್ಷದ ಹಿಂದೆ ಗಾಂಧಿ

ತಮ್ಮನ್ನು ಆಶ್ರಮದಲ್ಲಿ ಬಿಟ್ಟು ಚಳುವಳಿ ಕಟ್ಟುವುದಕ್ಕಾಗಿ ಸದಾ ಆಶ್ರಮದ ಹೊರಗಿರುವ ಗಾಂಧಿಯ ಬಗ್ಗೆ ಕಸ್ತೂರ ಬಾ ಒಂದಿಷ್ಟು ಬೇಸರಗೊಂಡಿದ್ದಾರೆ. ಅವರ ಜೊತೆಯಲ್ಲಿ ಗಂಡನೂ ಇಲ್ಲ ಯಾವ ಮಕ್ಕಳು ಇಲ್ಲ. ಅವರೊಬ್ಬರೇ ಇತರ ಆಶ್ರಮವಾಸಿಗಳೊಂದಿಗಿದ್ದಾರೆ. ಕಸ್ತೂರ್ ಬಾ ಅವರ ಬೇಸರವನ್ನು ಅರಿತ ಗಾಂಧಿ ಜುಲೈ ೨೯, ೧೯೧೮ ರಂದು ನದಿಯಾದ್ ನಿಂದ ಕಸ್ತೂರ ಬಾ ಗೆ ಬರೆದ ಪತ್ರ ಹೀಗಿದೆ:

ಪ್ರೀತಿಯ ಕಸ್ತೂರ್,

ನೀನು ನನ್ನೊಂದಿಗೆ ಇರಲು ಇಚ್ಛಿಸುತ್ತಿದ್ದೀಯಾ ಎಂಬುದು ಗೊತ್ತಿದೆ. ಆದರೆ ನಾವಿಬ್ಬರೂ ನಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವುದು ಸೂಕ್ತವೆನಿಸುತ್ತಿದೆ. ನೀನು ಎಲ್ಲಿದ್ದೇಯೋ ಅಲ್ಲೇ ಇರುವುದು ವಾಸಿ. ಆಶ್ರಮದಲ್ಲಿರುವ ಮಕ್ಕಳನ್ನು ನಿನ್ನ ಮಕ್ಕಳು ಎಂದು ನೋಡಿಕೊಳ್ಳತೊಡಗಿದರೆ, ನೀನು ಬೇಗಲೆ ನಿನ್ನ ಮಕ್ಕಳ ಗೈರನ್ನು ಮರೆಯುತ್ತಿಯಾ. ವಯಸ್ಸಾಗುತ್ತಾ ಹೋದಂತೆ ಒಬ್ಬರು ಮಾಡಬಹುದಾದ ಕನಿಷ್ಟ ಕಾರ್ಯ ಇದು. ಬೇರೆಯವರನ್ನು ಪ್ರೀತಿಸಿ ಅವರ ಸೇವೆಯಲ್ಲಿ ತೊಡಗಿದರೆ ಒಳಗಿನಿಂದ ಸಂತೋಷ ಉಕ್ಕಿಬರುತ್ತದೆ. ಬೆಳಿಗ್ಗೆ ಎದ್ದ ಕೂಡಲೆ ಆಶ್ರಮದಲ್ಲಿ ಯಾರು ಆರೋಗ್ಯವಾಗಿಲ್ಲ ಅವರನ್ನು ಹೋಗಿ ನೋಡುವುದನ್ನು ಅಭ್ಯಾಸ ಮಾಡಿಕೋ. ಅವರಿಗೆ ಬೇಕಾದ ವಿಶೇಷ ಅಡುಗೆಯನ್ನು ತಯಾರಿಸು. ಮಹಾರಾಷ್ಟ್ರದಿಂದ ಬಂದಿರುವ ಆ ಹೆಣ್ಣುಮಕ್ಕಳನ್ನು ಆಗಾಗ ಮಾತನಾಡಿಸುತ್ತಿರು, ಅವರ ಮಕ್ಕಳನ್ನು ನಡಿಗೆಗೆ ಕರೆದುಕೊಂಡು ಹೋಗಿ ಅವು ಸಂತೋಷವಾಗಿರುವಂತೆ ನೋಡಿಕೋ. ಅವರಲ್ಲಿ ತಾವು ಅಪರಿಚಿರು ಎಂಬ ಭಾವನೆ ಬರಬಾರದು.

ನಿರ್ಮಲಾಳೊಂದಿಗೆ ಪ್ರಯೋಜನಕ್ಕೆ ಬರುವ ಮಾತನಾಡುತ್ತಿರು. ಮುಖ್ಯವಾಗಿ ಧರ್ಮಕ್ಕೆ ಸಂಬಂಧಿಸಿದ ವಿಷಯ ಮಾತನಾಡು. ಅವಳಿಗೆ ಜೋರಾಗಿ ಗೀತೆಯನ್ನು ಓದಲು ಹೇಳು. ನೀನು ಅದನ್ನು ಕೇಳಿಸಿಕೋ. ನೀನು ಬೇರೆಯವರ ಸೇವೆಯಲ್ಲಿ ಚಟುವಟಿಕೆಯಿಂದ ಇದ್ದರೆ, ಮನಸ್ಸು ಯಾವಾಗಲೂ ಸಂತೋಷದಿಂದಿರುತ್ತದೆ.

ತಿಂಗಳ ಚಿತ್ರ



ತಿಂಗಳ ಚಿತ್ರ : ನೇಯ್ಗೆ ಕೇಂದ್ರದ ಕೆಲಸಗಾರರು ಪ್ರೊ. ಎಂ.ಎಸ್. ಶ್ರೀರಾಮ ಅವರ ಸಂಗಡ
ಜನಪದ ಚಿತ್ರ ಸಂಗ್ರಹದಿಂದ

Janapada Vichara *Kannada Monthly Digest*
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651584, 9739743237

KA/SK/MND/470/2018-2020
Regd No : KAR/KAN/2000/3820

ಜನಪದ ವಿಚಾರ ಚಂದಾ ವಿವರ
ವಾರ್ಷಿಕ ಚಂದಾ ; ರೂ ೨೦೦.೦೦
ಕಳುಹಿಸಿದ ಬೇಕಾದ ವಿಳಾಸ : ಜನಪದ ಸೇವಾ ಟ್ರಸ್ಟ್, ಮೇಲುಕೋಟೆ ೫೭೧೪೩೧, ಮಂಡ್ಯ ಜಿಲ್ಲೆ.
ಬ್ಯಾಂಕ್ ಮೂಲಕ ಕಳುಹಿಸುವವರಿಗೆ : ಬ್ಯಾಂಕ್: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೇಲುಕೋಟೆ ಶಾಖೆ.
ಉಳಿತಾಯ ಖಾತೆ ಸಂಖ್ಯೆ ೫೪೦೫೪೮೯೧೭೬೩ ಐ ಎಫ್ ಎಸ್ ಸಿ : **SBIN0040042**